ವಿಶ್ವವಾಣಿ
ವಿಶ್ವಾಸವೇ ವಿಶ್ವ

ಭಾರತ ಶುಭಾರಂಭ: ಪಾಕ್‌ಗೆ ಸೋಲು

ಅಸಂಖ್ಯ ಭಾರತೀಯರ ವಿರೋಧದ ನಡುವೆಯೂ ದುಬೈ ಕ್ರೀಡಾಂಗಣದಲ್ಲಿ ನಡೆದ ಏಷ್ಯಾಕಪ್ ಟಿ 20 ಕ್ರಿಕೆಟ್ ಪಂದ್ಯದಲ್ಲಿ ಟೀಮ್ ಇಂಡಿಯಾ ಪಾಕಿಸ್ತಾನವನ್ನು ಎದುರಿಸಿದ್ದು, ಕುಲದೀಪ್ ಯಾದವ್ ಅವರ 3 ವಿಕೆಟ್‌ಗಳ ಸಾಧನೆಯೊಂದಿಗೆ ಭಾರತ 7 ವಿಕೆಟ್‌ಗಳ ಸುಲಭ ಜಯ ಸಾಧಿಸಿದೆ.

ಕರ್ನಾಟಕ ಸರ್ಕಾರ

ಮತಪತ್ರದಲ್ಲಿ ಅಡಗಿದೆ ಪ್ರಜಾಪ್ರಭುತ್ವದ ಶಕ್ತಿ

ಅಂತಾರಾಷ್ಟ್ರೀಯ
ಪ್ರಜಾಪ್ರಭುತ್ವ ದಿನ
2025

ಕರ್ನಾಟಕದ ನವ ನಿರ್ಮಾಣಕ್ಕೆ
ಗ್ಯಾರಂಟಿ ಸರ್ಕಾರ

ಭಾರತದ ಸಂವಿಧಾನದಲ್ಲಿ ಪ್ರತಿಪಾದಿಸಿರುವ ಪ್ರಜಾಪ್ರಭುತ್ವದ ತತ್ವಗಳ ಕುರಿತು ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಡಾ. ಹೆಚ್.ಸಿ.ಮಹದೇವಪ್ಪ ಅವರು ಮಾತನಾಡುತ್ತಿರುವುದು

ಜಿಲ್ಲಾ ಮಟ್ಟದ ಸೈಕಲ್ ರ‍್ಯಾಲಿ | ರಾಜ್ಯ ಮಟ್ಟದ ಬೈಕ್ ರ‍್ಯಾಲಿ | ಪ್ರಜಾಪ್ರಭುತ್ವ ರೇಡಿಯೋ ಕಾರ್ಯಕ್ರಮ | ಶಾಲಾ ಮಕ್ಕಳಿಗಾಗಿ ಚಿತ್ರಕಲೆ ಸ್ಪರ್ಧೆ | ಛಾಯಾಗ್ರಹಣ ಸ್ಪರ್ಧೆ
ಭಾಷಣ ಸ್ಪರ್ಧೆ | 1,000 ಪ್ರತಿಭಾವಂತ ಕೆಆರ್‌ಇಐಎಸ್ ಪಿಯು ವಿದ್ಯಾರ್ಥಿಗಳಿಗೆ ₹6 ಕೋಟಿ ಡಿಬಿಟಿ ಮೂಲಕ ಪ್ರೋತ್ಸಾಹಧನ

ಸಮಾಜ ಕಲ್ಯಾಣ ಇಲಾಖೆ | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | ನಗರಾಭಿವೃದ್ಧಿ ಇಲಾಖೆ | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ | ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಕಾರ್ಮಿಕ ಇಲಾಖೆ | ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ | ಉನ್ನತ ಶಿಕ್ಷಣ ಇಲಾಖೆ | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ
ಗ್ರೇಟರ್ ಬೆಂಗಳೂರು ಪ್ರಾಧಿಕಾರ | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ | ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ | ಕರ್ನಾಟಕ ಹಾಲು ಮಹಾಮಂಡಳಿ

ಸಮಾಚಾರ ಸಣ್ಣದಲ್ಲ

ಲಿಂಗರಾಜ ಕುರ್ತಕೋಟಿ ನಿಧನ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ. ಡಾ.ಮಹೇಶ ಜೋಶಿಯವರ ಭಾವ ಲಿಂಗರಾಜ ಕುರ್ತಕೋಟಿಯವರು ತಮ್ಮ ತೊಂಬತ್ತನೆಯ ವಯಸ್ಸಿನಲ್ಲಿ ವಯೋಸಹಜ ಕಾರಣಗಳಿಂದ ಭಾನುವಾರ ಬೆಳಗ್ಗೆ ಕೊನೆಯುಸಿರು ಎಳೆದಿದ್ದಾರೆ. ಕೆನರಾ ಬ್ಯಾಂಕ್‌ನ ವಲಯ ನಿಬಂಧಕರಾಗಿ ಸೇವೆಸಲ್ಲಿಸಿ ದ್ದರು. ಒಬ್ಬ ಮಗ ಮತ್ತು ನಾಲ್ಕು ಹೆಣ್ಣು ಮಕ್ಕಳು ಮತ್ತು ಅಪಾರ ಬಂಧು ವರ್ಗದವರನ್ನು ಲಿಂಗರಾಜ ಕುರ್ತುಕೋಟಿಯವರು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ ಚಾಮರಾಜ ಪೇಟೆ ಚಿತಾಗಾರದಲ್ಲಿ ನಡೆಯಿತು. ಹಿರಿಯ ವಿಮರ್ಶಕ ಕೀರ್ತಿನಾಥ ಕುರ್ತುಕೋಟಿಯವರ ಹತ್ತಿರದ ಸಂಬಂಧಿಯಾಗಿದ್ದ ಲಿಂಗರಾಜ ಕುರ್ತುಕೋಟಿ ಯವರು ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ಅಪಾರ ಆಸಕ್ತಿಯನ್ನು ಹೊಂದಿದ್ದು ಕೀರ್ತಿಯವರ ಬರಹದ ಹಿಂದಿನ ಶಕ್ತಿಯಾಗಿದ್ದರು. ಅನೇಕ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿ ಯಶಸ್ಸನ್ನು ಪಡೆದಿದ್ದರು.

ರಾಜ್ಯದಲ್ಲಿ ಸಾರಿಗೆ ಇಲಾಖೆ, ಬೈಕ್ ಟ್ಯಾಕ್ಸಿ ಚಾಲಕರ ನಡುವೆ ಜಟಾಪಟಿ

22ಕ್ಕೆ ಹೈಕೋರ್ಟ್‌ನಲ್ಲಿ ಬೈಕ್ ಟ್ಯಾಕ್ಸಿ ಭವಿಷ್ಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಸಾರಿಗೆ ಇಲಾಖೆ ಹಾಗೂ ಬೈಕ್ ಟ್ಯಾಕ್ಸಿ ಚಾಲಕರ ಜಟಾಪಟಿ ಮುಂದುವರೆದಿದ್ದು, ಇದೇ 22ಕ್ಕೆ ಬೈಕ್ ಟ್ಯಾಕ್ಸಿ ಭವಿಷ್ಯ ನಿರ್ಧಾರವಾಗಲಿದೆ.

ರಾಜ್ಯದಲ್ಲಿ ಬೈಕ್ ಟ್ಯಾಕ್ಸಿ ಸೇವೆ ಕಾರ್ಯಾಚರಣೆ ಬಗ್ಗೆ ತನ್ನ ನಿಲುವು ತಿಳಿಸಲು ಹೈಕೋರ್ಟ್ ಸರಕಾರಕ್ಕೆ ಸೂಚನೆ ನೀಡಿದ ಹಿನ್ನೆಲೆ ಬೈಕ್ ಟ್ಯಾಕ್ಸಿ ಸಾಧಕ-ಭಾದಕಗಳ ಬಗ್ಗೆ ವರದಿ ಸಲ್ಲಿಸಲು ಸರಕಾರ ಉನ್ನತ ಮಟ್ಟದ ಸಮಿತಿ ರಚನೆ ಮಾಡಿದೆ. ಈ ಕಮಿಟಿಯನ್ನು ಸರಕಾರದ ಸಾರಿಗೆ ಇಲಾಖೆಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದು, ಒಟ್ಟು 11 ಜನ ಈ ಕಮಿಟಿಯ ಸದಸ್ಯರಿದ್ದಾರೆ. ಈ ಕಮಿಟಿಯಲ್ಲಿ ಬೆಂಗಳೂರು ನಗರ ಭೂಸಾರಿಗೆ ಅಭಿವೃದ್ಧಿ ಇಲಾಖೆ (ಡಲ್ಟ್)ನ ಆಯುಕ್ತರು, ಕಾರ್ಮಿಕ ಇಲಾಖೆ ಆಯುಕ್ತರು, ಸಾರಿಗೆ ಹಾಗೂ ರಸ್ತೆ ಸುರಕ್ಷತೆ ಇಲಾಖೆಯ ಆಯುಕ್ತರು, ಬಿಎಂಟಿಸಿ ಎಂಡಿ, ಬೆಂಗಳೂರು ಜಂಟಿ ಸಂಚಾರ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಜಂಟಿ ಪೊಲೀಸ್ ಆಯುಕ್ತರು, ಬಿಎಂಆರ್‌ಸಿಎಲ್‌ನ ಹಿರಿಯ ಪ್ರತಿನಿಧಿ, ಬೃಹತ್ ಬೆಂಗಳೂರು ಪ್ರಾಧಿಕಾರದ ಹಿರಿಯ ಪ್ರತಿನಿಧಿ, ರಾಜ್ಯ

ಮಾಲಿನ್ಯ ನಿಯಂತ್ರಣ ಮಂಡಳಿಯ ಹಿರಿಯ ಅಧಿಕಾರಿ, ಸಾರಿಗೆ ಇಲಾಖೆಯ ಆಯುಕ್ತರು ಹಾಗೂ ಕಾರ್ಯದರ್ಶಿಗಳು ಸೇರಿದಂತೆ ಒಟ್ಟು 11 ಜನರ ಕಮಿಟಿ ರಚಿಸಲಾಗಿದೆ.

ಈ ಕಮಿಟಿಯು ಬೈಕ್ ಟ್ಯಾಕ್ಸಿ ಕಾರ್ಯಾಚರಣೆಯ ಸಾಧಕ-ಭಾದಕಗಳ ಕುರಿತು ಅಧ್ಯಯನ ಮಾಡಿ ಸರಕಾರಕ್ಕೆ ವರದಿ ಸಲ್ಲಿಸಲಿದ್ದು, ಈ ವರದಿಯ ಆಧಾರದ ಮೇಲೆ ಸಾರಿಗೆ ಇಲಾಖೆ ಅಥವಾ ಸರಕಾರ ಸೆಪ್ಟೆಂಬರ್ 22ರಂದು ರಾಜ್ಯದಲ್ಲಿ ಬೈಕ್ ಟ್ಯಾಕ್ಸಿ ಕಾರ್ಯಾಚರಣೆ ಬಗ್ಗೆ ನಿಯಮ ರೂಪಿಸಿ ತನ್ನ ನಿಲುವು ಪ್ರಕಟಿಸಲಿದೆ. ಒಂದು ಅಂದಾಜಿನಂತೆ ಬೆಂಗಳೂರಲ್ಲಿ ಸುಮಾರು 1.20 ಲಕ್ಷ ಖಾಸಗಿ ಬೈಕ್ ಸವಾರರು ಬೈಕ್ ಟ್ಯಾಕ್ಸಿ ಮಾಡುತ್ತಿದ್ದಾರೆ.

ಕಮಿಟಿಯಲ್ಲಿ ಯಾರಿದ್ದಾರೆ?

- ಬೆಂಗಳೂರು ನಗರ ಭೂ ಸಾರಿಗೆ ಅಭಿವೃದ್ಧಿ ಇಲಾಖೆ ಆಯುಕ್ತರು
- ಕಾರ್ಮಿಕ ಇಲಾಖೆ ಆಯುಕ್ತರು
- ಸಾರಿಗೆ ಹಾಗೂ ರಸ್ತೆ ಸುರಕ್ಷತೆ ಇಲಾಖೆಯ ಆಯುಕ್ತರು
- ಬಿಎಂಟಿಸಿ ಎಂಡಿ
- ಬೆಂಗಳೂರು ಜಂಟಿ ಸಂಚಾರ ಪೊಲೀಸ್ ಆಯುಕ್ತರು
- ಬೆಂಗಳೂರು ನಗರ ಜಂಟಿ ಪೊಲೀಸ್ ಆಯುಕ್ತರು
- ಬಿಎಂಆರ್‌ಸಿಎಲ್‌ನ ಹಿರಿಯ ಪ್ರತಿನಿಧಿ
- ಬೃಹತ್ ಬೆಂಗಳೂರು ಪ್ರಾಧಿಕಾರದ ಹಿರಿಯ ಪ್ರತಿನಿಧಿ
- ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಹಿರಿಯ ಅಧಿಕಾರಿ
- ಸಾರಿಗೆ ಇಲಾಖೆಯ ಆಯುಕ್ತರು ಹಾಗೂ ಕಾರ್ಯದರ್ಶಿಗಳು

ತನಿಖೆಗೆ ಸೂಚಿಸಲು ರಾಜ್ಯಪಾಲರಿಗೆ ರೈತ ಸಂಘ ದೂರು

ಅಬಕಾರಿ ಕಚೇರಿಯಲ್ಲಿ ಭ್ರಷ್ಟಾಚಾರ?

ಬೆಂಗಳೂರು: ಮಂಡ್ಯದ ಅಬಕಾರಿ ಕಚೇರಿಯಲ್ಲಿ ಭಾರಿ ಭ್ರಷ್ಟಾಚಾರ ನಡೆಯುತ್ತಿರುವ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಸರಕಾರಕ್ಕೆ ಸೂಚಿಸುವಂತೆ ಕೋರಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್ ಅವರಿಗೆ, ಕರ್ನಾಟಕ ರಾಜ್ಯ ರೈತ ಸಂಘ ದೂರು ಕೊಟ್ಟಿದೆ.

ಮಂಡ್ಯ ಜಿಲ್ಲೆಯ ಮಂಡ್ಯ ನಗರದ ಕೇಂದ್ರ ಸ್ಥಾನದಲ್ಲಿರುವ ಅಬಕಾರಿ ಕಚೇರಿಗಳಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆಯುತ್ತಿದೆ. ಅಬಕಾರಿ ಮಂತ್ರಿ, ಜಿಲ್ಲಾ ಉಸ್ತುವಾರಿ ಸಚಿವ, ಸಿಎಂ ಮತ್ತು ಇಲಾಖೆ ಆಯುಕ್ತ ಹೆಸರಿನಲ್ಲಿ ಅಧಿಕಾರಿಗಳು, ಮದ್ಯದಂಗಡಿಗಳಲ್ಲಿ ಹಪ್ತಾ ವಸೂಲಿ ಮಾಡುತ್ತಿದ್ದಾರೆ. ಹೊಸದಾಗಿ ಹೋಟೆಲ್ ಮತ್ತು ವಸತಿ ಗೃಹ (ಸಿಎಲ್-7) ಪರವಾನಗಿ ಮಂಜೂರಾತಿ ಕೊಡಲು ಲಂಚ ನಿಗದಿ ಮಾಡುತ್ತಿದ್ದಾರೆ. ಸಿಎಲ್7 ಲೈಸೆನ್ಸ್ ನೀಡಲು 60 ಲಕ್ಷ ರು.ಬೇಡಿಕೆ ಇಟ್ಟಿರುವ ಮಂಡ್ಯ ಅಬಕಾರಿ ಉಪ ಆಯುಕ್ತ ವಿರುದ್ಧ ಈಗಾಗಲೇ ಕೆಲವರು ಲೋಕಾಯುಕ್ತಕ್ಕೆ ದೂರು ಕೊಟ್ಟಿದ್ದಾರೆ ಎಂದು ರಾಜ್ಯಪಾಲರಿಗೆ ಕೊಟ್ಟಿರುವ ದೂರಿನಲ್ಲಿ ಸಂಘದ ಅಧ್ಯಕ್ಷ ಇ.ಎನ್.ಕೃಷ್ಣೇಗೌಡ ದೂರಿದ್ದಾರೆ. ಕಾಂಗ್ರೆಸ್ ಪಕ್ಷದವರನ್ನು ಹೊರತುಪಡಿಸಿ ಬೇರೆ ಪಕ್ಷದ ಅರ್ಜಿದಾರರಿಗೆ ಲೈಸೆನ್ಸ್ ನೀಡುತ್ತಿಲ್ಲ. ಲೈಸೆನ್‌ಗೆ ಅರ್ಜಿ ಸಲ್ಲಿಸಿದ್ದರೆ ಜಿಲ್ಲಾ ಉಸ್ತುವಾರಿ ಮಂತ್ರಿ ಭೇಟಿ ಮಾಡುವಂತೆ ಅರ್ಜಿದಾರರಿಗೆ ಅಬಕಾರಿ ಅಧಿಕಾರಿಗಳು ಹೇಳುತ್ತಾರೆ. ಆಡಿಯೊ ಸಹ ಮಾಧ್ಯಮಗಳಲ್ಲಿ ಪ್ರಸಾರವಾಗಿದೆ.

ಅಧಿಕಾರಿ ವಿರುದ್ಧ ಲೋಕಾಯುಕ್ತಕ್ಕೆ ದೂರು

ಸಿಎಲ್7 ಪರವಾನಗಿ ಮಂಜೂರಾತಿಗೆ 60 ಲಕ್ಷ ರು. ಲಂಚಕ್ಕೆ ಬೇಡಿಕೆ ಇಟ್ಟಿರುವ ಮಂಡ್ಯ ಅಬಕಾರಿ ಅಧಿಕಾರಿ ವಿರುದ್ಧ ಲೋಕಾಯುಕ್ತಕ್ಕೆ ಅರ್ಜಿದಾರ ಎ.ಎಂ. ಸುಂದರೇಶ ದೂರು ಕೊಟ್ಟಿದ್ದಾರೆ. ಜತೆಗೆ, ಲಂಚದ ಬಗ್ಗೆ ನಾಗಶಯನ ಮಾತನಾಡಿರುವ ಆಡಿಯೊ ಸಾಕ್ಷಿಯಾಗಿ ಲೋಕಾಯುಕ್ತಕ್ಕೆ ಅಧಿಕಾರಿ ಗಳಿಗೆ ಸುಂದರೇಶ ನೀಡಿದ್ದಾರೆ. ಅರ್ಜಿ ಸರಿ ಇದ್ದರೂ ಜೆಡಿಎಸ್ ಕಾರ್ಯಕರ್ತ ಆಗಿರುವ ಕಾರಣ ಜಿಲ್ಲಾ ಉಸ್ತುವಾರಿ ಮಂತ್ರಿ, ಸಿಎಂ ಅವರನ್ನು ಭೇಟಿ ಮಾಡಬೇಕೆಂದು ಅಧಿಕಾರಿ ಹೇಳುತ್ತಾರೆ. ಹಾಗಾಗಿ, ಈ ಸಂಬಂಧ ಪ್ರಕರಣ ದಾಖಲಿಸಿ ಕ್ರಮಕೈಗೊಳ್ಳುವಂತೆ ದೂರಿನಲ್ಲಿ ಸುಂದರೇಶ ಮನವಿ ಮಾಡಿದ್ದಾರೆ.

ಅವಾಚ್ಯ ನಿಂದನೆ ಪ್ರಶ್ನಿಸಿದ್ದಕ್ಕೆ ಹಲ್ಲೆ: ವ್ಯಕ್ತಿ ಸಾವು

ಬೆಂಗಳೂರು: ಅವಾಚ್ಯ ಪದಗಳಿಂದ ನಿಂದಿಸಿದ್ದನ್ನು ಪ್ರಶ್ನಿಸಿದ್ದಕ್ಕೆ ಯುವಕ ನೊಬ್ಬನ ಮೇಲೆ ಆರೋಪಿ ಹಲ್ಲೆಗೈದಿದ್ದ ರಿಂದಾಗಿ ಆತ ಸಾವಿಗೀಡಾಗಿರುವ ಘಟನೆ ನಗರದಲ್ಲಿ ನಡೆದಿದೆ.

ಅಪರಾಧ ಸುದ್ದಿಗಳು

ಬಿಹಾರದ ಬೇಗುಸರಾಯ್ ಮೂಲದ ಕಾರ್ಮಿಕ ಭೀಮ್ ಕುಮಾರ್ (25) ಮೃತರು. ಮೃತನ ಸ್ನೇಹಿತರ ದೂರಿನನ್ವಯ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾ ಗಿದ್ದು, ಆರೋಪಿ ಸಲ್ಮಾನ್‌ಗಾಗಿ ಹುಡುಕಾಟ ನಡೆಸುತ್ತಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಅರೆಕೆರೆ ಬಳಿ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ ಬಂದಿದ್ದ ಭೀಮ್ ಕುಮಾರ್ ಸ್ನೇಹಿತರೊಂದಿಗೆ ಮೈಕೋ ಲೇಔಟ್ ವ್ಯಾಪ್ತಿಯಲ್ಲಿ ವಾಸವಿದ್ದ. ಸೆ.7ರಂದು ಭೀಮ್ ಕುಮಾರ್ ಮತ್ತು ಆತನ ಸ್ನೇಹಿತರು ಅರೆಕೆರೆ ಬಳಿ ಪಾನಿಪುರಿ ತಿನ್ನುತ್ತಾ ನಿಂತಿದ್ದರು. ಈ ವೇಳೆ ಅಲ್ಲಿಯೇ ಇದ್ದ ಸಲ್ಮಾನ್ ಎಂಬಾತ ಭೀಮ್ ಕುಮಾರ್ ಮತ್ತವನ ಸ್ನೇಹಿತರನ್ನು ಅವಾಚ್ಯ ಶಬ್ದ ಗಳಿಂದ ನಿಂದಿಸಿದ್ದಾನೆ. ಇದನ್ನು ಭೀಮ್ ಕುಮಾರ್ ಪ್ರಶ್ನಿಸಿದಾಗ ಸಣ್ಣ ಗಲಾಟೆಯಾಗಿತ್ತು. ಇದಾದ ನಂತರ ಇಬ್ಬರು ಸ್ನೇಹಿತರು ವಾಪಸ್ ಹೊರಟಾಗ ಮತ್ತೋರ್ವ ಸ್ನೇಹಿತ ಧೀರಜ್ನೊಂದಿಗೆ ಭೀಮ್ ಕುಮಾರ್ ಮನೆಯತ್ತ ಹೊರಟಿದ್ದ.

ಅದೇ ವೇಳೆ ಹಿಂಬಾಲಿಸಿಕೊಂಡು ಬಂದ ಸಲ್ಮಾನ್, ಧೀರಜ್‌ನ ಮುಖಕ್ಕೆ ಗುದ್ದಿ, ಕುತ್ತಿಗೆಗೆ ಮುಷ್ಠಿಯಿಂದ ಪಂಚ್ ಮಾಡಿದ್ದ. ಈ ವೇಳೆ ರಸ್ತೆ ಮೇಲೆ ಪ್ರಜ್ಞೆ ತಪ್ಪಿ ಬಿದ್ದಿದ್ದ ಭೀಮ್ ಕುಮಾರ್‌ನನ್ನು ಆತನ ಸ್ನೇಹಿತ ಧೀರಜ್ ಮನೆಗೆ ಕರೆತಂದು ಮಲಗಿಸಿದ್ದ. ಮೂರು ದಿನಗಳ ಕಾಲ ಅರೆಪ್ರಜ್ಞಾವಸ್ಥೆಯಲ್ಲಿದ್ದ ಭೀಮ್ ಕುಮಾರ್ ಸೆ.10ರಂದು ಸ್ನೇಹಿತರು ಎಬ್ಬಿಸಲು ಯತ್ನಿಸಿದಾಗ ಮೃತಪಟ್ಟಿರುವುದು ಕಂಡು ಬಂದಿದೆ. ನಂತರ ಮೈಕೋ ಲೇಔಟ್ ಪೊಲೀಸ್ ಠಾಣೆಗೆ ಆತನ ಸ್ನೇಹಿತರು ದೂರು ನೀಡಿದ್ದಾರೆ. ಕೃತ್ಯ ನಡೆದ ಸ್ಥಳದ ಆಧಾರದಲ್ಲಿ ಪುಟ್ಟೇನಹಳ್ಳಿ ಠಾಣೆಗೆ ಪ್ರಕರಣ ವರ್ಗಾವಣೆಯಾಗಿದ್ದು, ಆರೋಪಿ ಪತ್ತೆಗಾಗಿ ಹುಡುಕಾಟ ಮುಂದುವರೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೈಕ್ ಅಪಘಾತ: ಮೆಕ್ಯಾನಿಕ್ ದುರ್ಮರಣ

ಬೆಂಗಳೂರು: ರಸ್ತೆ ಬದಿಯ ಕಲ್ಲಿಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಮೆಕ್ಯಾನಿಕ್ ಒಬ್ಬರು ಮೃತಪಟ್ಟಿರುವ ಘಟನೆ ರಾತ್ರಿ ಚಿಕ್ಕಬಾಣಾವರ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಸೆಲ್ಲಂಪುರದ ನಿವಾಸಿ ನಿಜಿನ್ ಜಾಕೋಬ್ (28) ಸ್ವಯಂ ಅಪಘಾತದಲ್ಲಿ ಮೃತಪಟ್ಟಿರುವ ಕಾರ್ ಮೆಕ್ಯಾನಿಕ್. ಜಾಕೋಬ್ ಮತ್ತು ಅವರ ಸ್ನೇಹಿತ ಕೆಲಸ ಮುಗಿಸಿಕೊಂಡು ರಾತ್ರಿ 11.30ರ ಸಂದರ್ಭದಲ್ಲಿ ಸೆಲ್ವಪುರಂ ಮುಖ್ಯ ರಸ್ತೆಯಲ್ಲಿ ಮನೆಗೆ ಬೈಕ್‌ನಲ್ಲಿ ಬರುತ್ತಿದ್ದಾಗ ನಿಯಂತ್ರಣ ತಪ್ಪಿ ಪಕ್ಕದಲ್ಲಿದ್ದ ಕಲ್ಲಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಬೈಕ್ ಚಾಲನೆ ಮಾಡುತ್ತಿದ್ದ ನಿಬಿನ್ ಜಾಕೋಬ್ ಅವರು ತೀವ್ರವಾಗಿ ಗಾಯಗೊಂಡಿದ್ದರು. ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಹಿಂಬದಿಯಲ್ಲಿ ಕುಳಿತಿದ್ದ ಅವರ ಸ್ನೇಹಿತನಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಚಿಕ್ಕಬಾಣಾವರ ಸಂಚಾರಿ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ. ಈ ಅಪಘಾತಕ್ಕೆ ಅತಿ ವೇಗ ಕಾರಣ ಎಂದು ತಿಳಿದುಬಂದಿದೆ.

ಸೈಬರ್ ಕಮಾಂಡ್ ಸೆಂಟರ್ ಆರಂಭ | ಪ್ರಣಬ್ ಮೊಹಂತಿ ಡಿಜಿಪಿ

ಸೈಬರ್ ವಂಚನೆ ಕಡಿವಾಣಕ್ಕೆ ದಿಟ್ಟ ಹೆಜ್ಜೆ

ಬೆಂಗಳೂರು: ಸೈಬರ್ ವಂಚನೆ ಪ್ರಕರಣಗಳಿಗೆ ಕಡಿವಾಣ ಹಾಕಲು ರಾಜ್ಯ ಸರಕಾರ ಹೊಸದಾಗಿ ಸೈಬರ್ ಕಮಾಂಡ್ ಸೆಂಟರ್ ಸ್ಥಾಪನೆ ಮಾಡಿದೆ. ಸೈಬರ್ ಕಮಾಂಡ್ ಸೆಂಟರ್‌ಗೆ ಡಿಜಿಪಿಯಾಗಿ ಪ್ರಣಬ್ ಮೊಹಂತಿ ನೇಮಕವಾಗಿದ್ದಾರೆ.

ಏಪ್ರಿಲ್ 25ರಂದು ಸೈಬರ್ ಅಪರಾಧ ತಡೆಗೆ ಕಮಾಂಡ್ ಸೆಂಟರ್ ರಚಿಸಲು ಹೈಕೋರ್ಟ್ ಕೂಡ ಸೂಚಿಸಿತ್ತು. ಮುಖರಹಿತವಾದ ಸೈಬರ್ ಅಪರಾಧಗಳನ್ನು ಕೇವಲ ಅಧಿಕಾರಿಗಳ ಭವನವಾಗದೇ ಬದಲಾವಣೆಯ ಸಂಕೇತವಾಗಬೇಕು. ಸೂಕ್ತವಾಗಿ ಜಾರಿಗೊಳಿಸಿದರೆ ಕರ್ನಾಟಕ, ಸೈಬರ್ ಕಮಾಂಡ್ ಸೆಂಟರ್ ರಚಿಸಿದ ಮೊದಲ ರಾಜ್ಯವಾಗುತ್ತದೆ ಎಂದು ನ್ಯಾ.ಎಂ.ನಾಗಪ್ರಸನ್ನ ಅವರಿದ್ದ ಹೈಕೋರ್ಟ್ ಪೀಠ ಅಭಿಪ್ರಾಯ ವ್ಯಕ್ತಪಡಿಸಿತ್ತು. ಅಲ್ಲದೇ ಸೈಬರ್ ಅಪರಾಧಗಳ ತನಿಖಾ ವರದಿ ಸಲ್ಲಿಸಲು ಸೈಬರ್ ಕಮಾಂಡ್ ಸೆಂಟರ್ ಡಿಜಿಪಿಗೆ ಸೂಚನೆ ಕೂಡ ಕೊಟ್ಟಿತ್ತು. ಹೈಕೋರ್ಟ್ ಅಭಿಪ್ರಾಯ ಬೆನ್ನಲ್ಲೇ ಸೆ. 8ರಂದು ಸೈಬರ್ ಕಮಾಂಡ್ ಸೆಂಟರ್ ರಚಿಸಿ ಸರಕಾರ ಆದೇಶ ಹೊರಡಿಸಿದೆ.

ರಾಜ್ಯದಲ್ಲಿ ಸದ್ಯ 16000 ಕ್ಕೂ ಹೆಚ್ಚಿನ ಪ್ರಕರಣ ಇತ್ಯರ್ಥ ಆಗದೆ ಬಾಕಿ ಉಳಿದಿದೆ. ಅಲ್ಲದೇ ಇಷ್ಟು ದಿನ ಪೊಲೀಸರು ಕಾನೂನು ಸುವ್ಯವಸ್ಥೆ ಜತೆಗೆ ಸೈಬರ್ ಪ್ರಕರಣಗಳ ತನಿಖೆಯನ್ನೂ ಮಾಡಬೇಕಿತ್ತು. ಆಗ ಪೊಲೀಸರ ಮೇಲೆ ಕೆಲಸದ ಒತ್ತಡ ಜಾಸ್ತಿಯಾಗಿ, ಸರಿಯಾದ ರೀತಿಯಲ್ಲಿ ಪ್ರಕರಣ ಬಗೆಹರಿಸಲು ಸಾಧ್ಯವಾಗುತ್ತಿರಲಿಲ್ಲ. ಸೈಬರ್ ಕಮಾಂಡ್ ಸೆಂಟರ್ ರಚನೆ ಆದ ಮೇಲೆ ಕೇವಲ ಸೈಬರ್ ಪ್ರಕರಣಗಳಿಗೆ ಸಿಬ್ಬಂದಿ ನೇಮಕ ಮಾಡಲಾಗುತ್ತದೆ. ಅಲ್ಲದೆ ತಾಂತ್ರಿಕವಾಗಿ ಪರಿಣಿತಿ ಹೊಂದಿರುವ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗುತ್ತದೆ. ಜತೆಗೆ ಸಿಬ್ಬಂದಿಗಳಿಗೆ ಉತ್ತಮ ತರಬೇತಿ ನೀಡಲಾಗುತ್ತದೆ. ದೇಶದ ಯಾವುದೇ ಭಾಗದಿಂದ ವಂಚನೆ ನಡೆದರೂ ಪತ್ತೆ ಮಾಡಿ ಕ್ರಮ ಜರುಗಿಸಲು ಸೈಬರ್ ಕಮಾಂಡ್ ಸೆಂಟರ್‌ಮುಂದಾಗಿದೆ.

ಬೆಂಗಳೂರಲ್ಲಿ 45 ಸೈಬರ್ ಠಾಣೆ

ಸದ್ಯ ಬೆಂಗಳೂರಲ್ಲಿ 45 ಸೈಬರ್ ಪೊಲೀಸ್ ಠಾಣೆಗಳಿವೆ. ಜತೆಗೆ 1930 ದಲ್ಲಿ ಕೂಡ ಪ್ರಕರಣಗಳನ್ನ ದಾಖಲು ಮಾಡಿಕೊಳ್ಳಲಾಗುತ್ತಿದೆ. ಇನ್ನು ಮುಂದೆ ಸೈಬರ್ ಠಾಣೆಗಳು ಮತ್ತು 1930 ದಲ್ಲಿ ದಾಖಲಾದ ದೂರುಗಳನ್ನು ಸೈಬರ್ ಕಮಾಂಡ್ ಸೆಂಟರ್ ನಿರ್ವಹಣೆ ಮಾಡಲಿದೆ. ದೂರು ದಾಖಲಿಸುವುದರ ಜತೆಗೆ ತನಿಖಾ ವರದಿಯನ್ನ ಕೂಡ ಸಲ್ಲಿಕೆ ಮಾಡಲಿದೆ.

ಕರ್ನಾಟಕ ರಾಜ್ಯ ಸರ್ಕಾರಿ 'ಡಿ'-ಗ್ರೂಪ್ ನೌಕರರ ಕ್ಷೇಮಾಭಿವೃದ್ಧಿ ಮತ್ತು ಖಾಸಗಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ನಿ.) ಮೈಸೂರು
(ಕ್ರ.ಸ.ಹೆಚ್ ಎಸ್-1/01/ಹೆಚ್ ಹೆಚ್ ಎಸ್/47976/2016-17 ದಿನಾಂಕ: 19.08.2016)
ನಂ.744, ನಾಲಾಬೀದಿ, ಕೆ.ಆರ್. ಮೊಹಲ್ಲಾ, ಮೈಸೂರು-570004

ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

2024-25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ ದಿನಾಂಕ 20-09-2025ನೇ ಶನಿವಾರ ಬೆಳಿಗ್ಗೆ 11.00 ಗಂಟೆಗೆ ಸರಿಯಾಗಿ ಅಧ್ಯಕ್ಷರಾದ ಸಿ.ವೆಂಕಟೇಶ್ ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಈಗಾಗಲೇ ಮಾನ್ಯ ಸದಸ್ಯರುಗಳಿಗೆ ಅಂಚೆ ಮೂಲಕ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿದ್ದು, ತಲುಪದೇ ಇದ್ದಲ್ಲಿ ಇದನ್ನೇ ಆಹ್ವಾನ ಪತ್ರಿಕೆಯೆಂದು ತಿಳಿದು ಸಭೆಗೆ ಸಕಾಲಕ್ಕೆ ಆಗಮಿಸಬೇಕಾಗಿ ಕೋರುತ್ತೇವೆ.
ಸ್ಥಳ: ಸಂಘದ ಬಡಾವಣೆ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೇವಗಳ್ಳಿ ಗ್ರಾಮದ ಸಂಘದ ಬಡಾವಣೆಯಲ್ಲಿ, ಮೈಸೂರು.

ತಮ್ಮ ವಿಶ್ವಾಸಿ,
ಕಾರ್ಯಕಾರಿ ಮಂಡಲಿ ಅಪ್ಪಣೆ ಮೇರೆಗೆ
ಶ್ರೀಮತಿ ಎನ್. ಲಾವಣ್ಯ

ಅಪಘಾತ: ಸಾಫ್ಟ್‌ವೇರ್ ಎಂಜಿನಿಯರ್ ಸಾವು

ಬೆಂಗಳೂರು: ರಸ್ತೆ ಅಪಘಾತದಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬರು ಮೃತಪಟ್ಟಿರುವ ಘಟನೆ ಜ್ಞಾನಭಾರತಿ ಸಂಚಾರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಪಾಪರೆಡ್ಡಿ ಪಾಳ್ಯದ ನಿವಾಸಿ ಸ್ವರೂಪ್ (26) ಅಪಘಾತದಲ್ಲಿ ಮೃತಪಟ್ಟವರು. ಶನಿವಾರ ರಾತ್ರಿ 11.45ಕ್ಕೆ ಕೆಲಸ ಮುಗಿಸಿಕೊಂಡು ಮನೆಗೆ ಬೈಕ್‌ನಲ್ಲಿ ಬರುತ್ತಿದ್ದರು. ಜ್ಞಾನಭಾರತಿ ಆವರಣದ ಜಂಕ್ಷನ್‌ನಲ್ಲಿರುವ ಹಂಪ್ಸ್ ಬಳಿ ಬೈಕ್ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ನಂತರ ಗೋಡೆಗೆ ಗುದ್ದಿದ್ದಾರೆ. ತೀವ್ರವಾಗಿ ಗಾಯಗೊಂಡ ಅವರು ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಮರಣೋತ್ತರ ಪರೀಕ್ಷೆಯ ನಂತರ ಶವವನ್ನು ಅವರ ಕುಟುಂಬದವರಿಗೆ ಹಸ್ತಾಂತರಿಸಲಾಗಿದೆ. ಅತೀವೇಗ, ಅಜಾಗರೂಕತೆಯೇ ಈ ಅಪಘಾತಕ್ಕೆ ಕಾರಣ ಎಂದು ಪೊಲೀಸರ ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಸುದ್ದಿ ತಿಳಿದ ಜ್ಞಾನಭಾರತಿ ಸಂಚಾರಿ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿನೀಡಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಲೈಂಗಿಕ ದೌರ್ಜನ್ಯ: ವಾರ್ಡನ್, ವಿದ್ಯಾರ್ಥಿಗಳ ಬಂಧನ

ಬೆಂಗಳೂರು: ಶಾಲಾ ಬಾಲಕನಿಗೆ ಲೈಂಗಿಕ ಕಿರುಕುಳ ನೀಡಿದ ಹಾಗೂ ರ‍್ಯಾಗಿಂಗ್ ಮಾಡಿದ ಆರೋಪದ ಮೇಲೆ ಎಲೆಕ್ಟ್ರಾನಿಕ್ಸ್ ಸಿಟಿ ಸಮೀಪದ ಇಂಟರ್‌ನ್ಯಾಷನಲ್ ಸ್ಕೂಲ್‌ನ ಹಾಸ್ಟೆಲ್ ವಾರ್ಡನ್ ಹಾಗೂ ಆರು ವಿದ್ಯಾರ್ಥಿಗಳನ್ನು ಬಂಧಿಸಲಾಗಿದೆ. ಪ್ರಕರಣ ಸಂಬಂಧ ವಿಚಾರಣೆಗೆ ಹಾಜರಾಗುವಂತೆ ಸಂಸ್ಥೆಯ ಪ್ರಾಂಶುಪಾಲರಿಗೆ ಸೂಚಿಸಲಾಗಿದೆ.

ಮಗನ ಮೇಲೆ ದೈಹಿಕ ಮತ್ತು ಮಾನಸಿಕ ದೌರ್ಜನ್ಯ ನಡೆದ ಬಗ್ಗೆ ಸಂತ್ರಸ್ತನ ಪೋಷಕರು ನೀಡಿದ ದೂರಿನ ಮೇರೆಗೆ ಬನ್ನೇರುಘಟ್ಟ ಠಾಣೆ ಪೊಲೀಸರು ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ದೌರ್ಜನ್ಯದ ಬಗ್ಗೆ ತಿಳಿದಿದ್ದರೂ ಸೂಕ್ತ ಕ್ರಮ ಕೈಗೊಳ್ಳಲು ವಿಫಲವಾದ ಕಾರಣ ಹಾಸ್ಟೆಲ್ ವಾರ್ಡನ್ ಅವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗಿದೆ.

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ (ಒಂದು ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್)
ಪ್ರಧಾನ ಕಛೇರಿ: ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ದ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ. 10/1, 11/2 & 12/2ಬಿ ಆಫ್ ದೊಮ್ಮಲೂರು, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ಹತ್ತಿರ, ಚಳ್ಳಘಟ್ಟ, ಬೆಂಗಳೂರು-560071

ಚಿನ್ನಾಭರಣಗಳ ಹರಾಜಿಗಾಗಿ ಸಾರ್ವಜನಿಕ ಸೂಚನೆ

ಈ ಕೆಳಗೆ ಹೆಸರಿಸಿರುವ ಸಾಲಗಾರರು ಹಲವಾರು ವಿನಂತಿಯ ನಂತರವೂ ಸಾಲ ಮರು ಪಾವತಿಸಲು ವಿಫಲರಾಗಿ, ಚಿನ್ನಾಭರಣ ಪಡೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಕೆಳಗೆ ಹೆಸರಿಸಿರುವ ಖಾತೆಗಳ ಸಾಲಗಾರರ ಚಿನ್ನಾಭರಣಗಳನ್ನು ಸಾರ್ವಜನಿಕ/ಆನ್‌ಲೈನ್/ಖಾಸಗಿ ಹರಾಜು ಮೂಲಕ ನಮ್ಮ ಶಾಖೆಯಲ್ಲಿ ಆನ್‌ಲೈನ್ ಆಕ್ಷನ್ ಟ್ರಿಗರ್ ಮೂಲಕ 16.10.**2025 ರಂದು ಬೆಳಿಗ್ಗೆ 10.30ಕ್ಕೆ** ಮಾರಾಟ ಮಾಡಲಾಗುವುದು. ಭಾಗವಹಿಸಲು ಆಸಕ್ತರಾಗಿರುವವರು ಶಾಖೆಯನ್ನು ಸಂಪರ್ಕಿಸಬಹುದಾಗಿದೆ. ಯಾವುದೇ ಕಾರಣ ನೀಡದೆ, ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ. ದಯವಿಟ್ಟು ಗಮನಿಸಬೇಕಾದುದೇನೆಂದರೆ, ಹರಾಜಿನ ದಿನದಂದು ಹರಾಜು ಪೂರ್ಣಗೊಂಡಿಲ್ಲವಾದರೆ, ಅದನ್ನು ಮರುದಿನ ಅದೇ ನಿಯಮ ನಿಬಂಧನೆಗಳಿಗನುಸಾರವಾಗಿ ನಡೆಸಲಾಗುವುದು. ಒಂದು ವೇಳೆ ಗ್ರಾಹಕ ಮೃತನಾಗಿದ್ದರೆ, ಅದೇ ನಿಯಮ ಮತ್ತು ನಿಬಂಧನೆ ಅವರ ಉತ್ತರಾಧಿಕಾರಿ/ನಾಮನಿರ್ದೇಶಿತನಿಗೆ ಅನ್ವಯವಾಗುವುದು. ಸಾಲಗಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಹರಾಜಿನ ಮೊದಲು ಎಲ್ಲ ಬಾಕಿ, ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಬೇಕು. ತಪ್ಪಿದಲ್ಲಿ ಅಡಮಾನ ಮಾಡಿರುವ ಚಿನ್ನಾಭರಣಗಳನ್ನು ಮಾರಾಟ ಮಾಡಿ ಬ್ಯಾಂಕಿಗೆ ಬರಬೇಕಾಗಿರುವ ಬಾಕಿ ಹಣವನ್ನು ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ವಸೂಲು ಮಾಡಲಾಗುವುದು. ಯಾವುದೇ ವಿಚಾರಣೆ ಮತ್ತು ನಿಯಮ ಮತ್ತು ನಿಬಂಧನೆಗಳಿಗೆ ಶಾಖೆಯನ್ನು ಸಂಪರ್ಕಿಸಿ. ಶಾಖೆ ವಿಳಾಸಕ್ಕಾಗಿ **www.janabank.com** ಗೆ ಭೇಟಿ ನೀಡಿ.

ಕ್ರ. ಸಂ.	ಸಾಲದ ಖಾತಾ ಸಂ.	ಸಾಲಗಾರರ / ಸಹ-ಸಾಲಗಾರರ ಹೆಸರು	ಅಡಮಾನ ಮಾಡಿದ ಆಭರಣಗಳ ಒಟ್ಟು ತೂಕ
1	31838740000411	ಆನಂದ್ ಎಸ್	26.5
2	31838730057015	ನಾಗೇಶ್ ನಾಯ್ಕ	6
3	31838730056982	ಮಂಜುಳ ರಮೇಶ್	5.7
4	31838730056920	ರತ್ನಮ್ಮ	4.6
5	31838730056893	ದಿವ್ಯ ಡಿ ದಾಮೋದರನ್ ವಿ	4.2
6	31838730056831	ಮುರುಗ	6.4
7	31838730056815	ನಾಗಲಕ್ಷ್ಮಿ ನಾಗಲಕ್ಷ್ಮಿ ನರಸಿಹುಲು	3.1
8	31838730056742	ರಾಣಿ ಮಹಾದೇವ ಟಿ ವಿ	10
9	31838730056663	ಖತೀಜ ಅಜಗರಾಲಿ	5.1
10	31838730056420	ವಿ ವಲ್ಲಿ	4
11	31838730056383	ಉಮಾ ಖಾಶಿ	3.3
12	31838730056281	ಸಾದಿಯಾ ಪರ್ವಿನ್	28.2
13	31838730054851	ಆರ್ ನಿಂಗರಾಜು	23.5
14	31838730054605	ಸಿದ್ದಮ್ಮ	3.7
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ದೇನಾ ಬ್ಯಾಂಕ್ ಬ್ಯಾಂಕ್ ಮೇಲ್ಭಾಗ, ಸೈಟ್ ನಂ. 22 ಖಾತಾ ನಂ.25, ಶಾರದಾ ನಗರ, ವಸಂತಪುರ ಮುಖ್ಯರಸ್ತೆ, ಉತ್ತರಹಳ್ಳಿ ಹೋಬಳಿ, ಬೆಂಗಳೂರು-560061.			
15	32568730027748	ಅಮರಾವತಿ ಎ	2.7
16	32568730027685	ಎಸ್ ರಮ್ಯ	7.5
17	32568730027646	ವೆಂಕಟೇಶ ಕೆ	8.2
18	32568730027560	ರಮ್ಯ ಎಸ್	5.6
19	32568730027050	ಆಶಾರಾಣಿ ಎಂ	3.6
20	32568730026593	ಶ್ರೀನಿವಾಸಮೂರ್ತಿ ಸಿ	18.1
21	32568160004695	ಶರತ್ ತೇಜ್	46
22	32568160004682	ಮುರಳಿ ವೈ	51.48
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ಖಾತಾ ನಂ.68/63, ಹಳೆ ನಂ.1534 ಸಿಕೆಆರ್ ಕಾಂಪ್ಲೆಕ್ಸ್, ಆನೇಕಲ್ ಬಸ್ ನಿಲ್ದಾಣ ಎದುರು, ಬೆಂಗಳೂರು-562106, ಭಾರತ			
23	46448730039786	ಪಲ್ಲವಿ ಎಂ	5
24	46448730039661	ಮೂರ್ತಿ ಎಂ ಎಂ	8.1
25	46448160007146	ಎಂ ಕಾವ್ಯ ಎಂ	31.1
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 1809/1809 ಮತ್ತು 1810/1810 ರಾಮಸಮುದ್ರ ಪಟ್ಟಣ, ಎಫ್ ವಿಭಾಗ, ಬಿ ಆರ್ ಹಿಲ್ಸ್, ಚಾಮರಾಜನಗರ-571313.			
26	31878740000021	ಶಾಲಿನಿ ಜೆ	24.9
27	31878730046110	ಉಪ್ಪಾರಿ ಶಾಂತಿ	8.4
28	31878730046096	ಶಬಾನ ತೌಶಿಫ್	5.7
29	31878730046070	ಆನಂದ ಹೆಚ್ ಆರ್	12.1
30	31878730046060	ಕುಶಾಲ್ ಎಸ್	3.6
31	31878730046057	ಉಮೇಶ್ ಪಿ	12
32	31878730046018	ಪದ್ಮ ರಾಜ	26.7
33	31878730045910	ಸುಧಾ ವೇಣು ಗೋಪಾಲ್	4.5
34	31878730045831	ಭಾಗ್ಯಮ್ಮ ಆರ್ ಎಲ್	2.8
35	31878730045818	ಕಿಶೋರ್ ಎಂ	52.5
36	31878730045041	ಐಶ್ವರ್ಯ ಬಿ	16
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 273-ಬಿ, ಕೊ-ಅಪರೇಟಿವ್ ಹೌಸ್ ಕಟ್ಟಡ ಸೊಸೈಟಿ ಚೌಡೇಶ್ವರಿ ಬಸ್ ನಿಲ್ದಾಣದ ಎದುರು, ಮತ್ತಿಕೆರೆ, ಬೆಂಗಳೂರು-560078.			
37	31138730030238	ಶಿವಾನಂದ ಹಿರೇಮಠ್	5
38	31138730062990	ಶಾಂತಾಬಾಯಿ ವಾಲೀಕಾರ್	23.6
39	31138730062750	ನಬಿರಸೂಲ್ ಮಕ್ಬೂಲ್‌ಸಾಬ್ ಕೋಲಾರ್	2.6
40	31138730062671	ಶಬಾನ ಗೌಮ್ ಮಕಾನೆ	8.4
41	31138730062352	ಯಾಸ್ಮೀನ್ ಮೌಲಾಲಿ	9.8
42	31138730062135	ವನಿತ ಭೈರವ್	9.9
43	31138730059371	ಸಿದ್ದನಗೌಡ್ ಪಡ್ನೂರ್	10
44	31138730059332	ತಸ್ಲೀಮ್ ಮಹಿಬೂಬ್ ಮುಲ್ಲಾ	19.8
45	31138160004142	ವಿಶ್ವೇಶ್ವರಯ್ಯ ಡಿ ಮಠಪತಿ	766.1
46	31138160004139	ವಿಶ್ವೇಶ್ವರಯ್ಯ ಡಿ ಮಠಪತಿ	664.2
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಸಿಟಿಎಸ್ ನಂ.1334/ಎ, 2ನೇ ಮಹಡಿ, ಜಯಲಕ್ಷ್ಮಿ ಟ್ರಾನ್ಸ್‌ಪೋರ್ಟ್ ಕಂ. ಮೇಲ್ಭಾಗ, ಗಣಪತಿ ಚೌಕ ಹತ್ತಿರ, ಶಹಾಪೇಟೆ, ಬಿಜಾಪುರ-586101			
47	31128730038145	ಹೆಚ್ ಆರ್ ಪ್ರಕಾಶ್ ರುದ್ರಪ್ಪ	3.7
48	31128730038030	ನಾಗಮ್ಮ	8
49	31128730037895	ಶಿವರಾಜ ಡಿ	9.8
50	31128730037728	ಮಧುಸೂದನ್ ಆರ್	14.6
51	31128730036382	ಭಾರತಿ ವೈ	5.98
52	31128730036372	ಸಂತೋಷ್ ಕೆ ಯು	7.1
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., #880, 2ನೇ ಮಹಡಿ, ಎಸ್ ಎಸ್ ಕಾಂಪ್ಲೆಕ್ಸ್, ಬಿ ಹೆಚ್ ರಸ್ತೆ, ಶಿವಮೊಗ್ಗ-577202, ಭಾರತ.			
53	31988730032252	ಲಿಂಕ ರೆಡ್ಡಿ	8
54	31988730032101	ಎಂ ಕೃಷ್ಣವೇಣಿ	4.5
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಅಕ್ಷಯ ಸ್ಕ್ವೇರ್, ಗಾಂಧಿ ನಗರ ಮುಖ್ಯ ರಸ್ತೆ, ಸರ್ಕಾರಿ ಆಸ್ಪತ್ರೆ ಎದುರು, ಬಳ್ಳಾರಿ - 583103.			
55	33818730033305	ಹನುಮಕ್ಕ ಅಜ್ಜಪ್ಪ	4.5
56	33818730033294	ಶ್ರುತಿ ಪಿ	11.4
57	33818730031427	ಕಲಾ	4.8
58	33818730031223	ಜಯಶಂಕರ್ ಎಸ್	7.1
59	33818730031210	ಜಯಶಂಕರ್ ಎಸ್	7.5
60	33818160004798	ಪೂಜ ಹೂಲಿ	346.5
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಡೋರ್ ನಂ.604/ಬಿ, ಖಾತಾ ನಂ.23/19 ಸಿದ್ದಲಿಂಗೇಶ್ವರ ಕಾಂಪ್ಲೆಕ್ಸ್, ಎಕ್ಸಿಸ್ ಬ್ಯಾಂಕ್ ಹತ್ತಿರ, ಹಾಡಾಡಿ ರಸ್ತೆ, ದಾವಣಗೆರೆ-577004			
61	34018730026316	ಶಬೀನ್‌ತಾಜ್ ಅಯಬ್‌ಪಾಶಾ	3.7
62	34018730026303	ಸೈಯ್ಯದ್ ನವಾಜ್ ಎಸ್	9.1
63	34018730026292	ವಹೀದಾ ಮೊಹಮ್ಮದ್ ಇರ್ಫಾನ್	4
64	34018730026282	ಲಕ್ಷ್ಮಿ ಕೆ	3.6
65	34018730026214	ರಾಧಮ್ಮ ಎಸ್	9.2
66	34018730026180	ಸುಲ್ತಾನ್ ತಾಜ್	4.1
67	34018730026075	ರೇಷ್ಮ ಅಪ್ಪಣ್ಣ ಎ	12.6
68	34018730025925	ಎನ್ ಪುನೀತ್ ಕುಮಾರ್	6.4
69	34018730025912	ಪಲ್ಲವಿ ಆರ್	3.5
70	34018730025902	ಶಿವ ಆರ್	15.1
71	34018740000721	ಅನಿತ ಸಂಪತ್	34.6
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ # 362, ಪಿಐಡಿ ನಂ.007-ಡಬ್ಲ್ಯು0377-73-1 ತಲಕಾವೇರಿ ಲೇಔಟ್, ಅಮೃತಹಳ್ಳಿ ಮುಖ್ಯರಸ್ತೆ ಬ್ಯಾಟರಾಯನಪುರ, ಬೆಂಗಳೂರು-560092			
72	33878730044743	ಶರವಣ ಕುಮಾರ್ ಕೆ	7.4
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ. 33/34, ಖಾತಾ ನಂ.159, ಪಿಐಡಿ ನಂ.14-23-33/34, 1ನೆ ಕ್ರಾಸ್, ಮುನೇಶ್ವರ ಬ್ಲಾಕ್, ಬೆಂಗಳೂರು-560086.			
73	45358160000836	ಚಂದ್ರಕಲಾ ಎನ್	49.6
74	45358160000823	ಚಂದ್ರಕಲಾ ಎನ್	67.8
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ # 362, ಪಿಐಡಿ ನಂ.007-ಡಬ್ಲ್ಯು0377-73-1 ತಲಕಾವೇರಿ ಲೇಔಟ್, ಅಮೃತಹಳ್ಳಿ ಮುಖ್ಯರಸ್ತೆ ಬ್ಯಾಟರಾಯನಪುರ, ಬೆಂಗಳೂರು-560092			
75	32508730046559	ಗಿರೀಶ್ ಕೆ	16.1
76	32508730046533	ಶಾಜಿಯಾಸುಲ್ತಾನ ಶೇಕ್ ಮೆಹದ್ದೀನ್	13.7
77	32508730046444	ಕವಿತ ಮುನಿರಾಜು	32.7
78	32508730046371	ಹೆಚ್ ಆರ್ ಮನೋಜ್	15.5
79	32508730046303	ರುಕ್ಮಿಣಿ ಸುರೇಶ್	11.4
80	32508730046138	ಮನೋಜ್ ಕುಮಾರ್ ಆರ್	3.2
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ.543/4, ನೆಲಮಹಡಿ, ಜಾಕಿ ಶೋರೂಂ ಹತ್ತಿರ, ಜ್ವಾಲಮಾಲ ಕೈಗಾರಿಕಾ ಎಸ್ಟೇಟ್, ದೇವರಚಿಕ್ಕನಹಳ್ಳಿ ಮುಖ್ಯ ರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು, ಕರ್ನಾಟಕ, ಪಿನ್-560068			
81	45368730001400	ಕಾವ್ಯ ಬಿ	8.2
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಯುನಿಟ್ 1 &2, ಜಿಎಫ್& ಎಂಎಫ್ ಕೆಆರ್ ಕಾರ್ನರ್ ಸ್ಟೋನ್ ಕಟ್ಟಡ, 80 ಅಡಿ ರಸ್ತೆ, ಸೈಂಟ್ ಬೆಡ್ 4ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560034, ಭಾರತ			
82	30138730036853	ಸರಚಂದ್ರಕಲ ಯತಿರಾಜು	3
83	30138730036573	ಮಹೇಶ್ ಬಿ ಎಂ	66.8
84	30138730036484	ಮಹೇಶ್ ಬಿ ಎಂ	3.9
85	30138730036471	ಶ್ರೀಧರ ರಾವ್ ಜಿ	16.4
86	30138730036343	ಫರೀನ್ ಸೈಯ್ಯದ್‌ಫೈರೋಜ್	15.8
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., #5ಸಿ-408, ಯೋಗ ಸ್ಪಂದನ ಕಾಂಪ್ಲೆಕ್ಸ್ 1ನೇ ಮಹಡಿ, ಡಿ ಮಾರ್ಟ್ ಎದುರು, ಎನ್‌ಜಿಇಎಫ್ ಲೇಔಟ್‌ನ ಪೂರ್ವ, ರಾಮಮೂರ್ತಿನಗರ ಮುಖ್ಯ ರಸ್ತೆ. ಬೆಂಗಳೂರು-560016.			
87	33638730059134	ಅವಿನಾಶ್ ಎ ಆರ್	15.1
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, 2/1, ಮೆಟ್ರೋ ನಿಲ್ದಾಣದ ಹತ್ತಿರ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು-560023.			
88	33648730033713	ಲಕ್ಷ್ಮಿ ಬಿ ವಿ	5.9
89	33648730033700	ಕಮಲಮ್ಮ	3
90	33648730033637	ಶಂಕರ್ ಹೆಚ್	8.2
91	33648730033548	ಸುಮ ಕೆ	4.9
92	33648730033535	ಶ್ರೀನಿವಾಸ ಆರ್	2.5
93	33648730033485	ಸುಚಿತ್ರ ಟಿ	3.7
94	33648730033410	ಶಂಕರ್ ಬಾಬು	40.8
95	33648160001928	ಸುಮ ಕೆ	63.6
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 12, ರಿಂಗ್ ರಸ್ತೆ, ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಮೇಲ್ಭಾಗ, ನಾಗರಬಾವಿ 2ನೇ ಹಂತ, 11ನೇ ಬ್ಲಾಕ್, ಪಾಪರೆಡ್ಡಿಪಾಳ್ಯ, ಬೆಂಗಳೂರು-560072, ಭಾರತ			
96	33458730027337	ಸೋಮಣ್ಣ	2.9
97	33458730027324	ಸುಮತಿ ಬಿ	3.2
98	33458730027235	ಅಂಬಿಕ ಪಿ	6.7
99	33458730027057	ರವಿ ಜಿ ಎಸ್	20
100	33458730026985	ಸರ್ವಮಂಗಲ ಸಿ	7
101	33458160004630	ಆರ್ ರಾಘವೇಂದ್ರ	28.5
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 730, ಹಿಣಕಲ್ ಹುಣಸೂರು ಮುಖ್ಯರಸ್ತೆ ಮೈಸೂರು-570017.			
102	32018730008149	ಅಕ್ಕತ ಸೊನ್ನದ್	4.9
103	32018730008086	ಪ್ರೇಮ ದ್ಯಾಮಣ್ಣ ಜಲಿಗಿದದ್	4.2
104	32018730008021	ಶಕುಂತಲ ಕಂಬಾರ್	22.3
105	32018730007847	ಮಂಜು ಯಂಕಪ್ಪ ನಾಗನೂರು	5
106	32018730007363	ನಾಗರತ್ನ ರಂಗಪ್ಪ ರಂಗಣ್ಣನವರ್	39.8
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 239/2ಎ+ಬಿ/1ಡಿ, ಪ್ಲಾಟ್ ನಂ. 5, ನಂದಗೌಡ ರಸ್ತೆ, ನೂರ್ ಕೆರೂಡಿ ಆಸ್ಪತ್ರೆ, ವಿನಾಯಕ ನಗರ, ಬಾಗಲಕೋಟೆ-587101, ದೂ: 08354-225452			
107	30948730022125	ಪೂಜಾ ವಿ	4
108	30948730021888	ರಾಚಮ್ಮ ಎನ್	5.1
109	30948160003275	ಕಾಶಿಪತಿ	84.6
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 730, ಹಿಣಕಲ್ ಹುಣಸೂರು ಮುಖ್ಯರಸ್ತೆ ಮೈಸೂರು-570017.			
110	30488730033060	ಮೊಹಮ್ಮದ್‌ರಫಿಕ್ ಎಂ ನಡಾಫ್	4.4
111	30488730033047	ಜ್ಯೋತಿ ರಾಜು ಕಲಾಲ್	2.59
112	30488730033008	ನವೀನ್ ಮಸ್ಕಿ	12.16
113	30488730032949	ಮೃತ್ಯುಂಜಯ ಬಸಯ್ಯ ಮಠಪತಿ	5
114	30488730032899	ಸಂತೋಷ್ ಹನುಮಂತ್ ತಿಗಡಿ	2.78
115	30488730032850	ಅರುಣ್ ತಮ್ಮಣ್ಣ ಗುಂಡಗೋವಿ	5.85
116	30488730032821	ಜಯಶ್ರೀ ನಿಂಗಪ್ಪ ಪೂಜಾರ್	17.19
117	30488730032811	ಅರುಣ್ ತಮ್ಮಣ್ಣ ಗುಂಡಗೋವಿ	8.09
118	30488730032541	ಶಂಕರ್ ಕುಲ್ಲೋಡ್	9.37
119	30488160000581	ಆದಿತ್ಯ ಭರಮ್‌ಗೌಡರ್	49.07
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಕಟ್ಟಡ ಸಂ. 14089/ಎ/3, ಕಲಘಟಗಿ ಮುಖ್ಯರಸ್ತೆ ಸರಸ್ವತ್‌ಪುರ, ಧಾರವಾಡ-580002			
120	46988730037471	ಕೆ ಜ್ಯೋತಿ	7.9
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, #9, ಎಂಐಜಿ, ಕೆಹೆಚ್‌ಬಿ ಕಾಲೊನಿ, ಸೋಲಾಪುರ ರಸ್ತೆ, ಬಿಜಾಪುರ-586103.			
121	45428730015636	ವಿನೋದ್ ಚವನ್	21.1
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, #9, ಎಂಐಜಿ, ಕೆಹೆಚ್‌ಬಿ ಕಾಲೊನಿ, ಸೋಲಾಪುರ ರಸ್ತೆ, ಬಿಜಾಪುರ-586103.			
122	99998730000684	ಸುಮನ್ ಸಿಂಗ್	103.62
123	47468730005034	ಲಕ್ಷ್ಮಿ	5.1
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, 7ಎಂ-414, ಹೆಚ್‌ಆರ್‌ಬಿಆರ್ 1ನೇ ಬ್ಲಾಕ್ ಎಕ್ಸ್‌ಟೆನ್ಶನ್, ಬೆಂಗಳೂರು-560043, ಭಾರತ			
124	31768730019552	ಅಂಬರೀಶ್ ವಿ	4.9
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಲಕ್ಷ್ಮಿ ಇಂಟರ್‌ನ್ಯಾಷನಲ್ ಹೋಟೆಲ್ ಕೆಳಭಾಗ, ಶಿವನಗರ, ಬೀದರ್-585401.			
125	31788730018095	ಗೀತಾ	6.47
126	31788730017205	ತಸೀನಾ ಬಾನು ಅಂಜುಮ್ ಪಾಶಾ	10.12
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಚಂದನ ಕಾಂಪ್ಲೆಕ್ಸ್, ಆರ್ ನಂ.102 ನಿರ್ಧರಣ ನಂ. 211, ಆಸ್ತಿ ನಂ. 8-1-501-66, ವಾರ್ಡ್ ನಂ.8-ಆರ್‌ಸಿ, ಹರ್ಷಮಹಲ್ ರಸ್ತೆ, ಹಾಸನ-573201, ಕರ್ನಾಟಕ.			
127	45488730018351	ಬಸಮ್ಮ	7.7
128	45488730018121	ನಾಗಾರ್ಜುನ್ ಎಮ್	11.6
129	45488730017999	ಸಾದಿಕಾ ಬೇಗಂ	12.1
130	45488730015813	ರಾಜ	19.9
131	45488160006735	ಅರುಣ ತುಳಸಿ ಎಮ್	134.2
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಡೋರ್ ನಂ.1-4-380, ಹೆಚ್ ಕೆ ದುಂಬಾ ನರ್ಸಿಂಗ್ ಹೋಂ, ಆರ್ಥೋಪೆಡಿಕ್ ಸೆಂಟರ್, ಐ ಬಿ ರಸ್ತೆ, ರೈಲ್ವೆ ನಿಲ್ದಾಣ ಸಮೀಪ, ರಾಯಚೂರು-584101, ಭಾರತ			
132	45468730015440	ಶಿವಮ್ಮ	4.83
133	45468730015430	ಮಂಜುನಾಥ್ ಟಿ ವಿ	15.3
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಹಾಜೀ ಬಾಶಾ ಸಾಬ್ ಆರ್ಕೇಡ್-1, ಆಸ್ತಿ ನಂ.399/707/1786 ವಾರ್ಡ್ ನಂ.27, ಗಂಗೋತ್ರಿ ರಸ್ತೆ, ತುಮಕೂರು-572101.			
134	45458730027791	ಸುನಿಲ್ ಕುಮಾರ್ ಭೀಮಣ್ಣ	11.9
135	45458730027765	ಸೋಫಿಲಾಲ್ ಆರ್	6.2
136	45458730027512	ಮಮತ ಮಾಲಣ್ಣ	12.8
137	45458730027485	ಮಹಾಂತೇಶ್ ಬಿ	7
138	45458730027446	ಸಿದ್ಧಾರ್ಥ ಭೀಮ್‌ಶೀಲ್	4.9
139	45458730027370	ಭೀಮಾಶಂಕರ್	5
140	45458730025670	ಅನಿಲ್ ಕುಮಾರ್ ಗಣ್ಣು ಚವನ್	4.5
141	45458160004647	ಸಿದ್ದಮ್ಮ	35.9
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ.2-907/23/2, ಡಾ. ಸವಿತ ವಾಣಿಜ್ಯ ಸಂಕೀರ್ಣ ಬಸವೇಶ್ವರ ಆಸ್ಪತ್ರೆ ಎದುರು, ಸೇಡಂ ರಸ್ತೆ, ಗುಲಬರ್ಗಾ- 590003.			
142	45398730007816	ಶಬಾನ ಪಿ	7.9
143	45398730007803	ಶಬಾನ ಪಿ	8.15
144	45398730007625	ಬಸವರಾಜ್ ಸೋಮಪ್ಪ ಗುಡ್ಡರಿ	28.05
145	45398730007486	ವಿನಾಯಕ್ ದೀಪಕ್ ಚಿಂಚೇವಾಡೇಕರ್	5.2
146	45398730007473	ಬಸವರಾಜ್ ಸೋಮಪ್ಪ ಗುಡ್ಡರಿ	24.3
147	45398730006496	ಅರ್ಜುನ್ ದೇವಪ್ಪ ಗೋಜಗಿ	28
148	45398160002149	ಶ್ರೀಕಾಂತ್ ಸಿದ್ದಣ್ಣ ಬೋಳಶೆಟ್ಟಿ	41.65
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಯುನಿಕ್ ಟವರ್ ಬಿಗ್ ಬಜಾರ್ ಹತ್ತಿರ, ಎಕ್ಸಿಸ್ ಬ್ಯಾಂಕ್ ಎದುರು, ಖಾನಾಪುರ ರಸ್ತೆ, ಅಂಗೋಲ್ ಎಕ್ಸ್‌ಟೆನ್ಶನ್ ಬೆಳಗಾವಿ, ಕರ್ನಾಟಕ-590003			
149	45448730007058	ಖ್ವಾಜಾ ಮೈನುದ್ದೀನ್ ಎ ಹೆಬ್ಬಳ್ಳಿ	3.94
150	45448730007045	ಬಸವರಾಜ್ ಹನಮಂತಪ್ಪ ಹರಿಜನ್	3.2
151	45448730007022	ಖಾಡಕಲಟ ರುಕೀರ್‌ಹುಸೇನ್	2.4
152	45448730006999	ಸಿದ್ದಲಿಂಗಯ್ಯ ಕಾಡಯ್ಯ ಮಠಪತಿ	4.95
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮೆಝ್ಝನೈನ್ ಮತ್ತು 1ನೇ ಮಹಡಿ, ಡೋರ್ ನಂ.#00 ಉಣಕಲ್ ಗ್ರಾಮ, ವಿದ್ಯಾನಗರ, ಹುಬ್ಬಳ್ಳಿ ತಾಲೂಕು, ಧಾರವಾಡ ಕರ್ನಾಟಕ-580021			
153	30198740003241	ವಿರೂಪಾಕ್ಷ ಕೃಷ್ಣಪ್ಪ	48.8
154	30198730040046	ಮೊಹಮ್ಮದ್ ನವಾಜ್	12.6
155	30198730039924	ಜಿ ಕುಪ್ಪು ಲಕ್ಷ್ಮಿ	3.4
156	30198730039911	ರೇಖಾ ಕಾರ್ತಿಕ್	4
157	30198730039890	ಲಕ್ಷ್ಮಿ ಕಾರ್ತಿಕ್	4
158	30198730039887	ಲಕ್ಷ್ಮಿ ರಮೇಶ್	6.4
159	30198730039835	ನಾಡಿಯ ವಿಜಯಕುಮಾರ್	3.7
160	30198730039710	ಸೌಭಾಗ್ಯ ಕೆ	14.7
161	30198730039631	ಸುಮ ಬಾಯಿ	3.9
162	30198730038476	ಶರವಣ ವಿ	7.4
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 2/1, ನೆಲಮಹಡಿ, 2ನೇ ಮೈನ್, 2ನೇ ಮಹಡಿ ಸಿ ಕೆ ಸಿ ಗಾರ್ಡನ್, ಮಿಷನ್ ರಸ್ತೆ ಕ್ರಾಸ್, ಬೆಂಗಳೂರು-560027.			
163	46658730025218	ಮಧು ಎಸ್	10.9
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ನಂ. 5, ಹೊಸ ಖಾತಾ ನಂ. 839/3735/3735/5, ಹಳೆ ಖಾತಾ ನಂ. 3735/3735/5, ಎಸ್ ನರಸಿಂಹಯ್ಯ ಲೇಔಟ್, ವಾರ್ಡ್ ನಂ. 22 ಬೂದಿಗೆರೆ ರಸ್ತೆ ಎಡಭಾಗ, 4ನೇ ವಿಭಾಗ, ದೇವನಹಳ್ಳಿ ಪಟ್ಟಣ, ಬೆಂಗಳೂರು-562110.			
164	31888740000125	ವಿಜಯ್ ಎಸ್	41
165	31888730030549	ಕವಿತ	2.8
166	31888730030447	ಸೈಯೀರ ಅಹಮದ್ ಖಾನ್	12.6
167	31888730030295	ಮಹಾಲಕ್ಷ್ಮಿ ಹೆಚ್ ಬಿ	8.3
168	31888730028140	ಸರಸ್ವತಿ ವೈ	10.5
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮತ್ತು 1ನೇ ಮಹಡಿ, ಪ್ಲಾಟ್ ನಂ. 22, ಪಿಐಡಿ ನಂ.85-6-22 ಸರ್ವಜ್ಞನಗರ, ವೀಲರ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು-560005.			
169	49268740000010	ಯಮುನ ಟಿ ಸಿ	86
170	49268740000020	ಭುವನ್ ಬಿ	70.6
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಸೈಟ್ ನಂ. 33, 17ನೇ ಕ್ರಾಸ್ ಎಂಆರ್‌ಸಿಆರ್ ಲೇಔಟ್, ವಿಜಯನಗರ, ಬೆಂಗಳೂರು-560040			

ಸ್ಥಳ: ಕರ್ನಾಟಕ
ದಿನಾಂಕ: 15.09.2025

ಸಹಿ/-ಅಧಿಕೃತ ಅಧಿಕಾರಿ
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಬಾಕ್ಸಿಂಗ್ ಚಾಂಪಿಯನ್‌ಶಿಪ್

ಭಾರತದ ಬಾಕ್ಸರ್‌ಗಳಾದ ಮೀನಾಕ್ಷಿ ಹೂಡಾ ಮತ್ತು ಜಾಸ್ಮಿನ್ ಲಂಬೋರಿಯಾ ಅವರು ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕಗಳನ್ನು ಗೆದ್ದು ಚಾರಿತ್ರಿಕ ಸಾಧನೆ ಮಾಡಿದ್ದಾರೆ. ಮೀನಾಕ್ಷಿ 48 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಕಜಕಿಸ್ತಾನದ ನಜಿಮ್ ಕೈಜೈಬೆ ಅವರನ್ನು ಮಣಿಸಿ ಚಿನ್ನದ ಪದಕಕ್ಕೆ ಕೊರಳೊಡ್ಡಿದ್ದಾರೆ. 57 ಕೆಜಿ ವಿಭಾಗದಲ್ಲಿ ಜಾಸ್ಮಿನ್ ಲಂಬೋರಿಯಾ ಒಲಿಂಪಿಕ್ ಬೆಳ್ಳಿ ಪದಕ ವಿಜೇತೆ ಪೋಲೆಂಡ್‌ನ ಜೂಲಿಯಾ ಸ್ಟೆರೆಮೆಟಾ ಅವರನ್ನು ಸೋಲಿಸಿದ್ದಾರೆ.

ಸೊಂಪಾದ ಪುಟಗಳು



ಅರಸು, ಕೃಷ್ಣ, ಯಡಿಯೂರಪ್ಪ ಅವರಿಗೆ ನಸೀಬು ಇತ್ತು
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ದಯಾಮಯಿ ದೇವರೇ, ಈ ದೇಶಕ್ಕೆ ದಯಮಾಡಿ ಆನೆ ಕೊಡು...
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ಎರಡು ಸಂಗತಿಗಳು ನೀವು ಯಾರು ಎಂಬುದನ್ನು ಹೇಳಬಲ್ಲವು. ಮೊದಲನೆಯದು, ನಿಮ್ಮಲ್ಲಿ ಏನೂ ಇಲ್ಲದಾಗ ನಿಮ್ಮ ಸಹನೆ ಮತ್ತು ಎರಡನೆಯದಾಗಿ, ನಿಮ್ಮಲ್ಲಿ ಎಲ್ಲವೂ ಇದ್ದಾಗ ನಿಮ್ಮ ವರ್ತನೆ ಮತ್ತು ಹಾವಭಾವ.

ವಕ್ರತುಂಡೋಕ್ತಿ

ಯಾರಾದರೂ ತಾನು ಕಠಿಣ ಪರಿಶ್ರಮದಿಂದ ಶ್ರೀಮಂತನಾದೆ ಎಂದು ಹೇಳಿದರೆ, ಅವರನ್ನು ಕೇಳಬೇಕಾದ ಪ್ರಶ್ನೆ ಅಂದ್ರೆ 'ಯಾರ ಪರಿಶ್ರಮದಿಂದ?'

ಅಸ್ಸಾಂನಲ್ಲಿ 18,530 ಕೋಟಿ ರೂ. ಅಭಿವೃದ್ಧಿ ಯೋಜನೆಗಳಿಗೆ ಚಾಲನೆ

ನುಸುಳುಕೋರರಿಗೆ ಕಾಂಗ್ರೆಸ್ ರಕ್ಷಣೆ: ಪ್ರಧಾನಿ ಮೋದಿ ಕಿಡಿ

ಮಂಗಲದೋಯಿ (ಅಸ್ಸಾಂ): ಪಂಚರಾಜ್ಯಗಳ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಭಾನುವಾರ ಅಸ್ಸಾಮಿನಲ್ಲಿ ಪ್ರತಿಪಕ್ಷ ಕಾಂಗ್ರೆಸ್ ವಿರುದ್ಧ ತೀವ್ರ ವಾಕ್‌ಪ್ರಹಾರ ನಡೆಸಿದರು. 'ಭಾರತೀಯ ಯೋಧರ ಪರವಾಗಿ ನಿಲ್ಲುವ ಬದಲು ಕಾಂಗ್ರೆಸ್ ಮತ್ತೆ, ಮತ್ತೆ ಒಳನುಸುಳು ಕೋರರ ಪರವೇ ನಿಲ್ಲುತ್ತಿದೆ. ದೇಶಕ್ಕೆ ಒಗ್ಗಟ್ಟಿಗೆ ಅಡ್ಡಿಯಾಗಿರುವ ದೇಶವಿರೋಧಿ ಶಕ್ತಿಗಳಿಗೆ ಕಾಂಗ್ರೆಸ್ ರಕ್ಷಣೆ ನೀಡುತ್ತಿದೆ' ಎಂದು ಮೋದಿ ಆರೋಪಿಸಿದ್ದಾರೆ.

ಅಸ್ಸಾಮಿನ ದರಾಂಗ್ ಜಿಲ್ಲೆಯ ಮಂಗಲ ದೋಯಿ, ನುಮಾಲಿಗಢ ಸೇರಿ 18,530 ಕೋಟಿ ರೂ. ಮೊತ್ತದ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿ ಮಾತನಾಡಿದ ಮೋದಿ, ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿ ಕಾಂಗ್ರೆಸ್ ವಿರುದ್ಧ ಟೀಕಾಪ್ರಹಾರ ನಡೆಸಿದರು.

''ಕಾಂಗ್ರೆಸ್ ತನ್ನ ರಾಜಕೀಯಕ್ಕಾಗಿ ಭಾರತಕ್ಕೆ ವಿರುದ್ಧವಾದ ಸಿದ್ಧಾಂತದೊಂದಿಗೆ ಸಂಬಂಧ ಹೊಂದಿದೆ. ಆಪರೇಷನ್ ಸಿಂಧೂರ್ ಕಾರ್ಯಾಚರಣೆಯಲ್ಲಿ ಪಾಕಿಸ್ತಾನದಲ್ಲಿ ಅವಿತಿದ್ದ ಭಯೋತ್ಪಾದಕರ ನಾಯಕರು ನಾಶವಾದರು. ಆದರೆ ಕಾಂಗ್ರೆಸ್, ಭಾರತೀಯ ಸೈನ್ಯದ ಬದಲು ಪಾಕಿಸ್ತಾನಿ ಸೈನ್ಯದ ಜೊತೆ ನಿಂತಿತು. ಕಾಂಗ್ರೆಸ್ ನಾಯಕರು ಭಯೋತ್ಪಾದಕರನ್ನು ಪೋಷಿಸುವವರ ಕಾರ್ಯಸೂಚಿಯನ್ನು ಪ್ರಚಾರ ಮಾಡುತ್ತಾರೆ. ಪಾಕಿಸ್ತಾನದ ಸುಳ್ಳುಗಳು ಕಾಂಗ್ರೆಸ್‌ನ ಕಾರ್ಯಸೂಚಿಯಾಗುತ್ತವೆ. ಕಾಂಗ್ರೆಸ್ ರಾಷ್ಟ್ರವಿರೋಧಿಗಳ ದೊಡ್ಡ ರಕ್ಷಕ ಪಕ್ಷವಾಗಿದೆ. ದಶಕಗಳ ಕಾಲ ಕಾಂಗ್ರೆಸ್ ಅಸ್ಸಾಂ ಅನ್ನು ಆಳಿದರೂ 60 ರಿಂದ 65 ವರ್ಷಗಳಲ್ಲಿ ಬ್ರಹ್ಮಪುತ್ರ ನದಿಯ ಮೇಲೆ ಕೇವಲ ಮೂರು ಸೇತುವೆಗಳನ್ನು ನಿರ್ಮಿಸಿದರು ಎಂದು ಪ್ರಧಾನಿ ದೂರಿದರು.

ಇದೇ ವೇಳೆ ಹಿಮಂತಾ ಬಿಸ್ವಾ ಶರ್ಮಾ ನೇತೃತ್ವದ ಸರಕಾರವನ್ನು ಹೊಗಳಿದ ಅವರು, 'ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ರೈತರ ನೆಲ ಮತ್ತು ಪೂಜಾತಾಣಗಳನ್ನು ಒತ್ತುವರಿ ಮಾಡಿತ್ತು. ಬಿಜೆಪಿ ಸರಕಾರ ಅದನ್ನು ಸರಿಪಡಿಸಲು ಹೊರಟಿದೆ ಅಸ್ಸಾಮಿನಲ್ಲಿ ಲಕ್ಷಗಟ್ಟಲೆ ಎಕರೆ ಜಾಗವನ್ನು ಒಳನುಸುಳುಕೋರರ ಮರಳಿ ಪಡೆಯಲಾಗಿದೆ' ಎಂದರು. 'ಬಿಜೆಪಿಯ ಗುರಿಯೇ ಒಳನುಸುಳುಕೋರ ರಿಂದ ದೇಶವನ್ನು ರಕ್ಷಿಸುವುದು. ಇವರ ಪರ ಮಾತನಾಡುವ ರಾಜಕಾರಣಿಗಳು ಮುಂದೆ ಬಂದು ಈ ಸಮಸ್ಯೆಯನ್ನು ಎದುರಿಸ ಬೇಕು ಎನ್ನುವುದು ನನ್ನ ಸವಾಲು. ಒಳನುಸುಳು ಕೋರರನ್ನು ಹೊರಹಾಕಲು ಅವರು ಯಾವ ಕ್ರಮ ಕೈಗೊಂಡಿದ್ದಾರೆ ಎಂದು ಹೇಳಬೇಕು. ಒಳನುಸುಳುಕೋರರಿಗೆ ಆಶ್ರಯ ನೀಡುವ ವ್ಯಕ್ತಿಗಳು ಅದಕ್ಕೆ ಬೆಲೆ ತೆರಬೇಕಾಗುತ್ತದೆ. ಅವರನ್ನು ದೇಶ ಕ್ಷಮಿಸುವುದಿಲ್ಲ' ಎಂದು ಮೋದಿ ಹೇಳಿದ್ದಾರೆ.

ಅಸ್ಸಾಮಿನಲ್ಲಿ 18,530 ಕೋಟಿ ರೂ. ಮೊತ್ತದ ಅಭಿವೃದ್ಧಿ ಯೋಜನೆಗಳಿಗೆ ಮೋದಿ ಚಾಲನೆ.

ಕಚ್ಚಾ ತೈಲ ಆಮದು ಕಡಿತಕ್ಕೆ ಕ್ರಮ

ನುಮಾಲಿಗಢದಲ್ಲಿ 12000 ಕೋಟಿ ರೂ. ಅಧಿಕ ಮೊತ್ತದ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದ ಮೋದಿ, ಭಾರತ ವಿದೇಶಿ ಇಂಧನದ ಮೇಲೆ ದೇಶ ನಿರ್ಭರವಾಗಿದೆ. ಇದನ್ನು ಬದಲಿಸಲು ಆತ್ಮನಿರ್ಭರವಾಗುವತ್ತ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಕಚ್ಚಾತೈಲ ಮತ್ತು ಅನಿಲದ ಹೊಸ ಮೂಲಗಳನ್ನು ಹುಡುಕಲಾಗುತ್ತಿದೆ, ಹಾಗೆಯೇ ಹಸಿರು ಇಂಧನ ಉತ್ಪಾದಿಸುವ ಸಾಮರ್ಥ್ಯ ಹೆಚ್ಚಳಕ್ಕೂ ಆದ್ಯತೆ ನೀಡಲಾಗಿದೆ. ಕಚ್ಚಾತೈಲ ಆಮದು ಪ್ರಮಾಣವನ್ನು ಕಡಿತಗೊಳಿಸಲಾಗುವುದು ಎಂದು ಮೋದಿ ಹೇಳಿದರು.

ಜನಸಂಖ್ಯೆ ಅನುಪಾತ ಬದಲು ಅಪಾಯಕಾರಿ

ಒಳನುಸುಳುಕೋರರಿಂದ ದೇಶದ ಜನಸಂಖ್ಯಾ ಅನುಪಾತವೇ ಬದಲಾಗುವ ಅಪಾಯದಲ್ಲಿದೆ. ಅದನ್ನು ಬದಲಿಸಲು ಸರಕಾರ ಒಂದು ಯೋಜನೆಯನ್ನೇ ಪ್ರಕಟಿಸಲು ಸಿದ್ಧವಾಗಿದೆ. ಅಸ್ಸಾಮಿನ ಹಿಮಂತಾ ಬಿಸ್ವಾ ಸರಕಾರ ಲಕ್ಷಾಂತರ ಎಕರೆ ಜಾಗವನ್ನು ಮರಳಿ ವಶಕ್ಕೆ ತೆಗೆದುಕೊಂಡಿದೆ ಎಂದು ಮೋದಿ ಹೇಳಿದ್ದಾರೆ.

ವಿಠಲಗೌಡ ಆರೋಪದ ಹಿನ್ನೆಲೆಯಲ್ಲಿ ಧರ್ಮಸ್ಥಳದಲ್ಲಿ ಮತ್ತೆ ಉತ್ಖನನ ನಿರೀಕ್ಷೆ

ಮತ್ತೆ ಬುರುಡೆ ಶೋಧ

ಬೆಂಗಳೂರು/ಧರ್ಮಸ್ಥಳ

ರಾಜ್ಯದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದ್ದ ಧರ್ಮಸ್ಥಳ ಬುರುಡೆ ಪ್ರಕರಣದಲ್ಲಿ ಎರಡನೇ ಹಂತದಲ್ಲಿ 'ಗುಂಡಿ ಅಗೆಯುವ' ಕಾರ್ಯ ಸೋಮವಾರದಿಂದ ಆರಂಭವಾಗುವುದೇ ಎನ್ನುವ ಅನುಮಾನಗಳು ಶುರುವಾಗಿದೆ. ಈ ಹಿಂದೆ ಚಿನ್ನಯ್ಯ ಮಾಡಿದ ಆರೋಪದ ಆಧಾರದಲ್ಲಿ ಎಸ್‌ಐಟಿ ಅಧಿಕಾರಿಗಳು 16 ಕಡೆ ಗುಂಡಿಗಳನ್ನು ಅಗೆದಿದ್ದರು. ಆದರೆ ಯಾವುದೇ ಅಸ್ಥಿ ಸಿಗದ ಹಿನ್ನೆಲೆಯಲ್ಲಿ ಚಿನ್ನಯ್ಯ ನನ್ನು ಬಂಧಿಸಿ ಧರ್ಮಸ್ಥಳ ವಿರುದ್ಧದ ಪಿತೂರಿ ಸಂಬಂಧ ಎಸ್‌ಐಟಿ ಅಧಿಕಾರಿಗಳು ತನಿಖೆ ಆರಂಭಿಸಿ ದ್ದರು. ಈ ನಿಟ್ಟಿನಲ್ಲಿ ಚಿನ್ನಯ್ಯನಿಗೆ ಬೆಂಬಲವಾಗಿ ನಿಂತ ಬುರುಡೆ ಗ್ಯಾಂಗ್ ಸದಸ್ಯರನ್ನು ವಿಚಾರಣೆ ಗೊಳಪಡಿಸಲಾಗಿತ್ತು. ಚಿನ್ನಯ್ಯನ ಕೈಗೆ ಬುರುಡೆ ಕೊಟ್ಟಿದ್ದಾರೆನ್ನಲಾದ ಸೌಜನ್ಯ ಮಾವ ವಿಠಲಗೌಡ ಮಹಜರು ಸಂದರ್ಭದಲ್ಲಿ ನೇತ್ರಾವತಿ ನದಿ ಬಳಿಯಿರುವ ಬಂಗ್ಲೆಗುಡ್ಡದಲ್ಲಿ ಅಸ್ಥಿಪಂಜರಗಳು ಸಿಕ್ಕಿದ್ದವು ಎನ್ನಲಾಗಿದೆ. ವಿಠಲ ಗೌಡ ಈ ಬಗ್ಗೆ ಮಾಧ್ಯಮ ಗಳಿಗೂ ಹೇಳಿಕೆ ನೀಡಿದ್ದರು.

ಬುರುಡೆ ರಹಸ್ಯ

ಇದೀಗ ಈ ಅಸ್ಥಿಗಳ ಹುಡುಕಾಟಕ್ಕಾಗಿ ಎಸ್‌ಐಟಿ ಮತ್ತೊಮ್ಮೆ ಗುಂಡಿ ಅಗೆಯಲು ಮುಂದಾಗುವ ನಿರೀಕ್ಷೆ ಇದೆ.

ಈ ಮೊದಲು 17 ಸ್ಥಳಗಳಲ್ಲಿ ಉತ್ಖನನ 'ವಾಗಿತ್ತು. ಬಂಗ್ಲೆಗುಡ್ಡ ಅರಣ್ಯ ಪ್ರದೇಶವಾಗಿದ್ದು, ಈ ಸ್ಥಳವನ್ನು '11ಎ' ಎಂದು ಗುರುತಿಸಲಾಗಿತ್ತು. 17 ಸ್ಥಳಗಳಲ್ಲಿ ಯಾವುದೇ ಗಂಭೀರ ಸ್ವರೂಪದ ಪುರಾವೆಗಳು ದೊರೆಯದ ಹಿನ್ನೆಲೆಯಲ್ಲಿ 11ಎ ಪಾಯಿಂಟ್‌ನಲ್ಲಿ ಉತ್ಖನನ ನಡೆಸದೆ ಕೈಬಿಡಲಾಗಿತ್ತು. ಆದರೆ ಅಲ್ಲಿ ದೊರೆತಿದ್ದ ಕೆಲವು ಮೂಳೆಗಳನ್ನು ಎಸ್‌ಐಟಿ ತಂಡ ಸಂಗ್ರಹಿಸಿ ಹೆಚ್ಚಿನ ಪರೀಕ್ಷೆಗಾಗಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿತ್ತು.

ಎಸ್‌ಐಟಿ ತನ್ನನ್ನು ನೇತ್ರಾವತಿ ದಂಡೆಯಲ್ಲಿರುವ ಬಂಗ್ಲೆಗುಡ್ಡ ಕಾಡಿಗೆ ಕರೆದುಕೊಂಡು ಹೋದಾಗ ಮೊದಲ ದಿನ 5 ಹಾಗೂ ಎರಡನೇ ದಿನ 3 ಅಸ್ಥಿಪಂಜರಗಳನ್ನು ನೋಡಿದ್ದಾಗಿ ವಿಠಲಗೌಡ ಹೇಳಿದ್ದರು.

ಆದ್ದರಿಂದ ಇದೀಗ ಈ ಭಾಗದಲ್ಲಿ ಉತ್ಖನನ ನಡೆಸುವ ಬಗ್ಗೆ ಚರ್ಚೆ ನಡೆಸಲಾಗಿದೆ. ಆದರೆ ಅರಣ್ಯ ಪ್ರದೇಶದಲ್ಲಿ ಉತ್ಖನನಕ್ಕೆ ಜಿಲ್ಲಾಧಿಕಾರಿ ಜತೆಗೆ ಅರಣ್ಯ ಇಲಾಖೆ ಪೂರ್ವಾನುಮತಿಯೂ ಅಗತ್ಯವಿದೆ. ಈ ಕಾರಣಕ್ಕೆ ಕಾನೂನಿನ ಸಾಧಕ-ಬಾಧಕಗಳ ಬಗ್ಗೆ ಚರ್ಚೆಗಳಾಗಿವೆ ಎಂದು ತಿಳಿದುಬಂದಿದೆ.

→ 4

ಅಧಿಕಾರಿಗಳೊಂದಿಗೆ ಪ್ರಣಬ್ ಮೊಹಂತಿ ಚರ್ಚೆ

ಎಸ್‌ಐಟಿ ಮುಖ್ಯಸ್ಥ ಪ್ರಣಬ್ ಮೊಹಂತಿ ಅವರು ಭಾನುವಾರ ಧರ್ಮಸ್ಥಳಕ್ಕೆ ಭೇಟಿ ನೀಡಿದ್ದು, ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದಾರೆ. ವಿಠ್ಠಲ ಗೌಡ ನೀಡಿರುವ ದೂರು, ಮಾಹಿತಿಯನ್ನು ಆಧರಿಸಿ ಮತ್ತೆ ಉತ್ಖನನ ಮಾಡುವ ಸಂಬಂಧ ಚರ್ಚೆ ನಡೆಸಲಾಗಿದೆ. ಕಳೆದ ಬಾರಿ ಮಾಸ್ಕ್ ಮ್ಯಾನ್ ಮಾಡಿದ್ದ ಆರೋಪವನ್ನೇ ಆಧಾರವಾಗಿಟ್ಟುಕೊಂಡು ತನಿಖೆ ನಡೆಸಿದ್ದರಿಂದ ಸರಕಾರಕ್ಕೆ ಹಾಗೂ ಎಸ್‌ಐಟಿಗೆ ತೀವ್ರ ಮುಜುಗರವಾಗಿತ್ತು. ಈ ಹಿನ್ನೆಲೆಯಲ್ಲಿ ಮುಂದಿನ ಕ್ರಮದ ಬಗ್ಗೆ ಪರಿಶೀಲನೆ ನಡೆಸಲಾಗಿದೆ.

ಸಾಲದ ಶೂಲ: ಮೂವರ ಸಾವು

ಹೊಸಕೋಟೆ: ಸಾಲಬಾಧೆ ತಾಳಲಾರದೆ ಆತ್ಮಹತ್ಯೆಗೆ ಯತ್ನಿಸಿದ ಒಂದೇ ಕುಟುಂಬದ ನಾಲ್ವರ ಪೈಕಿ ಮೂವರು ಸಾವನ್ನಪ್ಪಿರುವ ಘಟನೆ ತಾಲ್ಲೂಕಿನ ಗೊಣಕನಹಳ್ಳಿಯಲ್ಲಿ ನಡೆದಿದೆ. ಪತಿ ಶಿವು (32), ಚಂದ್ರಕಲಾ (11), ಉದಯ ಸೂರ್ಯ (7) ಮೃತ ದುರ್ದೈವಿಗಳು. ಅಪಘಾತದಲ್ಲಿ ಗಾಯಗೊಂಡಿದ್ದ ಶಿವು ಚಿಕಿತ್ಸೆಗಾಗಿ ಸಾಲ ಮಾಡಿಕೊಂಡಿದ್ದರು. ಸಾಲಗಾರರ ಒತ್ತಡ ಹೆಚ್ಚಾದ ಹಿನ್ನೆಲೆಯಲ್ಲಿ ದಂಪತಿ ಆತ್ಮಹತ್ಯೆಗೆ ನಿರ್ಧರಿಸಿದ್ದರು.

ಮೃತರಿಗೆ ಹುತಾತ್ಮರ ಪಟ್ಟ

ಕಠ್ಮಂಡು: ಸರಕಾರದ ವಿರುದ್ಧ ಹೋರಾಟ ನಡೆಸಿ ಪ್ರತಿಭಟನೆ ವೇಳೆ ಮೃತಪಟ್ಟ ಯುವಕರಿಗೆ ಹುತಾತ್ಮರ ಪಟ್ಟ ನೀಡಲು ನೇಪಾಳದ ನೂತನ ಸರಕಾರ ನಿರ್ಧರಿಸಿದೆ. ಸುದ್ದಿಗಾರರ ಜತೆ ಮಾತನಾಡಿದ ನೇಪಾಳದ ಮಧ್ಯಂತರ ಪ್ರಧಾನಿ ಸುಶೀಲಾ ಕರ್ಕಿ, ಸಂತ್ರಸ್ತರ ಕುಟುಂಬಗಳಿಗೆ 10 ಲಕ್ಷ ನೇಪಾಳಿ ರುಪಾಯಿಗಳ ಪರಿಹಾರ ಪ್ರಕಟಿಸಿದ್ದಾರೆ. ಗಾಯಗೊಂಡವರ ಚಿಕಿತ್ಸಾ ವೆಚ್ಚವನ್ನು ಸರಕಾರ ಭರಿಸುತ್ತದೆ ಎಂದು ಅವರು ಹೇಳಿದರು.

ವಲಸೆ ವಿರುದ್ಧ ಪ್ರತಿಭಟನೆ

ಲಂಡನ್: ಅನ್ಯದೇಶದ ಜನರ ವಲಸೆ ನಿಯಂತ್ರಣಕ್ಕೆ ಆಗ್ರಹಿಸಿ ಲಂಡನ್ ಮಹಾ ನಗರದಲ್ಲಿ ಶನಿವಾರ ಬಲಪಂಥೀಯ ಸಂಘಟನೆಗಳ ಭಾರೀ ಪ್ರತಿಭಟನೆ ನಡೆದಿದ್ದು, ಇದು ಬ್ರಿಟನ್ ಇತಿಹಾಸದಲ್ಲೇ ಅತಿ ದೊಡ್ಡ ಪ್ರತಿಭಟನೆ ಎನ್ನಲಾಗಿದೆ. ಬಲಪಂಥೀಯ ಹೋರಾಟಗಾರ ಟಾಮಿ ರಾಬಿನ್ಸನ್ 'ಯುನೈಟ್ ದಿ ಕಿಂಗ್ಡಮ್' ಹೆಸರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಒಂದೂವರೆ ಲಕ್ಷ ಬ್ರಿಟಿಷ್ ಪ್ರಜೆಗಳು ಭಾಗವಹಿಸಿದ್ದರು.

ಮೂರು ದಿನ ನೀರಿಲ್ಲ

ಬೆಂಗಳೂರು: ತುರ್ತು ನಿರ್ವಹಣಾ ಕಾಮಗಾರಿ ಹಿನ್ನೆಲೆಯಲ್ಲಿ ಬೆಂಗಳೂರಿಗೆ ಮೂರು ದಿನಗಳ ಕಾಲ ಕಾವೇರಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ. ಸಂಚಾರಿ ಕಾವೇರಿ ಯೋಜನೆ ಟ್ಯಾಂಕರ್‌ಗಳ ನೀರು ಸೇವೆಯೂ ಸ್ಥಗಿತವಾಗಲಿದೆ.



ಸಮಾಚಾರ ಸಣ್ಣದಲ್ಲ

ಮುಸ್ಲಿಮರು ಇನ್ನೂ ಗುಡಿಸಲಲ್ಲಿದ್ದಾರೆ

ಹಾವೇರಿ: ಮುಸ್ಲಿಮರು ಇನ್ನೂ ಗುಡಿಸಲಲ್ಲಿದ್ದಾರೆ. ಅನೇಕರಿಗೆ ಕುಡಿಯಲು ನೀರಿಲ್ಲ, ಶೌಚಾಲಯ ಇಲ್ಲ. ನಾವು ಅವರಿಗೆ ಬಹಳ ದೊಡ್ಡದಾಗಿ ಏನೂ ಮಾಡಿಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು, ಕಾಂಗ್ರೆಸ್‌ನಿಂದ ಮುಸ್ಲಿಂ ತುಷ್ಟೀಕರಣ ಮಾಡಿಲ್ಲ. ಪಾಕಿಸ್ತಾನ ಜಿಂದಾಬಾದ್ ಕೂಗಿದವರನ್ನು ಸಮರ್ಥಿಸುವುದಿಲ್ಲ. ಬಿಜೆಪಿ ಯವರು ಎಲ್ಲದಕ್ಕೂ ವಿರೋಧ ಮಾಡುತ್ತಾರೆ. ಅವರು ರಾಜಕೀಯ ಮಾಡಲಿ. ದಸರಾ ಉದ್ಘಾಟನೆ ಯಾರು ಮಾಡ ಬೇಕು ಎಂಬುದನ್ನು ಸರಕಾರ ಆಯ್ಕೆ ಮಾಡುತ್ತದೆ. ಅದು ಸರಕಾರದ ಅಧಿಕಾರ ಮತ್ತು ಹಕ್ಕು. ಕೋರ್ಟ್‌ಗೆ ಹೋದರೂ ಸರಕಾರದ ನಿರ್ಧಾರವೇ ಅಂತಿಮ ಎಂದೇ ಆಗುತ್ತದೆ. ಕನ್ನಡಾಂಬೆ ಬಗ್ಗೆ ಬಾನು ಯಾವಾಗ ಏನು ಹೇಳಿದರೋ ಗೊತ್ತಿಲ್ಲ. ಯಾವಾಗಲೋ ಹೇಳಿದ್ದನ್ನು ಈಗ ಮುನ್ನೆಲೆಗೆ ತರಲು ಆಗುವುದಿಲ್ಲ ಎಂದರು.

ಆಗುಂಬೆ ಬಳಿ ಮತ್ತೆ ಕಾಡಾನೆ ಪ್ರತ್ಯಕ್ಷ

ತೀರ್ಥಹಳ್ಳಿ: ಇತ್ತೀಚಿಗೆ ಆಗುಂಬೆ ಗ್ರಾಮ ಪಂಚಾಯತಿ ಹಾಗೂ ಬಿದರಗೋಡು ಗ್ರಾಮ ಪಂಚಾಯತಿ ವ್ಯಾಪ್ತಿಯ ಆಗಸರಕೋಣೆ, ಕಾರೆಕುಂಬ್ರಿ, ಜಡ್ಡು, ಮಳಲಿ, ತಲ್ಲೂರು, ಆಗುಂಬೆ, ಉಳುಮಡಿ ಭಾಗದಲ್ಲಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಕಾಡಾನೆ ಸಂಚರಿಸುತ್ತಿರುವುದಾಗಿ ಅರಣ್ಯ ಇಲಾಖೆಯ ಪ್ರಕಟಣೆ ಹೊರಡಿಸಿತ್ತು. ಶೃಂಗೇರಿ ಭಾಗದಿಂದ ಬಂದಿರುವ ಕಾಡಾನೆ ತೀರ್ಥಹಳ್ಳಿ ಬಾರ್ಡರ್ ಗೆ ಬಂದಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರ ಮಾಡಲಾಗಿತ್ತು. ಆದರೆ ಅದು ಸುಳ್ಳು ಎಂಬುದಾಗಿ ಹಲವರು ವಿಮರ್ಶೆ ಮಾಡಿದರು.

ಆ ನಂತರ ಆಗುಂಬೆ ಭಾಗಕ್ಕೆ ಕಾಡಾನೆ ಬಂದಿರುವುದು ಹೌದು ಎಂದು ಅರಣ್ಯ ಇಲಾಖೆ ಹಾಗೂ ಪೊಲೀಸ್ ಇಲಾಖೆ ಸ್ಪಷ್ಟಪಡಿಸಿತ್ತು. ಆ ನಂತರ ಕಾಣದೆ ಮಾಯವಾಗಿದ್ದ ಕಾಡಾನೆ ಭಾನುವಾರ ಸಂಜೆ 7:30ರ ಸಮಯದಲ್ಲಿ ಆಗುಂಬೆ ಚರ್ಚ್ ಬಳಿ ಕಾಣಿಸಿಕೊಂಡಿದೆ. ಈಗಾ ಗಲೇ ಪೊಲೀಸ್ ಇಲಾಖೆಯಿಂದ ಮೈಕ್ ಮೂಲಕ ಮಕ್ಕಳು, ವೃದ್ಧರು ಹೆಚ್ಚಿನ ಜಾಗರೂಕತೆಯಿಂದ ಸಂಚರಿಸಬೇಕು ಹಾಗೂ ಹಾಗೂ ಸಂಜೆ ಆರು ಗಂಟೆಯಿಂದ ಮೇಲ್ಕಂಡ ಗ್ರಾಮಗಳಲ್ಲಿ ವಾಹನಗಳಲ್ಲಿ ಹಾಗೂ ಕಾಲ್ನಡಿಗೆಯಲ್ಲಿ ಅನಗತ್ಯವಾಗಿ ಓಡಾಡ ಬಾರದೆಂದು ತಿಳಿಸಲಾಗುತ್ತಿದೆ.

ಜರ್ಮನ್ ವೀಸಾ ಭರವಸೆ: ವಂಚನೆ

ಕಾಸರಗೋಡು: ಜರ್ಮನ್ ವೀಸಾ ಭರವಸೆ ನೀಡಿ 2.50 ಲಕ್ಷ ರು. ವಂಚಿಸಿದ ಪ್ರಕರಣಕ್ಕೆ ಸಂಬಂಧಿಸಿ ಸೂತ್ರದಾರ ಪಿ.ಬಿ. ಗೌತಂ ಕೃಷ್ಣ (30) ಎಂಬಾತನನ್ನು ಹೊಸದುರ್ಗ ಪೊಲೀಸರು ಬಂಧಿಸಿದ್ದಾರೆ. ಪುದುಕ್ಕೈ ನಿವಾಸಿ ಕೆ.ವಿ. ನಿತಿನ್ ಜಿತ್ ವಂಚನೆಗೆ ಒಳಗಾದವರು. ಹೊಸದುರ್ಗ ಪೊಲೀಸ್ ಇನ್‌ಸ್ಪೆಕ್ಟರ್ ಪಿ. ಅಜಿತ್ ಕುಮಾರ್ ನೇತೃತ್ವದಲ್ಲಿ ಎಸ್‌ಐ ಎಂ.ವಿ. ವಿಷ್ಣು ಪ್ರಸಾದ್ ಮತ್ತು ಪೊಲೀಸರು ಕಾರ್ಯಾಚರಣೆ ನಡೆಸಿದ್ದಾರೆ. ಎರಡನೇ ಆರೋಪಿಯಾಗಿರುವ ಪಿ.ಎಸ್. ನಂದು ಎಂಬಾತನಿಗೆ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ಅತ್ತೆ ಮೇಲೆ ಸೊಸೆ ಹಲ್ಲೆ

ಕೋಲಾರ: ಅತ್ತೆಗೆ ತನ್ನ ಅಕ್ರಮ ಸಂಬಂಧ ತಿಳಿದಿದ್ದಕ್ಕೆ ಸೊಸೆ ಹಾಗೂ ಆಕೆಯ ಪ್ರಿಯಕರ ಸೇರಿ ಮಾರಣಾಂತಿಕ ಹಲ್ಲೆ ನಡೆಸಿರುವುದು ಶ್ರೀನಿವಾಸಪುರದ ಗುಮ್ಮಲಪಲ್ಲಿ ಗ್ರಾಮದಲ್ಲಿ ನಡೆದಿದೆ. ಸೊಸೆ ಹಾಗೂ ಆಕೆಯ ಪ್ರಿಯಕರ ಶಶಿಕುಮಾರ್‌ನನ್ನು ಪೊಲೀಸರು ಬಂಧಿಸಿ ದ್ದಾರೆ. ಹಲ್ಲೆಗೊಳಗಾದ ಅತ್ತೆ ರಮಣ ಮ್ಮರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಕಳೆದ 7 ವರ್ಷಗಳ ಹಿಂದೆ ತುಮ್ಮಲಪಲ್ಲಿ ಗ್ರಾಮದ ಮಂಜು ನಾಥ್ ರೆಡ್ಡಿಯನ್ನು ಆಂಧ್ರಪ್ರದೇಶ ಮೂಲದ ಮಹಿಳೆ ಪ್ರೀತಿಸಿ ಮದುವೆಯಾಗಿದ್ದಳು. ಮದುವೆ ಯಾದ ಬಳಿಕ ಶಶಿಕುಮಾರ್‌ನೊಂದಿಗೆ ಅಕ್ರಮ ಸಂಬಂಧವನ್ನು ಹೊಂದಿದ್ದಳು. ಈ ವಿಚಾರ ಆಕೆಯ ಅತ್ತೆಗೆ ಗೊತ್ತಾಗಿತ್ತು. ಇದರಿಂದ ಸಿಟ್ಟಿಗೆದ್ದ ಸೊಸೆ ಹಾಗೂ ಆಕೆಯ ಪ್ರಿಯಕರ ಸೇರಿ ಅತ್ತೆ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ್ದಾರೆ. ಗಂಭೀರವಾಗಿ ಗಾಯಗೊಂಡ ರಮಣಮ್ಮನನ್ನು ಆಸ್ಪತ್ರೆಗೆ ದಾಖ ಲಿಸಿ, ಚಿಕಿತ್ಸೆ ನೀಡಲಾಗುತ್ತಿದೆ. ಸದ್ಯ ರಾಯಲ್ಪಾಡು ಪೊಲೀಸರು ಸೊಸೆ ಹಾಗೂ ಶಶಿಕುಮಾರ್‌ನನ್ನು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ನನ್ನ ಮೆದುಳು 200 ಕೋಟಿ ಬೆಲೆ ಬಾಳುತ್ತದೆ
- ಸಚಿವ ಗಡ್ಕರಿ

ಸುದ್ದಿ



ಬಿಜೆಪಿ-ಕಾಂಗ್ರೆಸ್‌ನ ಹಲವು ನಾಯಕರಿಂದ ವಿರೋಧ | ಕೇಂದ್ರ ಸರಕಾರದ ವಿರುದ್ಧ ಪ್ರತಿಪಕ್ಷ ನಾಯಕರು ಕಿಡಿ

ಇಂಡೋ-ಪಾಕ್ ಪಂದ್ಯಕ್ಕೆ ರಾಜ್ಯಾದ್ಯಂತ ವಿರೋಧ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಏಷ್ಯಾ ಕಪ್‌ನಲ್ಲಿ ಪಾಕಿಸ್ತಾನ ವಿರುದ್ಧ ಭಾರತ ಪಂದ್ಯವಾಡುತ್ತಿರುವುದು ರಾಜ್ಯದಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ.

ಪಹಲ್ಗಾಮ್ ಘಟನೆಯ ಬಳಿಕ ಪಾಕಿಸ್ತಾನದೊಂದಿಗೆ ಎಲ್ಲ ರೀತಿಯ ಸಂಬಂಧಕ್ಕೆ ಬ್ರೇಕ್ ಹಾಕಲಾಗಿದೆ. ಈ ಮಧ್ಯೆ ಪಾಕಿಸ್ತಾನ ಮತ್ತು ಭಾರತದ ನಡುವಿನ ಏಷ್ಯಾ ಕಪ್ ಕ್ರಿಕೆಟ್ ಪಂದ್ಯವಾಡಲು ಅವಕಾಶ ನೀಡಿದ್ದಕ್ಕಾಗಿ ದೇಶದಲ್ಲಿ ವಿರೋಧ ವ್ಯಕ್ತವಾಗುತ್ತಿದೆ. ಬಿಜೆಪಿ ನಾಯಕರು ಸಹ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಕೇಂದ್ರ ಸರಕಾರದ ವಿರುದ್ಧ ಪ್ರತಿಪಕ್ಷ ನಾಯಕರು ಕಿಡಿಕಾರುತ್ತಿದ್ದಾರೆ. ಯುದ್ಧ ನಿಲ್ಲಿಸುವ ತಾಕತ್ತು ಇರುವ ಪ್ರಧಾನಿ ಮೋದಿಯವರಿಗೆ ಇಂಡೋ ಪಾಕ್ ಮಧ್ಯದ ಪಂದ್ಯ ನಿಲ್ಲಿಸಲು ಆಗೋಲ್ವ ಎಂದು ಲೇವಡಿ ಮಾಡುತ್ತಿದ್ದಾರೆ. ಬಾಯ್ಕಾಟ್ ಇಂಡಿಯಾ ವರ್ಸಸ್ ಪಾಕಿಸ್ತಾನ ಎಂದು ಸೋಶಿಯಲ್ ಮೀಡಿಯಾಗಳಲ್ಲಿ ಅಭಿಯಾನ ಶುರು ಆಗಿದೆ.

ಪಾಕಿಸ್ತಾನ ವಿರುದ್ಧ ಆಡುತ್ತಿರುವುದಕ್ಕೆ ಕೆಪಿಸಿಸಿ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಸೌಮ್ಯಾ ರೆಡ್ಡಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು. ಈ ವೇಳೆ ಮಹಿಳಾ ಘಟಕದ ಕಾರ್ಯಕರ್ತೆಯರು ಸಿಂದೂರ ಹಾಗೂ ಕ್ಯಾಂಡಲ್ ಹಿಡಿದು ಪ್ರತಿಭಟನೆ ನಡೆಸಿದರು. ಆದರೆ ಈ ವೇಳೆ ಕೆಲ ಯುವಕರು, ಪ್ರತಿಭಟನೆಗೆ ಅಕ್ಷೇಪ ವ್ಯಕ್ತಪಡಿಸಿದ್ದಕ್ಕೆ ಸ್ಥಳದಲ್ಲಿ ಕೆಲ ಕಾಲ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

ಪ್ರತಿಭಟನೆ ವೇಳೆ ಮಾತನಾಡಿದ ಕೆಪಿಸಿಸಿ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಸೌಮ್ಯಾ ರೆಡ್ಡಿ, ಪಹಲ್ಗಾಮ್‌ನಲ್ಲಿ ನಡೆದ ಘಟನೆಗೆ ಇಡೀ ದೇಶದ ಜನರ ರಕ್ತ ಕುದಿಯುತ್ತಿದೆ. ಪಾಕಿಸ್ತಾನದೊಂದಿಗೆ ಎಲ್ಲ ರೀತಿಯ ಸಂಪರ್ಕವನ್ನು ಕಡಿತಗೊಳಿಸಿರುವ ಈ ಸಮಯದಲ್ಲಿ ಏಷ್ಯಾ ಕಪ್‌ನಲ್ಲಿ ಪಾಕಿಸ್ತಾನದ ವಿರುದ್ಧ ಈ ಪಂದ್ಯದ ಅಗತ್ಯತೆ ಏನಿತ್ತು? ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಪುತ್ರ ಐಸಿಸಿ ಅಧ್ಯಕ್ಷರಾಗಿದ್ದಾರೆ ಎನ್ನುವ ಕಾರಣಕ್ಕೆ ಈ ಪಂದ್ಯವಾಡಲು ಬಿಟ್ಟಿರುವುದು ಎಷ್ಟು ಸರಿ? ಎಂದು ಪ್ರಶ್ನಿಸಿದ್ದಾರೆ. ಉಗ್ರ ದಾಳಿಯಲ್ಲಿ ಮಣಿದವರ ಕುಟುಂಬಗಳು ಈಗಲೂ ಕಣ್ಣೀರಿನಲ್ಲಿ ಮುಳುಗಿವೆ. ಮದ್ದೂರಿನಲ್ಲಿ ನಡೆದ ಘಟನೆಯಲ್ಲಿ ರಾಜಕೀಯ ಬೇಳೆ ಬೇಯಿಸಿ ಕೊಳ್ಳಲು ಹೋದ ಅಶೋಕ್, ವಿಜಯೇಂದ್ರ, ತೇಜಸ್ವಿ ಸೂರ್ಯ, ಪ್ರತಾಪ್ ಸಿಂಹ ಈಗ ಎಲ್ಲಿದ್ದಾರೆ? ಮೋದಿ, ಅಮಿತ್ ಶಾ ಹೇಳಿದರೆ ಪಂದ್ಯ ನಡೆಯುವು ದಿಲ್ಲ ಎಂದು ಹಿರಿಯ ಕ್ರಿಕೆಟಿಗರೇ ಹೇಳುತ್ತಿದ್ದಾರೆ. ಆದರೆ ಏಕೆ ಸೂಚನೆ ನೀಡುತ್ತಿಲ್ಲ? ಪಂದ್ಯ ನಡೆಯ ದಿದ್ದರೆ ಬಿಸಿಸಿಐಗೆ ಹಣ ಬರುವುದಿಲ್ಲ ಎನ್ನುವ ಕಾರಣಕ್ಕೆ ಪಂದ್ಯ ನಡೆಸಲು ಬಿಟ್ಟಿದ್ದಾರೆ ಎಂದು ಆರೋಪಿಸಿದರು.

ಪಾಕಿಸ್ತಾನ ವಿರುದ್ಧ ಆಡುತ್ತಿರುವುದಕ್ಕೆ ಕೆಪಿಸಿಸಿ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಸೌಮ್ಯಾ ರೆಡ್ಡಿ ನೇತೃತ್ವ ದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪಂದ್ಯವಾಡೋಕೆ ಬಿಟ್ಟಿದ್ದು ಏಕೆ?

ಇದೇ ವಿಷಯಕ್ಕೆ ಸಂಬಂಧಿಸಿದಂತೆ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿರುವ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್, ನಮ್ಮನ್ನು ಪಾಕಿಸ್ತಾನದವರು ಎಂದು ಪ್ರತಿಬಾರಿಯೂ ಬಿಜೆಪಿಯವರು ಬೈಯುತ್ತಾರೆ. ಆದರೆ ಈಗ ಪಾಕಿಸ್ತಾನದೊಂದಿಗೆ ಪಂದ್ಯವಾಡಲು ಹೇಗೆ ಬಿಡುತ್ತಾರೆ? ಪಹಲ್ಗಾಮ್, ಪುಲ್ವಾಮ, ಪಾಕಿಸ್ತಾನದೊಂದಿಗೆ ಹೋರಾಡಿ ದೇಶಕ್ಕಾಗಿ ಮಡಿದವರಿಗೆ ಗೌರವವಿಲ್ಲವೇ? ಬಿಜೆಪಿ ನಾಯಕರಿಗೆ ಧಮ್ ಇದ್ದರೆ ಏಷ್ಯಾ ಕಪ್ ಕ್ರಿಕೆಟ್ ಪಂದ್ಯ ನಿಲ್ಲಿಸಲಿ ಎಂದು ಸವಾಲು ಹಾಕಿದ್ದರು.

ಮದ್ದೂರಿನಲ್ಲಿ ಪ್ರತಿಪಕ್ಷ ನಾಯಕ ಅಶೋಕ್ ಅವರೇ ಬಾಯಿಬಡ್ಕೊಳೋದಲ್ಲ. ನಿಮ್ಮ ಹೈಕಮಾಂಡ್‌ಗೆ ಕರೆ ಮಾಡಿ ಮ್ಯಾಚ್ ಕ್ಯಾನ್ಸಲ್ ಮಾಡಿಸೋಕೆ ಹೇಳಿ. ಇವರದೆಲ್ಲ ಒಳಗೊಂದು-ಹೊರ ಗೊಂದು. ರಾಜ್ಯ ಬಿಜೆಪಿ ನಾಯಕರಿಗೆ ಧಮ್ ಇದ್ದರೆ, ಭಾರತ-ಪಾಕಿಸ್ತಾನ ಪಂದ್ಯವನ್ನು ರದ್ದುಪಡಿಸಲಿ. ಬಿಜೆಪಿಯ ಶಾಸಕರಿಗೆ ಇದು ನನ್ನ ಸವಾಲ್.

-**ಪ್ರದೀಪ್ ಈಶ್ವರ್**, ಶಾಸಕ

ಪಹಲ್ಗಾಮ್ ಹತ್ಯಾಕಾಂಡ, ಆಪರೇಷನ್ ಸಿಂದೂರ, ಭಾರತ ಬಗ್ಗೆ ಪಾಕ್ ಹೇಳಿಕೆಗಳನ್ನು ಪರಿಗಣಿಸಬೇಕು. ಇದೆಲ್ಲದರ ಹಿನ್ನೆಲೆಯಲ್ಲಿ ಈ ಮ್ಯಾಚ್ ಅನ್ನು ನಡೆಸದಿದ್ದರೆ ಚೆನ್ನಾಗಿತ್ತು. ಕ್ರೀಡೆ ಇರಬೇಕು. ಆದರೆ ದೇಶ, ದೇಶದ ಜನರ ಭಾವನೆ ಬಹಳ ಮುಖ್ಯ. ಬಿಸಿಸಿಐ ದೇಶದ ಜನರ ಭಾವನೆಗಳಿಗೆ ತಕ್ಕ ನಿರ್ಧಾರ ತೆಗೆದುಕೊಂಡಿಲ್ಲ.

-**ಬಸವರಾಜ ಬೊಮ್ಮಾಯಿ**, ಮಾಜಿ ಮುಖ್ಯಮಂತ್ರಿ

ಜಗತ್ತಿನ ಯಾವುದೋ ಒಂದು ಒತ್ತಡಕ್ಕಾಗಿ ಪಾಕಿಸ್ತಾನದೊಂದಿಗೆ ಭಾರತ ಕ್ರಿಕೆಟ್ ಆಗಲಿ, ಫುಟ್ಬಾಲ್ ಆಗಲಿ ಆಡಬಾರದು. ಭಾರತ-ಪಾಕಿಸ್ತಾನ ನಡುವಿನ ಕ್ರಿಕೆಟ್ ಪಂದ್ಯಕ್ಕೆ ನನ್ನ ವಿರೋಧ ಇದೆ. ಭಾರತದ ವಿರುದ್ಧ ಪಾಕಿಸ್ತಾನ ನಿರಂತರವಾಗಿ ಭಯೋತ್ಪದನೆಯಲ್ಲಿ ತೊಡಗಿದೆ. ಇಂತಹ ಕಾಲದಲ್ಲಿ ಪಾಕಿಸ್ತಾನಕ್ಕೆ ಗುಂಡಿಗೆ ಗುಂಡು ಕೊಡುವ ಕೆಲಸ ಮಾಡಬೇಕು ಹೊರತು ಅವರೊಂದಿಗೆ ಯಾವುದೇ ಆಟವಾಡಬಾರದು.

-**ಬಸನಗೌಡ ಪಾಟೀಲ್ ಯತ್ನಾಳ್**, ಶಾಸಕ

ಮತ್ತೆ ಬುರುಡೆ ಶೋಧ

← ಮೊದಲಪುಟದಿಂದ

ಸ್ನೇಹಮಯಿ ಕೃಷ್ಣ ವಿರುದ್ಧ ದೂರು

ಕೆಲ ದಿನಗಳ ಹಿಂದೆ ಸೌಜನ್ಯ ಹತ್ಯಾಚಾರ ಪ್ರಕರಣದಲ್ಲಿ ಆಕೆಯ ಮಾವ ವಿಠ್ಠಲ ಗೌಡನ ಕೈವಾಡವಿದೆ ಎಂದು ಆರೋಪಿಸಿದ್ದ ಸಾಮಾಜಿಕ ಕಾರ್ಯಕರ್ತರ ಸ್ನೇಹಮಯಿ ಕೃಷ್ಣ ವಿರುದ್ಧ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಸ್ನೇಹಮಯಿ ಕೃಷ್ಣ ಯಾರದ್ದೋ ಸೂಚನೆಯ ಮೇರೆಗೆ ವಿಠ್ಠಲ್ ಗೌಡ ವಿರುದ್ಧ ಸುಳ್ಳು ಆರೋಪಗಳನ್ನು ಹೊರಿಸಿದ್ದಾನೆ. ಸೌಜನ್ಯ ಪರ ಹೋರಾಟವನ್ನು ಬೇರೆಡೆಗೆ ತಿರುಗಿಸಲು ಪ್ರಯತ್ನಿಸಿದ್ದಾನೆ. ಇದರ ಹಿಂದೆ ಸೌಜನ್ಯ ಕೊಲೆಗಾರರ ಕೈವಾಡವಿರಬಹುದು ಎಂದು ಬೆಳ್ತಂಗಡಿ ತಾಲೂಕಿನ ಇಂದಬೆಟ್ಟು ನಿವಾಸಿ, ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತ ವೆಂಕಪ್ಪ ಕೋಟ್ಯಾನ್ ದೂರಿನಲ್ಲಿ ತಿಳಿಸಿದ್ದಾರೆ.



ಧರ್ಮಸ್ಥಳ ಪ್ರಕರಣದಲ್ಲಿ ಷಡ್ಯಂತ್ರ ಮಾಡಿರುವ ಮುಖ್ಯ ಜನರನ್ನು ಮುಟ್ಟಿಯೇ ಇಲ್ಲ. ಎಸ್‌ಐಟಿಯವರು ನಮ್ಮನ್ನು ಮುಟ್ಟಲ್ಲ ಅಂತ ಅವರಿಗೂ ಖಾತ್ರಿ ಆಗಿದೆ, ಅದಕ್ಕಾಗಿಯೇ ಅವರು ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಅವರ ಬಂಧನವೂ ಆಗಿಲ್ಲ. ಬಂಧನ ಮಾಡದೆಯೇ ವಿಚಾರಣೆ ಮಾಡಿ ಎಂದು ಗೃಹ ಸಚಿವರೇ ಹೇಳಿದ್ದಾರೆ. ಹೊಸ ಹೊಸ ದೂರು ತೆಗೆದುಕೊಳ್ಳೋದು, ಮತ್ತೆ ವಿಚಾರಣೆ ಮಾಡೋದು ಇದು ಸರಿಯಲ್ಲ-

ಬಸವರಾಜ ಬೊಮ್ಮಾಯಿ,
ಮಾಜಿ ಮುಖ್ಯಮಂತ್ರಿ

ವಿದೇಶಿ ವಿವಿ ಸ್ಥಾಪನೆಗೆ ಖಂಡನೆ

ಬೆಂಗಳೂರು: ರಾಜ್ಯದ ಉನ್ನತ ಶಿಕ್ಷಣ ಸಚಿವರು ಲಂಡನ್ ಪ್ರವಾಸ ಕೈಗೊಂಡಿದ್ದು, ರಾಜ್ಯದಲ್ಲಿ ವಿದೇಶಿ ವಿಶ್ವ ವಿದ್ಯಾನಿಲಯಗಳಿಗೆ ಅವಕಾಶ ಕಲ್ಪಿಸುವುದಾಗಿ ಹೇಳಿರುವ ಹೇಳಿಕೆಯನ್ನು ಎಐಡಿಎಸ್‌ಒ ಸಂಘಟನೆ ಖಂಡಿಸಿದೆ. ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾತನಾಡಿರುವ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್, ರಾಜ್ಯ ಸರಕಾರಿ ವಿಶ್ವ ವಿದ್ಯಾನಿಲಯಗಳಲ್ಲಿ ಅಧ್ಯಾಪಕರು ಹಾಗೂ ಮೂಲಭೂತ ಸೌಕರ್ಯಗಳ ಕೊರತೆಯನ್ನು ಎದುರಿಸುತ್ತಿರುವ ಸಂದರ್ಭದಲ್ಲಿ, ಸರಕಾರದ ಮತ್ತು ಉನ್ನತ ಶಿಕ್ಷಣ ಸಚಿವರ ಈ ನಡೆ ಹಾಸ್ಯಾಸ್ಪದವಾಗಿದೆ. ಪ್ರಸ್ತುತ ಸರಕಾರಿ ಶುಲ್ಕಗಳನ್ನು ಭರಿಸಲು ಸಾಧ್ಯವಾಗದೇ, ಗಣನೀಯ ಪ್ರಮಾಣದ ಬಡ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ದೂರ ಉಳಿಯುತ್ತಿದ್ದಾರೆ. ರಾಜ್ಯ ಶಿಕ್ಷಣ ನೀತಿಯನ್ನು ರೂಪಿಸಲು ರಾಜ್ಯ ಸರಕಾರವು ನೇಮಿಸಿದ್ದ ಎಸ್‌ಇಪಿ ಆಯೋಗವು ವಿದೇಶಿ ವಿಶ್ವ ವಿದ್ಯಾನಿಲಯಗಳಿಗೆ ಅವಕಾಶ ನೀಡಬಾರದು ಎಂದು ವರದಿಯಲ್ಲಿ ತಿಳಿಸಿದೆ. ಅದಾಗಿಯೂ ಸರಕಾರವು ತನ್ನ ಅಜೆಂಡಾದೊಂದಿಗೆ ಮುಂದುವರೆಯುತ್ತಿರುವಾಗ, ಎಸ್‌ಇಪಿ ನಿಯೋಗ ಏಕೆ ರಚಿಸಲಾಯಿತು? ಎಂದು ಪ್ರಶ್ನಿಸಿದ್ದಾರೆ.

ಮಗು ಕದ್ದು ಮಾರಾಟ: ನಾಲ್ವರ ಬಂಧನ



ಬಳ್ಳಾರಿ: ಜನನ ಪ್ರಮಾಣಪತ್ರ ಕೊಡಿಸುವುದಾಗಿ ಒಂದೂವರೆ ತಿಂಗಳ ಮಗುವನ್ನೇ ಮಹಿಳೆ ಕಿಡ್ನಾಪ್ ಮಾಡಿರುವ ಘಟನೆ ಜಿಲ್ಲೆಯಲ್ಲಿ ನಡೆದಿದ್ದು, ಪೊಲೀಸರು ಆರೋಪಿಗಳನ್ನು ಅರೆಸ್ಟ್ ಮಾಡಿದ್ದಾರೆ. ಶಮೀಮ್, ಇಸ್ಮಾಯಿಲ್, ಬಾಷಾ ಹಾಗೂ ಬಸವರಾಜ್ ಬಂಧಿತ ಆರೋಪಿಗಳು.

ಘಟನೆಯ ವಿವರ: ತನ್ನ ಮಗುವಿನ ಜನನ ಪ್ರಮಾಣಪತ್ರಕ್ಕಾಗಿ ತಾಯಿ ಜಿಲ್ಲಾಸ್ಪತ್ರೆಗೆ ಬಂದಿದ್ದರು. ಆಸ್ಪತ್ರೆಯಲ್ಲಿ ಜನನ ಪ್ರಮಾಣಪತ್ರ ಕೊಡಿಸುವುದಾಗಿ ಹೇಳಿದ ಮಹಿಳೆಯೊಬ್ಬಳು, ಆಕೆಯನ್ನು ಪಾಲಿಕೆ ಕಚೇರಿಗೆ ಕರೆದುಕೊಂಡು ಬಂದು ಮಗುವನ್ನು ಕಿಡ್ನಾಪ್ ಮಾಡಿದ್ದಾಳೆ. ಸಿನಿಮೀಯ ರೀತಿಯಲ್ಲಿ ಕಿಡ್ನಾಪ್ ಆದ ಮಗುವನ್ನು ಪೊಲೀಸರು ಕ್ಷಿಪ್ರ ಕಾರ್ಯಾಚರಣೆ ಕೈಗೊಂಡು ಪತ್ತೆ ಹಚ್ಚಿ ನಾಲ್ವರನ್ನು ಬಂಧಿಸಿದ್ದಾರೆ.

ಸಿಸಿಟಿವಿಯಲ್ಲಿ ವಿಡಿಯೊ ಸೆರೆ: ಸಿಸಿಟಿವಿಯ ಆಧಾರದಲ್ಲಿ ಸಣ್ಣ ಜಾಡು ಹಿಡಿದು ಹೋದ ಪೊಲೀಸರು ಇದೀಗ ನಾಲ್ವರನ್ನು ಬಂಧಿಸಿ ಮಗುವನ್ನು ರಕ್ಷಿಸಿದ್ದಾರೆ. ಈ ಜಾಲದ ಬಗ್ಗೆ ಶಂಕೆ ವ್ಯಕ್ತಪಡಿಸಿ ಪೊಲೀಸರು ಮತ್ತಷ್ಟು ತನಿಖೆ ಮುಂದುವರೆಸಿದ್ದಾರೆ. 2013ರಲ್ಲಿಯೂ ಆರೋಪಿ ಶಮೀಮ್ ತಾಯಿ ವಿಮ್ಸ್ ಆಸ್ಪತ್ರೆಯಲ್ಲಿ ಮಗು ಕದ್ದ ಪ್ರಕರಣದಲ್ಲಿ ಶಿಕ್ಷೆಗೆ ಒಳಗಾಗಿದ್ದಳು.

ಸ್ನೇಹಿತರ ಜಗಳ: ಒಬ್ಬನ ಸಾವು

ಬೈಂದೂರು: ಬದುಕು ಕಟ್ಟಿಕೊಳ್ಳಲೆಂದು ದೂರದ ಕೇರಳದಿಂದ ಬೈಂದೂರಿಗೆ ಬಂದ ಸ್ನೇಹಿತರಿಬ್ಬರ ಬದುಕನ್ನು ಮದ್ಯ ಸೇವನೆಯ ದುಶ್ಚಟವು ನಾಶ ಮಾಡಿದೆ. ಮದ್ಯದ ಅಮಲಿನಲ್ಲಿ ಹೊಡೆದಾಡಿಕೊಂಡ ಅವರಲ್ಲಿ ಒಬ್ಬ ಮೃತಪಟ್ಟರೆ ಇನ್ನೊಬ್ಬ ಜೈಲು ಸೇರುವಂತಾಗಿದೆ. ಯಡ್ತರೆ ಗ್ರಾಮದ ಕೊಸಳ್ಳಿ ಸಮೀಪದ ದೇವರಗದ್ದೆ ಎಂಬಲ್ಲಿ ಘಟನೆ ಸಂಭವಿಸಿದೆ. ಬಿನು (45) ಕೊಲೆಯಾದ ವ್ಯಕ್ತಿ. ಉದಯ (43) ಕೊಲೆಗೈದ ಆರೋಪಿ. ಕೇರಳದಿಂದ ಕೆಲಸ ಅರಸುತ್ತ ಜತೆಯಾಗಿ ಬಂದಿದ್ದ ಸ್ನೇಹಿತರಾದ ಬಿನು ಮತ್ತು ಉದಯ ಕಳೆದ ಎರಡು ವರ್ಷಗಳಿಂದ ಕೊಸಳ್ಳಿಯ ಥಾಮಸ್ ಕುಟ್ಟಿ ಅವರ ತೋಟದಲ್ಲಿ ರಬ್ಬರ್ ಟ್ಯಾಪಿಂಗ್ ಕೆಲಸ ಮಾಡುತ್ತ ತೋಟದ ಮನೆಯಲ್ಲಿ ಉಳಿದುಕೊಂಡಿದ್ದರು.

ಸಾಲಗಾರರ ಕಾಟಕ್ಕೆ ಬೇಸತ್ತು ಇಬ್ಬರು ಮಕ್ಕಳ ಕತ್ತು ಹಿಸುಕಿ ಯಜಮಾನ ಆತ್ಮಹತ್ಯೆ

ಸಾಲಬಾಧೆ: ಒಂದೇ ಕುಟುಂಬದ ಮೂವರ ಸಾವು

ಹೊಸಕೋಟೆ: ಸಾಲಬಾಧೆಯಿಂದ ಬದುಕು ಅಂತ್ಯಗೊಳಿಸಲು ಕುಟುಂಬವೊಂದು ಯತ್ನಿಸಿದ್ದು, ಮಕ್ಕಳು-ಗಂಡ ಸಾವನ್ನಪ್ಪಿದ್ದು, ತಾಯಿ ಬದುಕುಳಿದಿದ್ದಾಳೆ. ಗಂಡನ ಚಿಕಿತ್ಸೆಗಾಗಿ ವಿಪರೀತ ಸಾಲ ಮಾಡಿದ್ದ ಕುಟುಂಬ ಕೊನೆಗೆ ಬದುಕು ಅಂತ್ಯಗೊಳಿಸಲು ಪ್ರಯತ್ನಿಸಿದೆ.

ಸಾಲಬಾಧೆ ತಾಳಲಾರದೇ ಒಂದೇ ಕುಟುಂಬದ ನಾಲ್ವರು ಆತ್ಮಹತ್ಯೆಗೆ ಯತ್ನಿಸಿದ್ದು, ಈ ಪೈಕಿ ಮೂವರು ಸಾವನ್ನಪ್ಪಿರುವ ಘಟನೆ ಹೊಸಕೋಟೆ ತಾಲೂಕಿನ ಗೊಣಕನಹಳ್ಳಿಯಲ್ಲಿ ಗ್ರಾಮದಲ್ಲಿ ನಡೆದಿದೆ.

ಗಂಡ, ಇಬ್ಬರು ಮಕ್ಕಳನ್ನು ಕೊಲೆ ಮಾಡಿ, ನೇಣಿಗೆ ಏರಿದ ಬಳಿಕ ತಾಯಿ ಮಂಜುಳಾ ತಾನೂ ಆತ್ಮಹತ್ಯೆಗೆ ಯತ್ನಿಸಿದ್ದಾಳೆ. ಆದರೆ, ವೇಲ್ ತುಂಡಾಗಿ ಪ್ರಾಣಾ ಪಾಯದಿಂದ ಪಾರಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಗಂಡ ಶಿವು (32), ಮಗಳು ಚಂದ್ರಕಲಾ (11) ಮಗ ಉದಯ್ ಸೂರ್ಯ (07) ಸಾವನ್ನಪ್ಪಿದ್ದಾರೆ. 32 ವರ್ಷದ ಶಿವು ಅಪಘಾತದಲ್ಲಿ ಗಾಯಗೊಂಡಿದ್ದ. ಹೀಗಾಗಿ ಚಿಕಿತ್ಸೆ ಪಡೆಯಲು ಸಾಲ ಮಾಡಿದ್ದರು. ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದ ಕುಟುಂಬಕ್ಕೆ ಇದು ಅತೀವ ಹೊರೆಯಾಗಿತ್ತು. ಅಲ್ಲಿಯವರೆಗೆ ಬದುಕು ಸಾಗಿಸಲು, ಸಾಲ ಮರುಪಾವತಿಸಲು ಸಾಧ್ಯವಾಗದ ಪರಿಸ್ಥಿತಿ ಎದುರಾಗಿದೆ. ಪ್ರತಿ ದಿನ ಸಾಲದ ಹೊರೆ ಹೆಚ್ಚಾಗಿತ್ತು. ಒಂದು ಹೊತ್ತಿನ ಊಟಕ್ಕೂ ಪರದಾಡುವ ಸ್ಥಿತಿ ಎದುರಾಗಿತ್ತು. ಹೀಗಾಗಿ ಶಿವು ಹಾಗೂ ಮಂಜುಳಾ ದಂಪತಿ ಬದುಕು ಅಂತ್ಯಗೊಳಿಸಲು ನಿರ್ಧರಿಸಿದ್ದರು.

ಹಗ್ಗ ತುಂಡಾಗಿ ಸಾವಿನಿಂದ ಪಾರಾದ ಮಹಿಳೆ

ಮೊದಲಿಗೆ ಗಂಡ ಮತ್ತು ಮಕ್ಕಳ ಕುತ್ತಿಗೆಯನ್ನ ವೇಲ್‌ನಿಂದ ಹೆಂಡತಿ ಕೊಲೆ ಮಾಡಿದ್ದಾಳೆ. ಬಳಿಕ ತಾನೂ ಹಗ್ಗ ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ್ದಾಳೆ. ಹಗ್ಗ ತುಂಡಾದ ಕಾರಣ ಪ್ರಾಣಾಪಾಯದಿಂದ ಪಾರಾಗಿದ್ದಾಳೆ. ಮಹಿಳೆ ಬದುಕು ಅಂತ್ಯಗೊಳಿಸುವ ಪ್ರಯತ್ನದಲ್ಲಿ ಗಾಯಗೊಂಡಿದ್ದಾರೆ. ಹಗ್ಗ ಬಿಗಿದಿದ್ದ ಕಾರಣ ಆರೋಗ್ಯದಲ್ಲಿ ಏರುಪೇರಾಗಿದೆ. ಹೀಗಾಗಿ ಹೊಸಕೋಟೆ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ. ಇತ್ತ ಹೊಸಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.ಸದ್ಯ ಮಹಿಳೆಗೆ ಹೊಸಕೋಟೆ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಬಹಿರಂಗ ಪತ್ರ

ಅಸಮಾನತೆ ಹಿಂದೂ ಧರ್ಮಕ್ಕೆ ಮಾತ್ರ ಸೀಮಿತವೇ?

ಬೆಂಗಳೂರು: ಅಸಮಾನತೆ ಎನ್ನುವುದು ಹಿಂದೂ ಧರ್ಮಕ್ಕೆ ಮಾತ್ರ ಸೀಮಿತವಾಗಿದೆಯೇ? ಉಳಿದ ಎಲ್ಲ ಧರ್ಮದಲ್ಲಿ ಈ ಅಸಮಾನತೆ ಎನ್ನುವುದು ಇಲ್ಲವೇ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಪ್ರಶ್ನಿಸಿದ್ದಾರೆ.

ಈ ಬಗ್ಗೆ ಬಹಿರಂಗ ಪತ್ರ ಬರೆದಿರುವ ಅವರು, ಅಸಮಾನತೆ ಕೇವಲ ಹಿಂದೂ ಸಮಾಜದಲ್ಲಿ ಮಾತ್ರ ಇದೆಯಾ? ಉಳಿದ ಕಡೆಗಳಿಗೆ ಇಲ್ಲವೇ? ಅಸಮಾನತೆ ಶ್ರೀಮಂತ-ಬಡವರ ನಡುವೆಯೂ ಇದೆ. ವಿದ್ಯಾವಂತ-ಅವಿದ್ಯಾವಂತರ ನಡುವೆಯೂ ಇದೆ. ಒಂದೇ ಜಾತಿಯಲ್ಲಿ ಇದ್ದರೂ ವಿವಿಧ ಅಧಿಕಾರದ ಹುದ್ದೆಯಲ್ಲಿದ್ದವರ ನಡುವೆಯೂ ಇದೆ. ಅಸಮಾನತೆಗೆ ಹಲವು ಮುಖಗಳಿವೆ. ಆರ್ಥಿಕ ಅಸಮಾನತೆ, ಸಾಮಾಜಿಕ ಅಸಮಾನತೆ, ಶೈಕ್ಷಣಿಕ ಅಸಮಾನತೆ, ಅಧಿಕಾರದ ಅಸಮಾನತೆ, ಮತೀಯ ಅಸಮಾನತೆ ಎಂದಿದ್ದಾರೆ.

ಹಿಂದುಗಳನ್ನು ಹೊರತುಪಡಿಸಿ ಬೇರೆಲ್ಲೂ ಅಸಮಾನತೆ ಇಲ್ಲದಿದ್ದರೆ ಕ್ರಿಶ್ಚಿಯನ್‌ಗಳಲ್ಲಿ ಕ್ಯಾಥೋಲಿಕ್, ಪ್ರೊಟೆಸ್ಟೆಂಟ್, ಪೆಂತಕೋಸ್ಟ್ ಪಂಗಡಗಳು ಯಾಕೆ ಇದ್ದಾವೆ? ದಲಿತ ಕ್ರಿಶ್ಚಿಯನ್' ಎಂಬ ಪದ ಯಾಕೆ ಸೃಷ್ಟಿಯಾಗಬೇಕಾಗಿತ್ತು? ಶ್ರೀಮಂತ ಕ್ಯಾಥೋಲಿಕ್ ಹಾಗೂ ದಲಿತ ಕ್ರಿಶ್ಚಿಯನ್‌ಗಳಿಗೆ ಏಕೆ ಮದುವೆಯ ಸಂಬಂಧ ಇನ್ನೂ ಇಲ್ಲ? ಅಸಮಾನತೆ ಮುಸ್ಲಿಮರ ನಡುವೆಯೂ ಇದೆ. ಅಸಮಾನತೆ ಕ್ರಿಶ್ಚಿಯನ್‌ಗಳು ನಡುವೆಯೂ ಇದೆ ಎಂದು ವ್ಯಂಗ್ಯವಾಡಿದ್ದಾರೆ.

ಮುಸ್ಲಿಮರಲ್ಲಿ ಶಿಯಾ, ಸುನ್ನಿ, ಅಹಮದಿಯಾ, ಸಲಫಿ, ಸೂಫಿ ಎಂಬ ಗುಂಪುಗಳು ಯಾಕಿದ್ದಾವೆ? ಮುಸಲ್ಮಾನರಲ್ಲಿಯೇ 50 ಹೆಚ್ಚು ಒಳಪಂಗಡಗಳು ಉಪ ಪಂಗಡಗಳಿವೆ. ಅವುಗಳ ಸಮೀಕ್ಷೆ ತಾವು ಏಕೆ ಮಾಡಿಸುತ್ತಿಲ್ಲ. ಅಲ್ಲಿರುವ ಅಸ್ಪೃಶ್ಯತೆ ಅಸಮಾನತೆಯ ಬಗ್ಗೆ ಸಮೀಕ್ಷೆಯಲ್ಲಿ ಅವಕಾಶ ಮಾಡಿಕೊಡುತ್ತಿಲ್ಲ. ಒಂದೇ ದೇವರು, ಒಬ್ಬನೇ ಪ್ರವಾದಿ, ಒಂದೇ ಧರ್ಮ ಗ್ರಂಥ ಇದ್ದರೂ, ಪರಸ್ಪರ ಬಾಂಬ್ ಹಾಕಿ ಯಾಕೆ ಕೊಲ್ಲುತ್ತಿದ್ದಾರೆ? ಅಂತವರ ಒಳಗಿರವ ಅಸಮಾತೆಯ ಬಗ್ಗೆ ತಮ್ಮದು ದಿವ್ಯ ಮೌನ. ಮುಸಲ್ಮಾನರಿಗ ಸಿಗುವ ಒಟ್ಟು ಮೀಸಲಾತಿಯಲ್ಲಿ ಅವರು ಒಳ ಪಂಗಡದ ಅನುಪಾತಕ್ಕೆ ಸರಿಯಾಗಿ ಅವರುಗಳಿಗೆ ಒಳ ಮೀಸಲಾತಿ ಯಾಕೆ ಕೊಡುತ್ತಿಲ್ಲ.? ಬಹುಶಃ ಅವರ ಪರಿಸ್ಥಿತಿ ಹಾಗು ನಿಮ್ಮ ಪಕ್ಷದಳಿಗಿರುವ ಅಸಮಾನತೆಯ ಪರಿಸ್ಥಿತಿ ಎರಡೂ ಒಂದೇ ಇರಬೇಕು. ಹೇಳಿಕೊಂಡರೆ ಒಂದು ರೀತಿಯ ಸಂಕಷ್ಟ. ಹೇಳಿಕೊಳ್ಳದೇ ಹೋದರೆ ಮತ್ತೊಂದು ರೀತಿಯ ಸಂಕಷ್ಟ ಎಂದಿದ್ದಾರೆ.

ಮನುಷ್ಯನಲ್ಲೂ ಒಳ್ಳೆಯದು, ಕೆಟ್ಟದ್ದು ಇದ್ದಂತೆ ಸಮಾಜದೊಳಗೂ ಒಳ್ಳೆಯದು, ಕೆಟ್ಟದ್ದು ಇದೆ. ಆ ಕೆಟ್ಟದ್ದನ್ನ ದೂರ ಮಾಡಬೇಕು; ಒಳ್ಳೆಯದನ್ನು ಮಾತ್ರ ಉಳಿಸಿಕೊಳ್ಳಬೇಕು ಅನ್ನೋದಕ್ಕೆ ಧರ್ಮಇರುವುದು. ಧರ್ಮ ತತ್ವಗಳು ಹೇಳುವುದು ಒಳ್ಳೆಯದನ್ನ ಸ್ವೀಕಾರ ಮಾಡಿ, ಕೆಟ್ಟದನ್ನ ದೂರ ಮಾಡಿ' ಅಂತ. ನೀವು ಧರ್ಮವನ್ನು ದೂರ ಮಾಡಿದ್ರೆ, ಆಗ ಉಳಿಯೋದು ಅಧರ್ಮ, ಅಂದರೆ ಕೆಟ್ಟದ್ದು ಮಾತ್ರ ಎಂದು ಬಹಿರಂಗ ಪತ್ರದಲ್ಲಿ ಹೇಳಿದ್ದಾರೆ.

ಹಲ್ಲೆ ಆರೋಪ: ಅರಣ್ಯಾಧಿಕಾರಿಗಳ ವಿರುದ್ಧ ಕೇಸು

ಗುಂಡ್ಲುಪೇಟೆ: ಸೆ.9ರಂದು ಬೊಮ್ಮಲಾಪುರ ಗ್ರಾಮದಲ್ಲಿ ಹುಲಿ ಸೆರೆ ಬೋನಿನಲ್ಲಿ ಅರಣ್ಯಾಧಿಕಾರಿ ಗಳನ್ನು ಕೂಡಿಹಾಕಿದ್ದ ಹಿನ್ನೆಲೆಯಲ್ಲಿ ಗ್ರಾಮದ ರೈತ ಮಹಿಳೆ ಹಾಗೂ ಕುಟುಂಬದ ಮೇಲೆ ಹಲ್ಲೆ ನಡೆಸಿದ್ದ ಆರೋಪದಲ್ಲಿ ಅಧಿಕಾರಿಗಳ ವಿರುದ್ಧ ಮಹಿಳೆ ಯೊಬ್ಬರು ನೀಡಿದ ದೂರಿನನ್ವಯ ಗುಂಡ್ಲುಪೇಟೆ ಠಾಣೆಯಲ್ಲಿ 15 ಮಂದಿ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ನೌಕರರ ವಿರುದ್ಧ ದೂರು ದಾಖಲಾ ಗಿದೆ. ಅರಣ್ಯ ಇಲಾಖೆಯವರು, ಬೋನಿಗೆ ಕೂಡಿ ಹಾಕಿದ್ದು ನಾವೇ ಎಂದು ತನಗೆ, ಪುತ್ರ ಗಂಗಾಧರ ಸ್ವಾಮಿ, ನಮ್ಮ ಜಮೀನಿನ ಪಕ್ಕದವರಾದ ರಘು, ಪ್ರದೀಪ್, ರೇವಣ್ಣ , ಪ್ರಸಾದ್ ಎಂಬವರ ಮೇಲೆ ಹಲ್ಲೆ ನಡೆಸಿ ಕೊಲೆಗೆ ಯತ್ನಿಸಿದ್ದರು ಎಂದು ಗ್ರಾಮದ ಕಮಲಮ್ಮ ದೂರು ಸಲ್ಲಿಸಿದ್ದರು. ಇಲಾಖೆ ನೌಕರರನ್ನು ಬೋನ್‌ನಲ್ಲಿ ಕೂಡಿ ಹಾಕಿ ಬೆಂಕಿ ಹಚ್ಚಿಸುಡುವ ಬೆದರಿಕೆ ಒಡ್ಡಿದ್ದರು ಎಂದು 5 ಮಂದಿ ರೈತರ ವಿರುದ್ಧ ಅರಣ್ಯ ಇಲಾಖೆಯವರು ಈ ಹಿಂದೆ ದೂರು ನೀಡಿದ್ದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಮೈಸೂರು ನಗರ ವ್ಯಾಪ್ತಿಯ 135 ಕಿ.ಮೀ ರಸ್ತೆಗಳು, 118 ವೃತ್ತಗಳಲ್ಲಿ ಸೆಸ್ಕ್‌ನಿಂದ ದೀಪಾಲಂಕಾರ

ದಸರಾ ದೀಪಾಲಂಕಾರ, ಡ್ರೋನ್ ಶೋ ಪೋಸ್ಟರ್, ಟೀಸರ್ ಬಿಡುಗಡೆ

ಮೈಸೂರು: ನಾಡಹಬ್ಬ ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾದ ವಿದ್ಯುತ್ ದೀಪಾಲಂಕಾರ ಹಾಗೂ ಡ್ರೋನ್ ಪ್ರದರ್ಶನದ ಪೋಸ್ಟರ್ ಹಾಗೂ ದೀಪಾಲಂಕಾರದ ಟೀಸರ್ ಅನ್ನು ಭಾನುವಾರ ಬಿಡುಗಡೆ ಮಾಡಲಾಯಿತು.

ಅರಮನೆ ಆಡಳಿತ ಮಂಡಳಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ವತಿಯಿಂದ ನಡೆಸಲಾಗುವ ದಸರಾ ದೀಪಾಲಂಕಾರ ಹಾಗೂ ಡ್ರೋನ್ ಪ್ರದರ್ಶನದ ಪೋಸ್ಟರ್ ಬಿಡುಗಡೆಗೊಳಿಸಿ, ಟೀಸರ್ ಅನಾವರಣಗೊಳಿಸಿದರು.

ಎಂದಿನಂತೆ ಈ ಬಾರಿಯೂ ಸೆಸ್ಕ್ ವತಿಯಿಂದ ದೀಪಾಲಂಕಾರ ಮಾಡಲಾಗುತ್ತಿದ್ದು, ನಗರದ 135 ಕಿ.ಮೀ ವ್ಯಾಪ್ತಿಯ ರಸ್ತೆಗಳು ಹಾಗೂ 118 ವೃತ್ತಗಳಲ್ಲಿ ದೀಪಾಲಂಕಾರ ಮಾಡಲಾಗುತ್ತಿದೆ. ಅವುಗಳೊಂದಿಗೆ ಪ್ರಮುಖ ರಸ್ತೆಗಳು ಹಾಗೂ ವೃತ್ತಗಳಲ್ಲಿ ಆಕರ್ಷಕ ಪ್ರತಿಕೃತಿಗಳನ್ನು ಇರಿಸಲಾಗುತ್ತದೆ. ದೀಪಾಲಂಕಾರಕ್ಕಾಗಿ 300 ಕಿಲೋ ವ್ಯಾಟ್ ಗಳ, 257520 ಯೂನಿಟ್ ಗಳ ವಿದ್ಯುತ್ ಬಳಕೆ ಮಾಡಲಾಗುತ್ತಿದೆ.

ಅಗತ್ಯ ಸುರಕ್ಷತಾ ಕ್ರಮ: ಈ ಬಾರಿಯ ದಸರಾ ವಿದ್ಯುತ್ ದೀಪಾಲಂಕಾರದಲ್ಲಿ ಸೆಸ್ಕ್ ವತಿಯಿಂದ ಸುರಕ್ಷತೆಗೆ ಹೆಚ್ಚು ಆದ್ಯತೆ ನೀಡಲಾಗಿದ್ದು, ಆ ಮೂಲಕ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಪಾಲಿಸುವಂತೆ ಸಾರ್ವಜನಿಕರಿಗೆ ಸೂಚನೆ ನೀಡಲಾಗಿದೆ. ಪ್ರಮುಖವಾಗಿ ದೀಪಾಲಂಕಾರದ ಕಂಬಗಳನ್ನು ಮುಟ್ಟದೆ, ಅಂತರ ಕಾಯ್ದುಕೊಳ್ಳುವುದು, ದೀಪಾಲಂಕಾರದ ಕಂಬಗಳ ಹತ್ತಿರ ನಿಂತು ಫೋಟೋ, ವಿಡಿಯೋ ಶೂಟ್ ಮಾಡುವುದನ್ನು ತಪ್ಪಿಸುವುದು, ಮಳೆ ಸಂದರ್ಭದಲ್ಲಿ ವಿದ್ಯುತ್, ದೀಪಾಲಂಕಾರದ ಕಂಬಗಳ ಹತ್ತಿರ ಹೋಗದೆ ಎಚ್ಚರ ವಹಿಸಲು ತಿಳಿಸಲಾಗಿದೆ ದೀಪಾಲಂಕಾರದಿಂದ ತೊಂದರೆ ಆದಲ್ಲಿ ಸಹಾಯವಾಣಿ 1912 ಸಂಪರ್ಕಿಸುವಂತೆ ಕೋರಲಾಗಿದೆ. ಈ ಸಂದರ್ಭದಲ್ಲಿ ಶಾಸಕ ಹಾಗೂ ಸೆಸ್ಕ್ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಮುನಿಗೋಪಾಲ್ ರಾಜು, ಜಿಪಂ ಸಿಇಒ ಯುಕೇಶ್ ಕುಮಾರ್, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಎಸ್ಪಿ ವಿಷ್ಣುವರ್ಧನ್, ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್, ಸೆಸ್ಕ್ ಅಧೀಕ್ಷಕ ಇಂಜಿನಿಯರ್ ಸುನೀಲ್ ಸೇರಿದಂತೆ ಹಲವರು ಇದ್ದರು.

ದಸರಾ ಹಿನ್ನೆಲೆ ಮೈಸೂರು ನಗರದ ದೀಪಾಲಂಕಾರದ ಪೋಸ್ಟರ್ ಅನ್ನು ಸಚಿವ ಎಚ್.ಸಿ.ಮಹದೇವಪ್ಪ ಬಿಡುಗಡೆ ಗೊಳಿಸಿದರು.

ಡ್ರೋನ್ ಶೋ

ದಸರಾ ಮಹೋತ್ಸವದ ಸಂಭ್ರಮಕ್ಕೆ ಹೊಸದಾಗಿ ಸೇರ್ಪಡೆಯಾಗಿರುವ ಡ್ರೋನ್ ಪ್ರದರ್ಶನ ಈ ಬಾರಿ ಮತ್ತಷ್ಟು ಆಕರ್ಷಣೀಯವಾಗಿರಲಿದೆ. ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಸೆ.28, 29 ಮತ್ತು ಅಕ್ಟೋಬರ್ 1 ಮತ್ತು 2ರಂದು ಡ್ರೋನ್ ಪ್ರದರ್ಶನ ನಡೆಸಲಾಗುತ್ತಿದೆ. ಕಳೆದ ಬಾರಿ 1500 ಡ್ರೋನ್ ಬಳಸಿಕೊಂಡು ನಡೆಸಲಾಗಿದ್ದ ಡ್ರೋನ್ ಪ್ರದರ್ಶನದಲ್ಲಿ ಈ ಬಾರಿ 3000 ಸಾವಿರ ಡ್ರೋನ್ ಬಳಸಿಕೊಂಡು ನಡೆಸಲಾಗುತ್ತಿದೆ.

ಸಮಾಚಾರ ಸಣ್ಣದಲ್ಲ

ನಾನು ಕೂಡ ಸಚಿವ ಸ್ಥಾನದ ಆಕಾಂಕ್ಷಿ

ಕಲಬುರಗಿ: 2018ರಿಂದಲೇ ನಾನು ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದು, ಕ್ಯಾಬಿನೆಟ್ ಬದಲಾವಣೆ ಆದರೆ ಈ ಭಾರಿ ಸಚಿವ ಸ್ಥಾನ ಸಿಗುವ ನಿರೀಕ್ಷೆಯಿದೆ

ಎಂದು ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್ ಸಿಂಗ್ ವಿಶ್ವಾಸ ವ್ಯಕ್ತಪಡಿಸಿ ದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ಸಚಿವ ಸಂಪುಟ ಪುನರ್‌ರಚನೆ ಆಗುವ ಸಾಧ್ಯತೆ ಇದ್ದು, ಈ ಸಲ ನಾನು ಮಂತ್ರಿಯಾಗಲಿದ್ದೇನೆ ಎಂಬ ಭರವಸೆ ಇದೆ ಎಂದರು. ಸಚಿವ ಸ್ಥಾನ ನೀಡುವ ಬಗ್ಗೆ, ಕ್ಯಾಬಿನೆಟ್ ಬದಲಾವಣೆ ಬಗ್ಗೆ ದೆಹಲಿಯಲ್ಲಿ ದೊಡ್ಡ ಮಟ್ಟದ ಚರ್ಚೆ ನಡೆಯಲಿದೆ. ಕೆಕೆಆರ್‌ಡಿಬಿ ಅಧ್ಯಕ್ಷನಾಗಿ ಹಲವು ಅಭಿವೃದ್ಧಿ ಹಾಗೂ ಜನಪರ ಕೆಲಸಗಳನ್ನು ಮಾಡಿದ್ದೇನೆ. ಹೈಕಮಾಂಡ್ ಇದನ್ನು ಗುರುತಿಸಿದೆ. ನಿರ್ಧಾರಕ್ಕೆ ಕಾದುನೋಡೋಣ. ಧೇರ್ ಹೈ ತೋ ದುರುಸ್ತ್ ಹೈ ಎನ್ನುವ ತಂದೆ ಧರ್ಮಸಿಂಗ್ ಅವರ ಸಿದ್ಧಾಂತ ಪಾಲಿಸೋಣ ಎಂದು ಹೇಳಿದರು.

ತೆಪ್ಪ ಮಗುಚಿ ಯುವಕ ನೀರುಪಾಲು

ಶಿವಮೊಗ್ಗ: ಹೊಳೆ ದಾಟುವಾಗ ತೆಪ್ಪ ಮಗುಚಿ ಯುವಕ ಸಾವನ್ನಪ್ಪಿದ ಘಟನೆ ಹೊಸನಗರದ ಹೊಸೂರು ಗ್ರಾಪಂ ವ್ಯಾಪ್ತಿಯ ಬಂಟೋಡಿ

ಎಂಬಲ್ಲಿ ನಡೆದಿದೆ. ಮೃತನನ್ನು ಪೂರ್ಣೇಶ್ (22) ಎಂದು ಗುರುತಿಸ ಲಾಗಿದೆ. ಅದೃಷ್ಟವಶಾತ್ ಜತೆಯಲ್ಲಿದ್ದ ಶರತ್ ಮತ್ತು ರಂಜನ್ ಎಂಬ ಯುವಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮುಳುಗು ತಜ್ಞ ಈಶ್ವರ್ ಮಲ್ಪೆ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ ಪೂರ್ಣೇಶ್ ಮೃತದೇಹವನ್ನು ಪತ್ತೆ ಮಾಡಿದ್ದಾರೆ. ಈ ಕುರಿತು ಮಾತನಾಡಿದ ಮುಳುಗು ತಜ್ಞ ಈಶ್ವರ್ ಮಲ್ಪೆ, 40 ಅಡಿ ಆಳದ ನೀರಿನಲ್ಲಿ ಈ ಯುವಕನ ಮೃತದೇಹ ದೊರೆತಿದೆ. ದೋಣಿ ತೆಪ್ಪದಲ್ಲಿ ಸಾಗುವಾಗ ಲೈಫ್ ಜಾಕೆಟ್ ಇಟ್ಟುಕೊಳ್ಳುವಂತೆ ಅವರು ಸ್ಥಳೀಯರಲ್ಲಿ ಮನವಿ ಮಾಡಿದ್ದಾರೆ.

210 ಕ್ವಿಂಟಲ್ ಅಕ್ರಮ ಪಡಿತರ ಅಕ್ಕಿ ಜಪ್ತಿ

ವಿಜಯಪುರ: ಅಕ್ರಮವಾಗಿ ಪಡಿತರ ಅಕ್ಕಿ ಸಾಗಿಸುತ್ತಿದ್ದ ಲಾರಿಯನ್ನು ಪೊಲೀಸರು ಹಾಗೂ ಆಹಾರ ಇಲಾಖೆಯ ಅಧಿಕಾರಿಗಳು ವಶಕ್ಕೆ ಪಡೆದು 210 ಕ್ವಿಂಟಲ್ ಅಕ್ಕಿ ಜಪ್ತಿ ಮಾಡಿದ್ದಾರೆ. ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಆಜೂರ ಗ್ರಾಮದ ನಿವಾಸಿ, ಲಾರಿ ಚಾಲಕ ಗಜಾನನ ಮಕಾಳೆ ಎಂಬಾತನನ್ನು ಬಂಧಿಸಲಾಗಿದೆ. ಅಥಣಿಯ ಗಣೇಶವಾಡಿಯ ಮಾರುತಿ ದೊಡಮನಿ ಹಾಗೂ ಬೆಳಗಾವಿಯ ಆಜಾದ್ ನಗರದ ಇಕ್ಬಾಲ್ ತಹಸೀಲ್ದಾರ್ ಎಂಬಾತನ ಸೂಚನೆಗೆ ಮೇರೆಗೆ ಚಾಲಕ ಗಜಾನನ ವಿಜಯಪುರದಲ್ಲಿರುವ ಎಫ್‌ಸಿಐ ರೈಲ್ವೆ ಗೂಡ್ಸ್ ಶೆಡ್ಡಿನಿಂದ ಅಕ್ಕಿ ಸಾಗಿಸುತ್ತಿರುವುದು ಗೊತ್ತಾಗಿದೆ. ಈ ಬಗ್ಗೆ ಖಚಿತ ಮಾಹಿತಿ ಮೇರೆಗೆ ಪೊಲೀಸರು ಹಾಗೂ ಆಹಾರ ಇಲಾಖೆಯ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿ 4.76 ಲಕ್ಷ ರು. ಮೌಲ್ಯದ 210.43 ಕ್ವಿಂಟಲ್ ಅಕ್ಕಿ ಹಾಗೂ ಲಾರಿ ಜಪ್ತಿಮಾಡಲಾಗಿದ್ದು, ಆದರ್ಶ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾಲಬಾಧೆ: ರೈತ ಆತ್ಮಹತ್ಯೆ

ವಾಡಿ: ಅತಿವೃಷ್ಟಿ ತಂದಿಟ್ಟ ಬೆಳೆ ನಾಶದ ಸಂಕಷ್ಟದಿಂದ ರೈತನೊಬ್ಬ ಆತ್ಮಹತ್ಯೆ ಮಾಡಿಕೊಂಡ ಘಟನೆ ನಡೆದಿದೆ. ಚಿತ್ತಾಪುರ ತಾಲೂಕಿನ ಚಾಮನೂರ ಗ್ರಾಮದ ರೈತ

ಸಿದ್ದಣ್ಣ ಲಕ್ಷ್ಮಣ ಹುಡೇದೋರ್ (50) ಆತ್ಮಹತ್ಯೆ ಮಾಡಿಕೊಂಡ ರೈತ. ಭಾರಿ ಮಳೆ ಪರಿಣಾಮ ಬೆಳೆ ನಾಶವಾಗಿ ಮಾಡಿದ ಸಾಲದ ಚಿಂತೆ ಕಾಡಿದ್ದರಿಂದ ರೈತ ಈ ನಿರ್ಧಾರ ತೆಗೆದುಕೊಂಡಿದ್ದಾರೆ. ರೈತ ಸಿದ್ದಣ್ಣ ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿಯನ್ನು ಅಗಲಿದ್ದಾರೆ. ರೈತ ತನ್ನ ಮತ್ತು ಪತ್ನಿಯ ಹೆಸರಿನಲ್ಲಿರುವ 4 ಎಕರೆ ಸ್ವಂತ ಜಮೀನು ಸೇರಿದಂತೆ 30 ಎಕರೆ ಭೂಮಿಯನ್ನು ಸಮಪಾಲಿಗೆ ಹಾಕಿಕೊಂಡು ತೊಗರಿ ಮತ್ತು ಹತ್ತಿ ಬಿತ್ತನೆ ಮಾಡಿದ್ದರು ಎನ್ನಲಾಗಿದೆ. ಬೀಜ, ಗೊಬ್ಬರ, ಕೀಟನಾಶಕ ಸೇರಿದಂತೆ ಇನ್ನಿತರ ಕೃಷಿ ವೆಚ್ಚಕ್ಕಾಗಿ ಸುಮಾರು 15 ಲಕ್ಷ ರು. ಸಾಲ ಮಾಡಿಕೊಂಡಿದ್ದರು ಎಂದು ತಿಳಿದುಬಂದಿದೆ.

ವಿರಾಮ
ಪ್ರತಿ ಭಾನುವಾರ

ವಿಶ್ವವಾಣಿ ಕ್ಲಬ್ ಹೌಸ್
15.09.2025
ಸಂಜೆ: 06.55 ರಿಂದ 08.05 ರವರೆಗೆ
ಸೋಮವಾರದ ಅತಿಥಿ

ಶ್ರೀ ನಿತ್ಯಾನಂದ ಎಸ್. ಬಿ
ವಿಷಯ
ದಿಗ್ವಿಜಯ ದಿವಸ
vishwavani.news

1.50 ಲಕ್ಷ ಫಲಾನುಭವಿಗಳು ಮೃತಪಟ್ಟಿರುವ ಬಗ್ಗೆ ಮಾಹಿತಿ | ಆಡಿಟ್‌ಗೆ ಸಿಎಂ ಸೂಚನೆ

ಮೃತಪಟ್ಟವರಿಗೂ ಗೃಹಲಕ್ಷ್ಮಿ ಹಣ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಸರಕಾರದ ಮಹತ್ವಾಕಾಂಕ್ಷಿ ಯೋಜನೆಗಳಾಗಿರುವ ಪಂಚಗ್ಯಾರಂಟಿ ಯೋಜನೆಯಲ್ಲಿನ ಸೋರಿಕೆ ತಡೆಗೆ ಮುಂದಾಗಿರುವ ಸರಕಾರ, ಗೃಹ ಲಕ್ಷ್ಮಿ ಯೋಜನೆಯ ಫಲಾನುಭವಿಗಳಲ್ಲಿ ಮೃತಪಟ್ಟವರನ್ನು ಪತ್ತೆ ಹಚ್ಚಲು ಸೂಚನೆ ನೀಡಿದೆ.

ಕಳೆದ ವಿಧಾನಸಭಾ ಚುನಾವಣೆಯ ಪ್ರಣಾಳಿಕೆಯಲ್ಲಿನ ಪ್ರಮುಖ ಘೋಷಣೆಯಾಗಿರುವ ಪಂಚ ಗ್ಯಾರಂಟಿಯಲ್ಲಿ ಗೃಹ ಲಕ್ಷ್ಮಿ ಯೋಜನೆಗೆ ಅತಿಹೆಚ್ಚು ಅನುದಾನವನ್ನು ಮೀಸಲಿಡಲಾಗಿದೆ. ಆದರೆ ಯೋಜನೆ ಜಾರಿಯಾದಾಗ ನೋಂದಣಿ ಮಾಡಿಸಿಕೊಂಡಿರುವ ಮಹಿಳೆಯ ಪೈಕಿ ಸುಮಾರು 1.50ಲಕ್ಷ ಮಹಿಳೆಯರು ಮೃತಪಟ್ಟಿರುವ ಅನುಮಾನಗಳಿವೆ. ಮಹಿಳೆಯರು ಮೃತಪಟ್ಟಿದ್ದರೂ, ಆ ಬಗ್ಗೆ ಬ್ಯಾಂಕ್‌ಗಳಿಗೆ ಮಾಹಿತಿ ನೀಡದಿರುವುದರಿಂದ ಪ್ರತಿ ತಿಂಗಳು ಹಣ ಸಂದಾಯವಾಗುತ್ತಿದೆ. ಅರ್ಹ ಫಲಾನುಭವಿಗಳಿಗೆ ಸಿಗಬೇಕಾದ ಸಹಾಯಧನ, ಬೇರೆಯವರ ಪಾಲಾಗುತ್ತಿದೆ. ಆದ್ದರಿಂದ ಇದೀಗ, ಮೃತಪಟ್ಟ ಫಲಾನುಭವಿಗಳ ಆಡಿಟ್ ನಡೆಸಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚನೆ ನೀಡಿದ್ದಾರೆ.

ಕಳೆದ ವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ, ಈ ಬಗ್ಗೆ ಚರ್ಚಿಸಿರುವ ಅವರು ಗೃಹಲಕ್ಷ್ಮಿ ಯೋಜನೆನ ಹಣ ದುರುಪಯೋಗವಾಗಬಾರದು. ಮೃತಪಟ್ಟ ಮಹಿಳೆಯರ ಖಾತೆಗೆ ಹಣ ಹೋಗುವುದಷ್ಟೇ ಅಲ್ಲದೇ, ತೆರಿಗೆ ಪಾವತಿಸುವ, ಪಿಂಚಣಿ ಪಡೆಯುತ್ತಿರುವ ಮಹಿಳೆಯರ ಖಾತೆಗೂ ಹೋಗುತ್ತಿರುವ ಮಾಹಿತಿಯಿದೆ. ಆದ್ದರಿಂದ ಅನರ್ಹರಿಗೆ ಹಣ ಸಂದಾಯದಿಂದ ಸೋರಿಕೆಯಾಗುತ್ತಿರುವ ಹಣವನ್ನು ತಪ್ಪಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

- ಪ್ರತಿ ತಿಂಗಳು ಸುಮಾರು 30 ಕೋಟಿ ರು. ಹಣ ಮೃತಪಟ್ಟವರ ಖಾತೆಗೆ ಜಮಾ
- ಅರ್ಹ ಫಲಾನುಭವಿಗಳಿಗೆ ಸಿಗಬೇಕಾದ ಸಹಾಯಧನ, ಬೇರೆಯವರ ಪಾಲು
- ಪಂಚಗ್ಯಾರಂಟಿ ಯೋಜನೆಯಲ್ಲಿನ ಸೋರಿಕೆ ತಡೆಗೆ ಸರಕಾರ ಕ್ರಮ

ಪ್ರತಿ ತಿಂಗಳು 30 ಕೋಟಿ ಖರ್ಚು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ, ಗೃಹಲಕ್ಷ್ಮಿ ಯೋಜನೆಯಲ್ಲಿ ನೋಂದಣಿಯಾಗಿರುವ ಸುಮಾರು 1.44 ಲಕ್ಷ ಮಹಿಳೆಯರು ಮೃತಪಟ್ಟಿದ್ದಾರೆ ಎಂದು ಅಂದಾಜಿಸಿರುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಆದರೆ ಈ ಪ್ರಮಾಣ ಒಂದುವರೆ ಲಕ್ಷ ದಾಟುತ್ತದೆ. ಅಂದರೆ, ಪ್ರತಿ ತಿಂಗಳು ಸುಮಾರು 30 ಕೋಟಿ ರು. ಹಣ ಮೃತಪಟ್ಟವರ ಖಾತೆಗೆ ಹೋಗುತ್ತಿದೆ. ಒಂದು ವರ್ಷ ಮೃತಪಟ್ಟವರ ಖಾತೆಗೆ ಹಣ ಹೋದರೆ 350ರಿಂದ 360 ಕೋಟಿ ರು. ವ್ಯಯವಾಗುತ್ತದೆ. ಈ ಸೋರಿಕೆಯನ್ನು ತಡೆಯುವ ಉದ್ದೇಶದಿಂದ ಸೂಕ್ತ ರೀತಿಯಲ್ಲಿ ಆಡಿಟ್ ಮಾಡಲು ಸ್ಥಳೀಯ ಮಟ್ಟದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಈವರೆಗೆ ಪಂಚ ಗ್ಯಾರಂಟಿ ಯೋಜನೆಯಲ್ಲಿ 97,813 ಕೋಟಿ ರು. ಅನುದಾನ ವೆಚ್ಚ ಮಾಡಲಾಗಿದೆ. ಇದರಲ್ಲಿ ಗೃಹಲಕ್ಷ್ಮಿ ಯೋಜನೆಯಡಿ 1.24 ಕೋಟಿ ಫಲಾನುಭವಿಗಳಿಗೆ ಒಟ್ಟು 50,005 ಕೋಟಿ ರು. ನೀಡಲಾಗಿದೆ.

ಗ್ರಾ.ಪಂ ಮಟ್ಟದಲ್ಲಿಯೇ ನಿರ್ವಹಣೆಗೆ ಚಿಂತನೆ

ಪ್ರತಿ ತಿಂಗಳು ಗೃಹಲಕ್ಷ್ಮಿ ಯೋಜನೆಯಲ್ಲಿ ಎರಡು ಸಾವಿರ ರು. ಮನೆ ಯಜಮಾನಿಯ ಖಾತೆಗೆ ಹೋಗುತ್ತದೆ. ಆದರೆ ಗೃಹಲಕ್ಷ್ಮಿ ಫಲಾನುಭವಿಗಳು ಮೃತಪಟ್ಟರೆ, ಈ ಬಗ್ಗೆ ಕುಟುಂಬಸ್ಥರು ಮಾಹಿತಿ ನೀಡದಿದ್ದರೆ ಪ್ರತಿತಿಂಗಳು ಹಣ ಹೋಗುತ್ತದೆ. ಇದನ್ನು ತಡೆಗಟ್ಟುವ ಉದ್ದೇಶದಿಂದ ಮುಂದಿನ ದಿನದಲ್ಲಿ, ಮರಣ ಹೊಂದುವ ಫಲಾನುಭವಿಗಳ ಪಟ್ಟಿಯನ್ನು ಪ್ರತಿ ತಿಂಗಳು ಗ್ರಾಮ ಪಂಚಾಯಿತಿ ಹಂತದಲ್ಲಿಯೇ ನವೀಕರಿಸಿ, ಬ್ಯಾಂಕುಗಳಿಗೆ ಮಾಹಿತಿ ನೀಡಬೇಕು. ಮರಣ ಹೊಂದುವ ಫಲಾನುಭವಿಗಳ ಹೆಸರನ್ನು ಪಟ್ಟಿಯಿಂದ ತೆಗೆದು ಹಾಕಬೇಕು. ಪಂಚಾಯತ್ ಮಟ್ಟದಲ್ಲಿಯೇ ಫಲಾನುಭವಿಗಳ ಸೇರ್ಪಡೆ ಮತ್ತು ತೆಗೆದು ಹಾಕುವಿಕೆಗೆ ಕ್ರಮವಹಿಸಲು ಚಿಂತನೆ ನಡೆಸಲಾಗಿದೆ.

ಹಿಂದೂಗಳ ಭಾವನೆ ಕೆಣಕಬೇಡಿ: ಮುತಾಲಿಕ್

ಚಾಮುಂಡಿಗೆ ಬಾನು ಮುಷ್ತಾಕ್ ಪೂಜೆ ಮಾಡುವುದು ಬೇಡ

ದಾವಣಗೆರೆ: ನಮ್ಮ ಚಾಮುಂಡಿ ದೇವಿಗೆ ಪೂಜೆ ಮಾಡುವಷ್ಟು ಯೋಗ್ಯತೆ ಬಾನು ಮುಷ್ತಾಕ್‌ಗೆ ಇಲ್ಲವೇ ಇಲ್ಲ ಎಂದು ಶ್ರೀರಾಮ ಸೇನೆ ಸಂಸ್ಥಾಪಕ ಅಧ್ಯಕ್ಷ ಪ್ರಮೋದ್ ಮುತಾಲಿಕ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಗೋಮಾಂಸ ಭಕ್ಷಕರ, ಮೂರ್ತಿ ಪೂಜೆ ಒಪ್ಪದೇ ಇರುವ ಸಮಾಜದಿಂದ ಬಾನು ಮುಷ್ತಾಕ್ ಬಂದಿದ್ದಾರೆ. ಆದರೆ, ಪೂಜೆ, ಪುನಸ್ಕಾರ, ಆರತಿ, ಹೂವು, ಅರಿಶಿಣ, ಕುಂಕುಮ ಹಾಕುವ ಪವಿತ್ರವಾದ ಚಾಮುಂಡಿ ದೇವಿಯ ಧಾರ್ಮಿಕ ಕಾರ್ಯ ಅದು. ಕಾಂಗ್ರೆಸ್ ರಾಜಕಾರಣ ಸರಕಾರದ ಕಾರ್ಯಕ್ರಮವಲ್ಲ. ನಾಡ ಹಬ್ಬಕ್ಕೆ ಬಾನು ಮುಷ್ತಾಕ್‌ರ ಬದಲು ಹಿಂದೂಗಳು ಸಿಗಲೇ ಇಲ್ವಾ? ಉದ್ದೇಶಪೂರ್ವಕವಾಗಿ ಮುಸ್ಲಿಮರನ್ನು ಹಾಕಿ ಹಿಂದುಗಳ ಹಿಂದೂಗಳ ಭಾವನೆ ಕೆಣಕಿ ಪವಿತ್ರ ಕಾರ್ಯ ಕೆಡಸೋದು ಸಿದ್ದರಾಮಯ್ಯ ಮತ್ತು ಕಾಂಗ್ರೆಸ್‌ನ ಉದ್ದೇಶ ಎಂದರು. 'ಪಾಕಿಸ್ತಾನದ ಜತೆ ಇಂಡಿಯಾ ಕ್ರಿಕೆಟ್ ಆಡಿಸುತ್ತಿರುವುದು ಕೇಂದ್ರ ಸರಕಾರ ಮತ್ತು ಬಿಸಿಸಿಐ ಭಾರತೀಯರಿಗೆ ಮಾಡಿದ ದ್ರೋಹ. ಪೆಹಲ್ಗಾಮ್ ದಾಳಿಯಲ್ಲಿ ಮೃತಪಟ್ಟ 26 ಜನರ ಹೆಣದ ಮೇಲೆ ಕ್ರಿಕೆಟ್ ಆಡುತಿದ್ದಾರೆ. ದುಡ್ಡಿಗಾಗಿ ಪಾಕಿಸ್ತಾನದ ಮೇಲೆ ಕ್ರಿಕೆಟ್ ಆಡ್ತಿರಾ? ಎಂದು ಪ್ರಶ್ನಿಸಿದರು.



ಯಾರಾದರೂ ಮತಾಂತರಗೊಂಡ ತಕ್ಷಣ ಸಮಾನತೆ ಬರುತ್ತದೆ ಎನ್ನುವುದು ಸಿಎಂ ಸಿದ್ದರಾಮಯ್ಯರ ಮೂರ್ಖತನ. ಬ್ರಾಹ್ಮಣ ಕ್ರಿಶ್ಚಿಯನ್, ಲಿಂಗಾಯತ ಕ್ರಿಶ್ಚಿಯನ್, ಒಕ್ಕಲಿಗ ಕ್ರಿಶ್ಚಿಯನ್ ಎಲ್ಲಿಂದ ಬಂದವು. ಜಾತಿ ಒಡೆದು ಮತಾಂತರಕ್ಕೆ ಪ್ರೋತ್ಸಾಹ ನೀಡುವುದು ಸಿದ್ದರಾಮಯ್ಯ ಮಾನಸಿಕತೆಯಾಗಿದೆ.

-ಪ್ರಮೋದ್ ಮುತಾಲಿಕ್, ಶ್ರೀರಾಮ ಸೇನೆ ಅಧ್ಯಕ್ಷ

ಹಿಂದೂ ದೇವರಿಗೆ ಅವಮಾನ ಸಹಿಸಲ್ಲ

ಹಿಂದೂ ದೇವರಿಗೆ ಅವಮಾನ ಮಾಡಿದವರ ಮನೆಗಳಿಗೆ ನುಗ್ಗಿ ಹೊಡಿತೀವಿ. ಮದ್ದೂರಿನಲ್ಲಿ ಗಣೇಶ ವಿಸರ್ಜನಾ ಮೆರವಣಿಗೆ ಮೇಲೆ ಕಲ್ಲು ತೂರಾಟ, ಸಾಗರದಲ್ಲಿ ಉಗುಳುವ ಕೃತ್ಯವನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ. ಹಿಂದೂ ಹಬ್ಬಗಳನ್ನು ಮಾತ್ರವೇ ಹೀಗೆ ಅವಮಾನಿಸಲಾಗುತ್ತಿದೆ. ಶಾಂತಿಯಿಂದ ಬದುಕುವ ಹಿಂದೂಗಳ ಸಹನೆಗೂ ಮಿತಿಯಿದೆ. ಹಿಂದೂ ದೇವರಿಗೆ ಅವಮಾನ ಮಾಡಿದವರ ಮನೆಗಳಿಗೆ ನುಗ್ಗಿ ಹೊಡಿತೀವಿ ಎಂದು ಶ್ರೀರಾಮ ಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಎಚ್ಚರಿಕೆ ನೀಡಿದ್ದಾರೆ.

ಜೈನ ತೀರ್ಥಂಕರ ಶಾಸನ ಪತ್ತೆ

ಕೊಪ್ಪಳ: ವಿಜಯನಗರ ಅರಸರ ಮೂಲ ರಾಜಧಾನಿ ಎಂದು ಇತಿಹಾಸದಲ್ಲಿ ಬಿಂಬಿತವಾಗಿರುವ ತಾಲೂಕಿನ ಆನೆಗೊಂದಿ ಸಮೀಪದ ತುಂಗಭದ್ರಾ ನದಿಯಲ್ಲಿ ಬಂಡೆಯೊಂದರ ಮೇಲೆ ಭಾನುವಾರ ಜೈನ ಶಾಸನವೊಂದನ್ನು

ಸ್ಥಳೀಯರು ಪತ್ತೆ ಹಚ್ಚಿದ್ದಾರೆ. ಗ್ರಾಮದಿಂದ ನವವೃಂದಾವನ ಗಡ್ಡೆಗೆ ಹೋಗುವ ಮಾರ್ಗ ಮಧ್ಯದಲ್ಲಿ ರುವ ಜಾಗ ದಲ್ಲಿ ಈ ಶಾಸನ ಕಂಡುಬಂದಿದೆ. ಶ್ರೀ ಕೃಷ್ಣದೇವರಾಯನ ಸಮಾಧಿ ಎಂದು ಕರೆಯ ಲಾಗುವ 64 ಕಾಲಿನ ಮಂಟಪದ ಸಮೀಪವೇ ಶಾಸನ ಸಿಕ್ಕಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಶಾಸನದ ಲಕ್ಷಣ: ಬಂಡೆಯಲ್ಲಿ ಶಾಸನವನ್ನು ಕೊರೆಯಲಾಗಿದೆ. ಹಳೆಗನ್ನಡ ಅಥವಾ ಪ್ರಾಕೃತ ಭಾಷೆಯಲ್ಲಿ ಲಿಪಿಯಲ್ಲಿದೆ. ಶಾಸನದ ಮೇಲ್ಭಾಗದಲ್ಲಿ ಜೈನ ಧರ್ಮಕ್ಕೆ ಸೇರಿದ ತೀರ್ಥಂಕರರ ಚಿತ್ರವಿದೆ. ಮಧ್ಯ ಭಾಗದಲ್ಲಿ ಜೈನ ಧರ್ಮೀಯ ಅನುಯಾಯಿಯೊಬ್ಬರು ಧ್ಯಾನಾಸಕ್ತರಾಗಿರುವ ದೊಡ್ಡ ಚಿತ್ರವಿದೆ. ಬಲಭಾಗದಲ್ಲಿ ಧ್ಯಾನದ ಭಂಗಿಯಲ್ಲಿರುವ ಮತ್ತೊಬ್ಬರ ಚಿತ್ರ ಹಾಗೂ ಎಡ ಭಾಗದಲ್ಲಿ ತಪ್ಪೊಪ್ಪಿಕೊಳ್ಳುವ ಭಂಗಿಯಲ್ಲಿರುವ ವ್ಯಕ್ತಿಯೊಬ್ಬರ ಚಿತ್ರವನ್ನು ಕೆತ್ತಲಾಗಿದೆ. ಮಧ್ಯ ಭಾಗದಲ್ಲಿ ವ್ಯಕ್ತಿಯ ತಲೆ ಹಾಗೂ ಎಡ ಮತ್ತು ಬಲ ಬುಜದ ಮೇಲೆ ಚಿಹ್ನೆಗಳನ್ನು ಕಾಣಬಹುದು. ಆದರೆ ಅದು ಸ್ಪಷ್ಟವಾಗಿಲ್ಲ. ಈ ಶಾಸನವು ತುಂಗಭದ್ರಾ ನದಿ ನೀರಿನಲ್ಲಿ ಮುಳುಗಿದ್ದು, ಇದೀಗ ನದಿಯಲ್ಲಿ ನೀರಿನ ಹರಿವು ಕಡಿಮೆಯಾಗಿದ್ದರಿಂದ ಕಾಣುತ್ತಿದೆ. ಹುಟ್ಟಾ ಬಂಡೆಯಲ್ಲಿ ಶಾಸನವನ್ನು ಕೆತ್ತಲಾಗಿದೆ.

ಗಮನ ಸೆಳೆದ ಮುದ್ದು ಕೃಷ್ಣ, ರಾಧೆ ವೇಷಧಾರಿಗಳು | ವಿಶೇಷ ಪೂಜೆಯಲ್ಲಿ ಸಾವಿರಾರು ಜನ ಭಾಗಿ

ಉಡುಪಿಯಲ್ಲಿ ಸಂಭ್ರಮದ ಕೃಷ್ಣಾಷ್ಟಮಿ ಆಚರಣೆ

ಉಡುಪಿ: ಇಲ್ಲಿನ ಶ್ರೀ ಕೃಷ್ಣ ಮಠದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿಯ ಸಂಭ್ರಮ ಸಡಗರ ಮೇಳೈಸಿದೆ. ಧಾರ್ಮಿಕ ಮತ್ತು ಸಾಂಸ್ಕೃತಿಕ ವೈಭವದಿಂದ ನೆರವೇರಿಸಲಾಗುತ್ತಿದೆ. ಬೆಳಗ್ಗಿನಿಂದಲೇ ಭಕ್ತರು ಮಠಕ್ಕೆ ಆಗಮಿಸಿ ವಿಶೇಷ ಪೂಜೆಯಲ್ಲಿ ಪಾಲ್ಗೊಂಡಿದ್ದರು.

ರಾಜಾಂಗಣದಲ್ಲಿ ಮುದ್ದು ಕೃಷ್ಣ ಮತ್ತು ಮುದ್ದುರಾಧೆ ವೇಷ ಸ್ಪರ್ಧೆಗಳಿಗೆ ಪರ್ಯಾಯ ಪುತ್ತಿಗೆ ಮಠಾಧೀಶರು ಚಾಲನೆ ನೀಡಿದರು. ನೂರಾರು ಮುದ್ದು ಕೃಷ್ಣ ಮತ್ತು ಮುದ್ದುರಾಧೆ ವೇಷಧಾರಿಗಳು ರಾಜಾಂಗಣದಲ್ಲಿ ಪರ್ಯಾಯ ಸ್ವಾಮೀಜಿಗಳ ಹತ್ತಿರ ಕುಳಿತು ಫೋಟೊ ತೆಗೆಸಿಕೊಂಡರು. ಪರ್ಯಾಯ ಪುತ್ತಿಗೆ ಸ್ವಾಮೀಜಿ ಮತ್ತು ಕಿರಿಯ ಶ್ರೀಗಳು ಪುಟಾಣಿಗಳನ್ನು ಎತ್ತಿ ಮುದ್ದಾಡಿದರು. ಬಳಿಕ ರಾಜಾಂಗಣ ಮಧ್ವಮಂಟಪ ಮತ್ತು ಗೀತಾ ಮಂದಿರದಲ್ಲಿ ಸ್ಪರ್ಧೆಗಳು ನಡೆದವು. ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಉಡುಪಿ ಮಾತ್ರವಲ್ಲದೆ, ನಾಡಿನ ಹಲವು ಭಾಗಗಳಿಂದ ಭಕ್ತಾದಿಗಳು ಕೃಷ್ಣಮಠಕ್ಕೆ ಆಗಮಿಸಿದ್ದರು. ಉಂಡೆ ಚಕ್ಕುಲಿ ಶ್ರೀ ಕೃಷ್ಣ ಹಾಗೂ ಮಕ್ಕಳು ಇಷ್ಟಪಡುವ ಪ್ರಸಾದವಾಗಿದ್ದು, ಅಷ್ಟಮಿಯ ಮರುದಿನ ಸೋಮವಾರ ನಡೆಯುವ ಅನ್ನಸಂತ ರ್ಪಣೆ ಸಂದ ರ್ಭದಲ್ಲಿ ಪ್ರಸಾದ ರೂಪದಲ್ಲಿ ವಿತರಿಸಲಾಗುತ್ತದೆ. ಒಂದು ಲಕ್ಷಕ್ಕೂ ಹೆಚ್ಚು ಉಂಡೆ ಚಕ್ಕುಲಿಗಳನ್ನು ಸಿದ್ಧಪಡಿಸಲಾಗಿದೆ.

ಮುದ್ದು ಕೃಷ್ಣ, ರಾಧೆ ವೇಷಸ್ಪರ್ಧೆಗೆ ಪರ್ಯಾಯ ಪುತ್ತಿಗೆ ಮಠಾಧೀಶರು ಚಾಲನೆ ನೀಡಿದರು.

ವಿಟ್ಲಪಿಂಡಿ ಸಂಭ್ರಮ ಇಂದು

ವಿಟ್ಲಪಿಂಡಿ ಅಥವಾ ಶ್ರೀ ಕೃಷ್ಣ ಲೀಲೋತ್ಸವ ಎಂದು ಕರೆಯಲ್ಪಡುವ ಉತ್ಸವ ಸೋಮವಾರ ನಡೆಯಲಿದ್ದು, ಕೃಷ್ಣಮಠದಲ್ಲಿ ಹಬ್ಬ ರಂಗೇರಲಿದೆ. ಸಾಂಪ್ರದಾಯಿಕ ಮೊಸರು ಕುಡಿಕೆ ವಿವಿಧ ಹುಲಿವೇಷಗಳಸಹಿತ ಹಲೋ ವೇಷಧಾರಿಗಳು ಹಬ್ಬಕ್ಕೆ ಮೆರಗು ನೀಡು ವರು. ಉತ್ಸವದ ಬಳಿಕ ಕೃಷ್ಣನ ಮೃಣ್ಮಯ ಮೂರ್ತಿಯನ್ನು ಮತ್ತು ಸರೋವರದಲ್ಲಿ ಜಲ ಸಮರ ಮಾಡಲಾಗುತ್ತದೆ.

ಶ್ರೀ ಕೃಷ್ಣನ ಜನ್ಮಾಷ್ಟಮಿಯ ಸಂಭ್ರಮ ಉಡುಪಿಯಲ್ಲಿ ಪ್ರಾರಂಭವಾಗಿದೆ. ಸೌರ ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ಹಿಂದಿನಿಂದಲೂ ನಡೆಸಿಕೊಂಡು ಬಂದಿದ್ದಾರೆ. ನಾವೆಲ್ಲರೂ ಕೃಷ್ಣ ಜನ್ಮಾಷ್ಟಮಿ ಆಚರಣೆಯ ಮಹತ್ವವನ್ನು ತಿಳಿದುಕೊಳ್ಳುವುದು ಬಹಳ ಅವಶ್ಯಕ. ಕೃಷ್ಣನ ಸಂದೇಶವನ್ನು ಕೂಡ ನಾವೆಲ್ಲರೂ ತಿಳಿದುಕೊಳ್ಳಬೇಕಾಗಿದೆ.

-ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು

ವಚನಾನಂದ ಸ್ವಾಮೀಜಿ ಹೇಳಿಕೆ

ಮಹಾಸಭಾ ಹೇಳಿಕೆಗೂ ನಮಗೂ ಸಂಬಂಧವಿಲ್ಲ

ಹುಬ್ಬಳ್ಳಿ: ರಾಜ್ಯ ಸರಕಾರದ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯಲ್ಲಿ ಧರ್ಮದ ಕಾಲಂನಲ್ಲಿ ವೀರಶೈವ-ಲಿಂಗಾಯತ ಎಂದು ನಮೂದಿಸುವಂತೆ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಹಾಗೂ ಲಿಂಗಾಯತ ಎಂದು ಬರೆಸುವಂತೆ ಜಾಗತಿಕ ಲಿಂಗಾಯತ ಮಹಾಸಭಾ ನೀಡಿರುವ ಹೇಳಿಕೆಗೂ ನಮಗೂ ಸಂಬಂಧವಿಲ್ಲ ಎಂದು ವೀರಶೈವ-ಲಿಂಗಾಯತ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾಜಕ್ಕೆ ಮೀಸಲು ದೊರಕಿಸದೆ ತಾವು ಪರಿಶಿಷ್ಟ ಜಾತಿ ಸೌಲಭ್ಯ ಪಡೆಯಲು ಮುಂದಾದ ಅತಿ ಸಣ್ಣ ಸಮುದಾಯದ ಮಠಾಧೀಶರಿಂದ ಗೊಂದಲ ಸೃಷ್ಟಿಸುವ ಯತ್ನ ನಡೆಯುತ್ತಿದೆ. ಪಂಚಮಸಾಲಿ ಸಮಾಜದವರು ಸಮೀಕ್ಷೆಯಲ್ಲಿ ಜಾತಿ ಕಾಲಂನಲ್ಲಿ ಏನೆಂದು ಬರೆಸಬೇಕು ಎಂಬುದರ ಬಗ್ಗೆ ಸೆ.17ರಂದು ಬೆಂಗಳೂರಿನಲ್ಲಿ ಸಭೆ ನಡೆಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸಮಾಜ ಹಾಗೂ ಸಮಾಜದ ಪೀಠಗಳಲ್ಲಿ ಯಾವುದೇ ಗೊಂದಲ ಇಲ್ಲ. ಸಮೀಕ್ಷೆಯಲ್ಲಿ ಧರ್ಮಕ್ಕಿಂತ ಜಾತಿ ಪ್ರಾಮುಖ್ಯತೆ ಪಡೆಯುತ್ತದೆ. ಕೇಂದ್ರ ಸರಕಾರದ ಸಮೀಕ್ಷೆಯಲ್ಲಿ ಧರ್ಮಕ್ಕೆ ಪ್ರಾಮುಖ್ಯತೆ ಇರುತ್ತದೆ. ವೀರಶೈವ ಹಾಗೂ ಲಿಂಗಾಯತ ಒಂದೇ ಎಂದು ಹೇಳಲು ಸಾಧ್ಯವೇ ಇಲ್ಲ. ಎರಡೂ ಸಿದ್ಧಾಂತಗಳು ಬೇರೆ.

ವಚನಾನಂದ ಸ್ವಾಮೀಜಿ, ಪಂಚಮಸಾಲಿ ಪೀಠ

ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಕಿಡಿ

ಟಿಪ್ಪು ಸುಲ್ತಾನ್ ಆಡಳಿತ ಇದ್ದಂತೆ ಕಾಂಗ್ರೆಸ್ ಸರಕಾರ

ತುಮಕೂರು: ಕಾಂಗ್ರೆಸ್ ಸರಕಾರ ಎಂದರೆ ಟಿಪ್ಪು ಸುಲ್ತಾನ್ ಸರಕಾರ ಇದ್ದ ಹಾಗೆ ಎಂದು ಬಿಜೆಪಿ ಉಚ್ಚಾಟಿತ ಶಾಸಕ

ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದರು.

ತುಮಕೂರಿನ ನಾಗರಕಟ್ಟೆ ಹಿಂದೂ ಮಹಾಗಣಪತಿ ವಿಸರ್ಜನಾ ಮೆರವಣಿಗೆ ಕಾರ್ಯಕ್ರಮದಲ್ಲಿ ಮಾತನಾಡಿ, ಮುಸ್ಲಿಮರ ಪವಿತ್ರ ಹಬ್ಬ ಈದ್ ಮಿಲಾದ್ ವೇಳೆ ದೇಶದ ಯಾವುದೇ ಭಾಗದಲ್ಲಿ ಹಿಂದೂಗಳು ಕಲ್ಲು ತೂರಾಟ ಮಾಡಿದ್ದಾರಾ ಇಲ್ಲವಲ್ಲ. ಅಂದಮೇಲೆ ನೀವು ಕಲ್ ಯಾಕ್ ಒಗೀತಿರಾ ಎಂದು ಮದ್ದೂರಿನಲ್ಲಿ ಗಣೇಶ ವಿಸರ್ಜನೆ ಸಮಯದಲ್ಲಿ ಕಲ್ಲು ತೂರಾಟ ಮಾಡಿದ ಮುಸ್ಲಿಮರ ಹಾಗೂ ಕಾಂಗ್ರೆಸ್ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ಸರಕಾರ ಎಂದರೆ ಟಿಪ್ಪು ಸುಲ್ತಾನ್ ಸರಕಾರ ಇದ್ದ ಹಾಗೆ, ಔರಂಗಜೇಬ್ ಸರಕಾರ ಇದ್ದಹಾಗೆ. ಅದಕ್ಕೆ ಹಿಂದೂಗಳನ್ನು ಕಂಡರೆ ಆಗಲ್ಲ ಎಂದರು. ಪಾಕಿಸ್ತಾನದ ಮೇಲೆ ಪ್ರೀತಿ ಇದ್ದರೆ ಅಲ್ಲಿಗೆ ಹೋಗಿ ಎಂದರು.

ಯತ್ನಾಳ್ ಪರ ಘೋಷಣೆ

ತುಮಕೂರಿನ ನಾಗರಕಟ್ಟೆ ಹಿಂದೂ ಮಹಾಗಣಪತಿ ವಿಸರ್ಜನೆ ಮೆರವಣಿಗೆ ವೇಳೆ ಸಾವಿರಾರು ಯುವಕರು ಭಾಗಿಯಾಗಿದ್ದರು. ಯತ್ನಾಳ್‌ಗೆ ಭಾರೀ ಜನ ಬೆಂಬಲ ವ್ಯಕ್ತವಾಗಿದ್ದು, ಯತ್ನಾಳ್ ಕರ್ನಾಟಕದ ಹಿಂದೂ ಹುಲಿ, ಕರ್ನಾಟಕದ ಬುಲ್ಡೋಜರ್ ಬಾಬಾ ಎಂಬ ಘೋಷಣೆಗಳು ಮೆರವಣಿಗೆಯುದ್ದಕ್ಕೂ ಮೊಳಗಿತು.

ರಾಜ್ಯದಲ್ಲಿ ಹಿಂದೂ ವಿರೋಧಿ ಸರಕಾರ ಆಡಳಿತ

ಹೆಚ್ಚಿನ ಪರಿಹಾರ ನೀಡದಿದ್ದರೆ ರಾಜೀನಾಮೆ ಕೊಡಿ: ಕರಂದ್ಲಾಜೆ

ಶಿವಮೊಗ್ಗ: ಮೊಸಳೆಹೊಸಳ್ಳಿಯಲ್ಲಿ ಗಣೇಶ ಮೆರವಣಿಗೆ ವೇಳೆ ಸಂಭವಿಸಿದ ದುರಂತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ಹೆಚ್ಚಿನ ಪರಿಹಾರ ನೀಡಬೇಕು. ಹೆಚ್ಚಿನ ಪರಿಹಾರ ಕೊಡಲು ಸಾಧ್ಯವಾಗದಿದ್ದರೆ ರಾಜೀನಾಮೆ ಕೊಟ್ಟು ಹೋಗಿ ಎಂದು ಸಿಎಂ ಸಿದ್ದರಾಮಯ್ಯ ವಿರುದ್ಧ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ವಾಗ್ದಾಳಿ ನಡೆಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಹಿಂದೂ ವಿರೋಧಿ ಸರಕಾರ ಆಡಳಿತ ನಡೆಸುತ್ತಿದೆ. ಸರಕಾರ ಒಂದು ಸಮುದಾಯದ ಓಲೈಕೆಗೆ ಮುಂದಾಗಿದೆ. ಈ ಸರಕಾರಕ್ಕೆ ಅಲ್ಪಸಂಖ್ಯಾತರ ನೋವು ಕಾಣುತ್ತಿದೆ. ಬೇರೆ ಸಮುದಾಯದ ನೋವುಗಳು ಕಾಣುತ್ತಿಲ್ಲ. ಕೇರಳದ ಆನೆಯಿಂದ ಸಾವನಪ್ಪಿದವರಿಗೆ ಪರಿಹಾರ ನೀಡುತ್ತಾರೆ. ಆರ್‌ಸಿಬಿ ವಿಜಯೋತ್ಸವದಲ್ಲಿ ಸತ್ತವರಿಗೆ ಹೆಚ್ಚಿನ ಪರಿಹಾರ ನೀಡುತ್ತಾರೆ. ಹಾಸನದಲ್ಲಿ ಗಣೇಶ ಮೆರವಣಿಗೆ ವೇಳೆ ಮೃತಪಟ್ಟವರಿಗೆ ಯಾಕೆ ಹೆಚ್ಚಿನ ಪರಿಹಾರ ಇಲ್ಲ ಎಂದು ಅವರು ಅಸಮಾಧಾನ ಹೊರಹಾಕಿದ್ದಾರೆ.

ಮಂಡ್ಯದ ಮದ್ದೂರಿನಲ್ಲಿ ಅನಧಿಕೃತ ಮಸೀದಿ ನಿರ್ಮಾಣ ಮಾಡಲಾಗಿದೆ. ಆದರೂ ಈ ಬಗ್ಗೆ ಯಾವುದೇ ಕ್ರಮಕೈಗೊಂಡಿಲ್ಲ. ಗಲಾಟೆಗಳಿಗೆ ನಮ್ಮ ಮೇಲೆ ಆರೋಪ ಮಾಡುತ್ತೀರಾ? ರಾಜ್ಯದಲ್ಲಿ ಸಂಭವಿಸುತ್ತಿರುವ ಗಲಾಟೆಗೆ ಸಿಎಂ ಸಿದ್ದರಾಮಯ್ಯ ದುರಹಂಕಾರವೇ ಕಾರಣ ಎಂದು ಅವರು ಆರೋಪಿಸಿದ್ದಾರೆ.

ನಾಗಮಂಗಲದಲ್ಲಿ ಗಲಭೆ ನಡೆಸಿದ್ದ ಕೆಲವು ಮುಸ್ಲಿಂ ಕಿಡಿಗೇಡಿಗಳು ಈ ಬಾರಿ ಮದ್ದೂರಿನಲ್ಲಿಯೂ ಗಣಪತಿ ಮೆರವಣಿಗೆ ಮೇಲೆ ಕಲ್ಲು ತೂರಿದ್ದಾರೆ. ಈ ಸರಕಾರದಲ್ಲಿ ಏನೇ ಮಾಡಿದರೂ ನಡೆಯುತ್ತದೆ ಎನ್ನುವುದು ಕಿಡಿಗೇಡಿಗಳ ಭಾವನೆ. ಗಲಭೆ ಪೂರ್ವದಲ್ಲಿ ಪೊಲೀಸರು ಹಾಗೂ ಗುಪ್ತಚರ ಇಲಾಖೆಗೆ ಮಾಹಿತಿ ಇರಲಿಲ್ಲವೆ?, ಈ ಘಟನೆಗೆ ಸರಕಾರವೇ ನೇರ ಹೊಣೆ.

-ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

ಮಾವುತರಿಗೆ ವಿಶೇಷ ಉಪಾಹಾರ

ಮೈಸೂರು: ದಸರಾ ಅಂಗವಾಗಿ ಮಾವುತರು, ಕಾವಾಡಿಗರ ಕುಟುಂಬಗಳಿಗೆ ಜಿಲ್ಲಾಡಳಿತದ ವತಿಯಿಂದ ಅರಮನೆ ಆವರಣದಲ್ಲಿ ಉಪಾಹಾರ ವ್ಯವಸ್ಥೆ ಮಾಡಲಾಗಿತ್ತು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಉಪಾಹಾರ ಬಡಿಸಿ ಸತ್ಕರಿಸಿದರು.

ಇದೇ ವೇಳೆ ಮಾವುತರು ಹಾಗೂ ಕಾವಾಡಿಗರ ಮಕ್ಕಳಿಗೆ ತಾತ್ಕಾಲಿಕವಾಗಿ ತೆರೆದಿರುವ ಶಾಲೆಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾವುತ ಮತ್ತು ಕಾವಾಡಿಗರ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ ವೀಕ್ಷಿಸಿದರು. ಈ ಸಂದರ್ಭದಲ್ಲಿ ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ವಸ್ತುಪ್ರದರ್ಶನ ಅಧ್ಯಕ್ಷ ಆಯೂಬ್ ಖಾನ್, ಜಿಲ್ಲಾಧಿಕಾರಿ ಜಿ ಲಕ್ಷ್ಮೀ ಕಾಂತ ರೆಡ್ಡಿ, ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ಡಿಸಿಪಿಗಳಾದ ಬಿಂದುಮಣಿ, ಸುಂದರ್ ರಾಜ್ ಹಾಗೂ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ದಸರಾ ಅಂಗವಾಗಿ ಮಾವುತರು, ಕಾವಾಡಿಗರ ಕುಟುಂಬಗಳಿಗೆ ಜಿಲ್ಲಾಡಳಿತದ ವತಿಯಿಂದ ಅರಮನೆ ಆವರಣದಲ್ಲಿ ಉಪಾಹಾರ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಉಪಹಾರ ಬಡಿಸಿ ಸತ್ಕರಿಸಿದರು.

ನಮ್ಮ ಆಹ್ವಾನ ಸಂತೋಷದಿಂದ ಸ್ವೀಕರಿಸಿದ್ದಾರೆ: ಎಚ್.ಸಿ.ಮಹದೇವಪ್ಪ

ಪ್ರಮೋದಾದೇವಿಗೆ ಸರಕಾರ ದಸರಾ ಆಹ್ವಾನ

ಮೈಸೂರು: ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರಿಗೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ದಸರಾ ಉತ್ಸವಕ್ಕೆ ಸರಕಾರದ ಪರವಾಗಿ ಭಾನುವಾರ ಅಧಿಕೃತ ಆಹ್ವಾನ ನೀಡಿದರು.

ಅಂಬಾವಿಲಾಸ ಅರಮನೆಯಲ್ಲಿರುವ ನಿವಾಸದಲ್ಲಿ ಪ್ರಮೋದಾದೇವಿ ಒಡೆಯರ್ ಅವರನ್ನು ಭೇಟಿಯಾಗಿ ಸಾಂಪ್ರದಾಯಿಕವಾಗಿ ಫಲ ತಾಂಬೂಲ ನೀಡಿ ದಸರಾ ಉತ್ಸವಕ್ಕೆ ಆಹ್ವಾನಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀ ಕಾಂತ ರೆಡ್ಡಿ, ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಜಿಪಂ ಸಿಇಒ ಎಸ್ . ಯುಕೇಶ್ ಕುಮಾರ್ , ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ಅಪರ ಜಿಲ್ಲಾಧಿಕಾರಿ ಡಾ. ಪಿ. ಶಿವರಾಜು ಹಾಗೂ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಸಾಂಪ್ರದಾಯಿ ಕವಾಗಿ ರಾಜವಂಶಸ್ಥರನ್ನು ದಸರಾಗೆ ಆಹ್ವಾನಿಸಿದ್ದೇವೆ. ನಮ್ಮ ಆಹ್ವಾನವನ್ನು ಸಂತೋಷದಿಂದ ಸ್ವೀಕರಿಸಿದ್ದಾರೆ. ದಸರಾಗೆ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಹೇಳಿದ್ದಾರೆ. ಅದನ್ನು ಬಿಟ್ಟರೆ ದಸರಾ ಉದ್ಘಾಟಕರ ವಿಚಾರ ಹಾಗೂ ಇತರ ಯಾವುದೇ ವಿಚಾರಗಳ ಬಗ್ಗೆ ಚರ್ಚೆಯಾಗಿಲ್ಲ ಎಂದರು.

ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರಿಗೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ದಸರಾ ಉತ್ಸವಕ್ಕೆ ಸರಕಾರದ ಪರವಾಗಿ ಭಾನುವಾರ ಅಧಿಕೃತ ಆಹ್ವಾನ ನೀಡಿದರು.

ಜಂಬೂ ಸವಾರಿಯ ದಿನ ಅರಮನೆ ಮುಂಭಾಗದಲ್ಲಿ ಹೆಚ್ಚಿನ ಆಸನಗಳ ವ್ಯವಸ್ಥೆ ಮಾಡುವಂತೆ ಪ್ರಮೋದಾದೇವಿ ಅವರು ಸಲಹೆ ನೀಡಿದ್ದಾರೆ. ಕಳೆದ ಬಾರಿ ಹೆಚ್ಚಿನ ಆಸನಗಳ ವ್ಯವಸ್ಥೆ ಮಾಡಲಾಗಿತ್ತು. ಮಳೆ ಬಂದಿದ್ದರಿಂದ ಜನ ಅರಮನೆಗೆ ನುಗ್ಗಿದ್ದು, ಇದರಿಂದ ಗೊಂದಲ ಸೃಷ್ಟಿಯಾಗಿದೆ. ಇದರ ಬಗ್ಗೆ ಜಿಲ್ಲಾಡಳಿತ ಕ್ರಮ ತೆಗೆದುಕೊಳ್ಳುತ್ತದೆ.

ಎಚ್.ಸಿ.ಮಹದೇವಪ್ಪ, ಸಚಿವ

ಅಪಘಾತ: ಇಬ್ಬರು ಸಾವು

ಗೌರಿಬಿದನೂರು: ನಗರದ ಬೈಪಾಸ್ ಗಣೇಶ ವಿಸರ್ಜನೆ ವೀಕ್ಷಿಸಲು ಕಾರಿನಲ್ಲಿ ತೆರಳುತ್ತಿದ್ದ ಇಬ್ಬರು ವಡ್ಡರ ಬಂಡೆ ಕ್ರಾಸ್ ಬಳಿ ಭಾನುವಾರ ನಡೆದ ಅಪಘಾತದಲ್ಲಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಗೆದರೆ ಪ್ರಾಥಮಿಕ ಆರೋಗ್ಯ ಕೇಂದ್ರದ ಎಫ್‌ಡಿಎ ಶಶಿ (42) ಮತ್ತು ಮಂಚೇನಹಳ್ಳಿ ತಾಲೂಕಿನ ದಂಡಿಗಾನಹಳ್ಳಿಯ ಮೆಕ್ಯಾನಿಕ್ ಮುನಿರಾಜು (28) ಮೃತರು. ಕಾರಿನಲ್ಲಿದ್ದ ಮಂಚೇನಹಳ್ಳಿಯ ಮುಕ್ಕಡಿಪೇಟೆಯ ರಮೇಶ್ (40) ತೀವ್ರವಾಗಿ ಗಾಯಗೊಂಡಿದ್ದು ಬೆಂಗಳೂರಿನ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.'

ಭಟ್ ಟ್ರಾವೆಲ್ ಆಂಡ್ ಟೂರ್ಸ್
ಚಾಮರಾಜ ಪೇಟೆ, ಬೆಂಗಳೂರು

7 ದಿನಗಳು ರಷ್ಯಾ
6 ದಿನಗಳು ಬಾಲಿ
ಶ್ರೀಲಂಕಾ 6 ದಿನ
4 ದಿನಗಳು ಲಂಕಾವಿ
ಸಂಪರ್ಕಿಸಿ
ಭಟ್ ಟ್ರಾವೆಲ್ಸ್: 98440 37295

ವಿಶ್ವವಾಣಿ

ಸಂಪಾದಕೀಯ

ಬೇಲಿಯೇ ಹೊಲವನ್ನು ಮೇಯ್ದರೆ!

ಬಸವಣ್ಣನವರು ತಮ್ಮ ವಚನವೊಂದರಲ್ಲಿ, 'ಏರಿಯೇ ನೀರನ್ನು ಕುಡಿದರೆ, ಬೇಲಿಯೇ ಹೊಲವನ್ನು ಮೇಯ್ದರೆ, ಮನೆಯಾಕೆಯೇ ತನ್ನ ಮನೆಯಲ್ಲಿ ಕಳ್ಳತನ ಮಾಡಿದರೆ ಯಾರಿಗೆ ದೂರಬೇಕು?' ಎಂಬರ್ಥದಲ್ಲಿ ಪ್ರಶ್ನಿಸಿದ್ದಾರೆ. ಬೆಂಗಳೂರಿನಲ್ಲಿ ಬಯಲಾಗಿರುವ ಆಘಾತಕಾರಿ ಘಟನೆಯೊಂದು ಈ ಮಾತನ್ನು ನೆನಪಿಸಿಕೊಳ್ಳುವಂತೆ ಮಾಡಿದೆ. ವಿವಿಧ ಸ್ತರದ ಪೊಲೀಸ್ ಸಿಬ್ಬಂದಿಗಳು, ಡ್ರಗ್ ಪೆಡ್ಲರ್‌ಗಳ ಜತೆ ಶಾಮೀಲಾಗಿ ಮಾದಕ ವಸ್ತುಗಳ ಮಾರಾಟದ ದಂಧೆಯಲ್ಲಿ ಕೈಜೋಡಿಸಿದ್ದ ಘಟನೆಯಿದು. ಈ ಸಂಬಂಧವಾಗಿ 11 ಮಂದಿಯನ್ನು ಸಸ್ಪೆಂಡ್ ಮಾಡಲಾಗಿದೆ ಎಂಬುದು ಲಭ್ಯ ಸುದ್ದಿ. ಈಗ ಅಮಾನತುಗೊಂಡಿರುವ ಸಿಬ್ಬಂದಿಗಳು, ಮಾದಕ ವಸ್ತುಗಳ ಮಾರಾಟಕ್ಕೆ ಸಹಕರಿಸಿದ್ದಕ್ಕಾಗಿ ಡ್ರಗ್ ಪೆಡ್ಲರ್‌ಗಳಿಂದ ತಿಂಗಳಿಗೆ 2 ಲಕ್ಷ ರುಪಾಯಿ ಹಫ್ತಾವನ್ನೂ ವಸೂಲಿ ಮಾಡುತ್ತಿದ್ದರು ಎಂಬ ಆರೋಪವೂ ಕೇಳಿಬಂದಿದೆ. ಒಂದು ಕಡೆ, ದೇಶದ ಉದ್ದಗಲಕ್ಕೂ ತನ್ನ ಕಬಂಧ ಬಾಹುವನ್ನು ಚಾಚಿರುವ ಮಾದಕ ವಸ್ತುಗಳ ಪಿಡುಗನ್ನು ಮೂಲೋತ್ಪಾಟನೆ ಮಾಡಲು ಒಂದಷ್ಟು ಪ್ರಾಮಾಣಿಕ ಪೊಲೀಸ್ ಸಿಬ್ಬಂದಿಗಳು ಅಹರ್ನಿಶಿ ಶ್ರಮಿಸುತ್ತಿದ್ದರೆ, ಮತ್ತೊಂದೆಡೆ ಅದೇ ವೃತ್ತಿಯವರು ಹೀಗೆ ಡ್ರಗ್ ಪೆಡ್ಲರ್‌ಗಳ ಜತೆ ಶಾಮೀಲಾಗಿದ್ದು ನಾಚಿಕೆಗೇಡಿನ ಸಂಗತಿ. 'ತೊಟ್ಟಿಯ ತಳಭಾಗದಲ್ಲಿ ಸೋರಿಕೆಗೆ ಕಾರಣವಾಗಿರುವ ರಂಧ್ರವನ್ನು ಮುಚ್ಚದೆ ಮೇಲಿನಿಂದ ಎಷ್ಟು ನೀರು ತುಂಬಿದರೂ ವ್ಯರ್ಥ' ಎಂಬ ಗ್ರಹಿಕೆಗೆ ಇಂಥ ನಿದರ್ಶನಗಳು ಪುಷ್ಟಿ ನೀಡುತ್ತವೆ. ವ್ಯವಸ್ಥೆಯೊಳಗೆ ಇಂಥ 'ಅನರ್ಹ ಕೊಂಡಿ'ಗಳು ಸೇರಿಕೊಂಡಿರುವುದರಿಂದಲೇ, ವ್ಯವಸ್ಥೆಯ ಬಂಧಕಶಕ್ತಿ ಕುಗ್ಗುತ್ತಿದೆ ಎಂಬುದು ನಿರಾಕರಿಸಲಾಗದ ಸತ್ಯ. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಅದರ ಹಿಂದಿರುವ ಕುತ್ಸಿತ ಶಕ್ತಿಗಳ ಹೆಡೆಮುರಿ ಕಟ್ಟಬೇಕಿದೆ. ಅಲ್ಲಿಯವರೆಗೆ 'ವ್ಯವಸ್ಥೆ' ಎಂಬ ತೊಟ್ಟಿ ಸೋರುತ್ತಲೇ ಇರುತ್ತದೆ...

ಸೊಂಪಾದಕೀಯ

ಮೂರ್ತಿ ಚಿಕ್ಕದು, ಕೀರ್ತಿ ದೊಡ್ಡದು

ಭಾರತದಲ್ಲಿ ಮನರಂಜನೆ ಅಂದ್ರೆ, ಸಿನಿಮಾ ಅನ್ನೋ ಮಾತು ಜನಜನಿತ. ಈಗೀಗ ಸಿನಿಮಾ ನೋಡಬೇಕು ಅಂದ್ರೆ ಚಿತ್ರಮಂದಿರಕ್ಕೇ ಹೋಗಬೇಕು ಅಂತೇನಿಲ್ಲ. ಮನೆಯ ದೂರದರ್ಶನ ಈಗ ಎಲ್ಲರಿಗೂ ಚಿತ್ರಮಂದಿರದಷ್ಟೇ ಹತ್ತಿರ. ಅಲ್ಲದೆ ಮೊಬೈಲ್, ಲ್ಯಾಪ್‌ಟಾಪ್, ಟ್ಯಾಬ್ಲೆಟ್‌ಗಳೂ ಈಗ ಟೂರಿಂಗ್ ಟಾಕೀಸ್‌ಗಳಾಗಿವೆ. ಹಾಗಾಗಿ ಮನರಂಜನೆ ಈಗ ಮನೆರಂಜನೆ ಆಗಿದೆ. ಆದರೆ ಇತ್ತೀಚೆಗೆ, ಜನಪ್ರಿಯತೆಯಲ್ಲೂ, ಕಮರ್ಷಿಯಲ್ ವಿಷಯದಲ್ಲೂ ಸಿನಿಮಾಗಳಿಗಿಂತ ಹೆಚ್ಚು ಸದ್ದು ಮಾಡ್ತಾ ಇರೋದು ಟಿವಿ ಧಾರಾವಾಹಿಗಳು. ಜನಪ್ರಿಯತೆಯ ವಿಷಯಕ್ಕೆ ಬಂದ್ರೆ, ನಮ್ಮ ಹೋಮ್ಲಿ ಆಡಿಯೆನ್ಸ್‌ಗೆ ಧಾರಾವಾಹಿಗಳ ಪರಿಚಯ ಇದ್ದಷ್ಟು ಸಿನಿಮಾಗಳ ಬಗ್ಗೆ ಇರೋದಿಲ್ಲ. ಧಾರಾವಾಹಿಗಳ ಹೆಸರು ನಮ್ಮ ವೀಕ್ಷಕರಿಗೆ ನಾಲಿಗೆಯ ತುದಿಯಲ್ಲೇ ಇರುತ್ತೆ. ಆದರೆ ಸಿನಿಮಾಗಳು ಸೆಟ್ಟೇರಿದ್ರೂ, ಬಿಡುಗಡೆ ಆಗಿದ್ರೂ ಗೊತ್ತಾಗಿರಲ್ಲ. ಸಿನಿಮಾ ನಟರಲ್ಲಿ ಹಳೆ ತಲೆಗಳನ್ನು ಬಿಟ್ಟರೆ ಹೊಸಬರ ಬಗ್ಗೆ ಒಂದಿನಿತೂ ಗೊತ್ತಿರಲ್ಲ. ಆದರೆ ಧಾರಾವಾಹಿಯ ನಟ, ನಟಿಯರನ್ನು ಮಾತ್ರ ತಮ್ಮ ಮನೆ ಮಕ್ಕಳಂತೇ ನೋಡುತ್ತಾರೆ. ಇನ್ನು ಕಮರ್ಷಿಯಲ್ ವಿಷಯಕ್ಕೆ ಬಂದರೆ ವರ್ಷದಲ್ಲಿ ನೂರಾರು ಸಿನಿಮಾಗಳು ಬಿಡುಗಡೆ ಆದ್ರೂ, ಅವುಗಳಲ್ಲಿ ಜನರನ್ನು ತಲುಪೋದು ಮೂರು ಮತ್ತೊಂದು ಎನ್ನುವಷ್ಟು ಮಾತ್ರ. ಸಿನಿಮಾ ಮಾಡಿ ಮನೆ-ಮಠ ಕಳೆದುಕೊಂಡ ಎಷ್ಟೋ ಜನ ನಮಗೆ ಕಾಣಸಿಗುತ್ತಾರೆ. ಆದರೆ, ಧಾರಾವಾಹಿ ಮಾಡಿ ಹಣ ಕಳೆದುಕೊಂಡೆ ಅನ್ನೋರು ಸಿಗೋದು ಕಷ್ಟ. ಧಾರಾವಾಹಿಗಳು ಹಣಗಳಿಕೆಯಲ್ಲೂ ಸಿನಿಮಾಗಳಿಗಿಂತ ಮುಂದೆ ಇವೆ. ಹಾಗಾಗಿ ಜಾಹೀರಾತುಗಳಿಗೂ ಸೀರಿಯಲ್ ಉದ್ಯಮದವರು ಸಾಕಷ್ಟು ಖರ್ಚು ಮಾಡುತ್ತಿದ್ದಾರೆ. ಸಿನಿಮಾದವರೇ ಯಾವುದೇ ಪ್ರಚಾರ ಇಲ್ಲದೆ ಇದ್ದಕ್ಕಿದ್ದಂತೆ ಸಿನಿಮಾ ಬಿಡುಗಡೆ ಮಾಡುತ್ತಾರೆ. 'ಅದಕ್ಯಾಕೆ ಮತ್ತಷ್ಟು ಖರ್ಚು, ಮತ್ತಷ್ಟು ಲಾಸು' ಅನ್ನೋ ಮನೋಭಾವ ಇವರದು. ಆದರೆ ಧಾರಾವಾಹಿಗಳು ಹಾಗಲ್ಲ. ಹೊಸ ಧಾರಾವಾಹಿ ಶುರು ಆಗ್ತಾ ಇದೆ ಅಂದ್ರೆ, ಎಲ್ಲ ಪತ್ರಿಕೆಗಳಲ್ಲೂ ಫುಲ್‌ಪೇಜ್ ಜಾಹೀರಾತು. ಟಿವಿಗಳಲ್ಲಂತೂ ಕೇಳೋದೇ ಬೇಡ. ಅಷ್ಟೇ ಅಲ್ಲದೆ ಊರಿನ ಗೋಡೆಗಳ ಮೇಲೆ ಪೋಸ್ಟರನ್ನು ಕೂಡಾ ಅಂಟಿಸಲಾಗುತ್ತದೆ. ಜತೆಗೆ ಸ್ಕೈವಾಕ್‌ಗಳ ಮೇಲೆ, ಆಟೋ, ಸಿಟಿ ಬಸ್ಸುಗಳಲ್ಲೂ ಧಾರಾವಾಹಿಗಳ ಅಬ್ಬರ. ಹಾಗಾಗಿ ಈಗ ಟಿವಿ ಧಾರಾವಾಹಿಗಳು ಸಿನಿಮಾಗಿಂತ ಒಂದು ಹೆಜ್ಜೆ ಮುಂದಿವೆ ಮತ್ತು ಹಣಕಾಸಿನ ವಿಷಯದಲ್ಲಿ ಸೇಫ್ ಎನಿಸಿಕೊಂಡಿವೆ.

ಸಂಪಾದಕರ ಸದ್ಯಶೋಧನೆ

ಹೆಡ್‌ವಿಂಡ್ ಮತ್ತು ಟೇಲ್‌ವಿಂಡ್

ವಿಮಾನಯಾನದಲ್ಲಿ ಹೆಡ್‌ವಿಂಡ್ (Headwind) ಮತ್ತು ಟೇಲ್‌ವಿಂಡ್ (Tailwind) ಅಂತ ಹೇಳುವುದನ್ನು ಕೇಳಿರಬಹುದು. ಹಾಗಂದರೇನು? ಸರಳವಾಗಿ ಹೇಳುವುದಾದರೆ, ನೀವು ಚಲಿಸುತ್ತಿರುವ ದಿಕ್ಕಿನ ಎದುರಿನಿಂದ ಬೀಸುವ ಗಾಳಿಯನ್ನು ಹೆಡ್‌ವಿಂಡ್ (ಎದುರು ಗಾಳಿ) ಎನ್ನುತ್ತಾರೆ. ನೀವು ಚಲಿಸುತ್ತಿರುವ ದಿಕ್ಕಿನ ಹಿಂದಿನಿಂದ ಬೀಸುವ ಗಾಳಿಯನ್ನು ಟೇಲ್‌ವಿಂಡ್ (ಹಿಂಗಾಳಿ) ಎಂದು ಕರೆಯುತ್ತಾರೆ. ಇವೆರಡೂ ವಿಮಾನಯಾನ ಮತ್ತು ಹಡಗುಯಾನದ ಮೇಲೆ ಮಹತ್ವದ ಪರಿಣಾಮ ಬೀರುತ್ತವೆ. ಹೆಡ್‌ವಿಂಡ್ ವಿಮಾನದ ಚಲನೆಯನ್ನು ನಿಧಾನಗೊಳಿಸುತ್ತದೆ. ವಿಮಾನಯಾನದಲ್ಲಿ ಹೆಡ್‌ವಿಂಡ್ ಅನ್ನು ಸಾಮಾನ್ಯವಾಗಿ ಅನುಕೂಲಕರ ಎಂದು ಪರಿಗಣಿಸಲಾಗುತ್ತದೆ, ವಿಶೇಷವಾಗಿ ಟೇಕಾಫ್ ಮತ್ತು ಲ್ಯಾಂಡಿಂಗ್ ಸಮಯದಲ್ಲಿ. ವಿಮಾನ ಟೇಕಾಫ್ ಆಗಲು ಅದರ ರೆಕ್ಕೆಗಳ ಮೇಲೆ ಮತ್ತು ಕೆಳಗೆ ಗಾಳಿಯ ಹರಿವು ಬೇಕು. ಹೆಡ್‌ವಿಂಡ್ ಇದ್ದಾಗ, ವಿಮಾನವು ನಿಂತಿದ್ದರೂ ರೆಕ್ಕೆಗಳ ಮೇಲೆ ಗಾಳಿ ಹರಿಯುತ್ತಿರುತ್ತದೆ. ಇದರಿಂದ, ವಿಮಾನವು ಹಾರಲು ಬೇಕಾದ ವೇಗವನ್ನು (airspeed) ಕಡಿಮೆ ರನ್‌ವೇ ದೂರದಲ್ಲೇ ತಲುಪುತ್ತದೆ. ಇದು ಟೇಕಾಫ್ ಅನ್ನು ಸುರಕ್ಷಿತ ಮತ್ತು ತ್ವರಿತಗೊಳಿಸುತ್ತದೆ. ಲ್ಯಾಂಡಿಂಗ್ ಆಗುವಾಗಲೂ ಹೆಡ್‌ವಿಂಡ್ ವಿಮಾನದ ವೇಗವನ್ನು ತಗ್ಗಿಸಲು ಸಹಾಯ ಮಾಡುತ್ತದೆ. ಇದರಿಂದ ವಿಮಾನವು ಕಡಿಮೆ ವೇಗದಲ್ಲಿ ಮತ್ತು ಕಡಿಮೆ ರನ್‌ವೇ ಅಂತರದಲ್ಲಿ ಸುರಕ್ಷಿತವಾಗಿ ಇಳಿಯಲು ಸಾಧ್ಯವಾಗುತ್ತದೆ. ಆದರೆ, ಆಕಾಶದಲ್ಲಿ ಹಾರುತ್ತಿರುವಾಗ ಹೆಡ್‌ವಿಂಡ್ ವಿಮಾನದ ವೇಗವನ್ನು (ground speed) ಕಡಿಮೆ ಮಾಡುತ್ತದೆ. ಇದರಿಂದ ನಿಗದಿತ ಸ್ಥಳವನ್ನು ತಲುಪಲು ಹೆಚ್ಚು ಸಮಯ ಮತ್ತು ಹೆಚ್ಚು ಇಂಧನ ಬೇಕಾಗುತ್ತದೆ. ಓಟಗಾರರು ಅಥವಾ ಸೈಕ್ಲಿಸ್ಟ್‌ಗಳು ಹೆಡ್‌ವಿಂಡ್‌ಗೆ ವಿರುದ್ಧವಾಗಿ ಚಲಿಸುವಾಗ ಹೆಚ್ಚು ಶ್ರಮ ಹಾಕಬೇಕಾಗುತ್ತದೆ ಮತ್ತು ಅವರ ವೇಗ ಕಡಿಮೆಯಾಗುತ್ತದೆ. ಇನ್ನು ಟೇಲ್‌ವಿಂಡ್ (Tailwind). ಟೇಲ್‌ವಿಂಡ್ ಎಂದರೆ ವಾಹನ ಚಲಿಸುತ್ತಿರುವ ಅದೇ ದಿಕ್ಕಿನಲ್ಲಿ ಬೀಸುವ ಗಾಳಿ. ಇದು ಚಲನೆಯನ್ನು ವೇಗಗೊಳಿಸುತ್ತದೆ. ಟೇಲ್‌ವಿಂಡ್ ವಿಮಾನಯಾನದಲ್ಲಿ ಮಿಶ್ರ ಪರಿಣಾಮಗಳನ್ನು ಬೀರುತ್ತದೆ. ಟೇಲ್‌ವಿಂಡ್ ಇದ್ದರೆ, ವಿಮಾನವು ಹಾರಲು ಬೇಕಾದ ವೇಗವನ್ನು ತಲುಪಲು ಹೆಚ್ಚು ರನ್‌ವೇ ದೂರವನ್ನು ಕ್ರಮಿಸಬೇಕಾಗುತ್ತದೆ. ಏಕೆಂದರೆ, ಗಾಳಿಯು ಹಿಂದಿನಿಂದ ತಳ್ಳುವುದರಿಂದ ರೆಕ್ಕೆಗಳ ಮೇಲೆ ಪರಿಣಾಮಕಾರಿ ಗಾಳಿಯ ಹರಿವು (effective airspeed) ಕಡಿಮೆಯಾಗುತ್ತದೆ. ಇದು ಅಪಾಯಕಾರಿಯಾಗಿದ್ದು, ಸಾಮಾನ್ಯವಾಗಿ ಪೈಲಟ್‌ಗಳು ಟೇಲ್‌ವಿಂಡ್‌ನಲ್ಲಿ ಟೇಕಾಫ್ ಮಾಡುವುದನ್ನು ತಪ್ಪಿಸುತ್ತಾರೆ. ಲ್ಯಾಂಡಿಂಗ್ ಆಗುವಾಗ ಟೇಲ್‌ವಿಂಡ್ ವಿಮಾನದ ವೇಗವನ್ನು ಹೆಚ್ಚಿಸುತ್ತದೆ. ಇದರಿಂದ ವಿಮಾನವನ್ನು ನಿಲ್ಲಿಸಲು ಹೆಚ್ಚು ರನ್‌ವೇ ಬೇಕಾಗುತ್ತದೆ. ಇದು ಕೂಡ ಅಪಾಯಕಾರಿ. ಆಕಾಶದಲ್ಲಿ ಹಾರುತ್ತಿರುವಾಗ ಟೇಲ್‌ವಿಂಡ್ ಅತ್ಯಂತ ಅನುಕೂಲಕರ. ಗಾಳಿಯು ವಿಮಾನವನ್ನು ಹಿಂದಿನಿಂದ ತಳ್ಳುವುದರಿಂದ ಅದರ ವೇಗ (ground speed) ಹೆಚ್ಚಾಗುತ್ತದೆ. ಇದರಿಂದ ಪ್ರಯಾಣದ ಸಮಯ ಕಡಿಮೆಯಾಗುತ್ತದೆ ಮತ್ತು ಇಂಧನ ಉಳಿತಾಯವಾಗುತ್ತದೆ. ಜೆಟ್ ಸ್ಟ್ರೀಮ್‌ಗಳಂಥ (Jet Streams) ಶಕ್ತಿಯುತ ಟೇಲ್‌ವಿಂಡ್‌ಗಳನ್ನು ಬಳಸಿಕೊಂಡು ವಿಮಾನಗಳು ತಮ್ಮ ಪ್ರಯಾಣದ ಸಮಯವನ್ನು ಗಣನೀಯವಾಗಿ ಕಡಿಮೆ ಮಾಡಿಕೊಳ್ಳುತ್ತವೆ. ಹಾಗೆಯೇ ಓಟಗಾರರಿಗೆ ಅಥವಾ ಸೈಕ್ಲಿಸ್ಟ್‌ಗಳಿಗೆ ಟೇಲ್‌ವಿಂಡ್ ಇದ್ದರೆ, ಅವರು ಕಡಿಮೆ ಶ್ರಮದಿಂದ ಹೆಚ್ಚು ವೇಗವಾಗಿ ಚಲಿಸಬಹುದು. ಭೂಮಿಯ ವಾತಾವರಣದಲ್ಲಿ, ಅತಿ ಎತ್ತರದಲ್ಲಿ (ಸುಮಾರು 9-14 ಕಿ.ಮೀ.) ಅತ್ಯಂತ ವೇಗವಾಗಿ ಹರಿಯುವ ಗಾಳಿಯ ಕಿರಿದಾದ ಪಟ್ಟಿಗಳಿವೆ. ಇವುಗಳನ್ನು 'ಜೆಟ್ ಸ್ಟ್ರೀಮ್' ಎಂದು ಕರೆಯುತ್ತಾರೆ. ಈ ಜೆಟ್ ಸ್ಟ್ರೀಮ್‌ಗಳು ಗಂಟೆಗೆ 200ರಿಂದ 400 ಕಿ.ಮೀ.ಗಿಂತ ಹೆಚ್ಚು ವೇಗದಲ್ಲಿ ಚಲಿಸುತ್ತವೆ. ವಿಮಾನಗಳು ಈ ಜೆಟ್ ಸ್ಟ್ರೀಮ್ ಅನ್ನು ಟೇಲ್‌ವಿಂಡ್ ಆಗಿ ಬಳಸಿಕೊಂಡರೆ, ಅವುಗಳ ಪ್ರಯಾಣದ ಸಮಯ ಮತ್ತು ಇಂಧನ ಬಳಕೆ ಗಣನೀಯವಾಗಿ ಕಡಿಮೆಯಾಗುತ್ತದೆ. 2020ರಲ್ಲಿ, ಬ್ರಿಟಿಷ್ ಏರ್‌ವೇಸ್ ವಿಮಾನವೊಂದು ನ್ಯೂಯಾರ್ಕ್‌ನಿಂದ ಲಂಡನ್‌ಗೆ ಕೇವಲ 4 ಗಂಟೆ 56 ನಿಮಿಷಗಳಲ್ಲಿ ತಲುಪಿ ದಾಖಲೆ ನಿರ್ಮಿಸಿತು. ಇದಕ್ಕೆ ಕಾರಣ, ಅಟ್ಲಾಂಟಿಕ್ ಸಾಗರದ ಮೇಲೆ ಬೀಸುತ್ತಿದ್ದ ಅತ್ಯಂತ ಶಕ್ತಿಶಾಲಿ ಜೆಟ್ ಸ್ಟ್ರೀಮ್ (ಟೇಲ್‌ವಿಂಡ್). ಅದೇ ವಿಮಾನ ಲಂಡನ್‌ನಿಂದ ನ್ಯೂಯಾರ್ಕ್‌ಗೆ (ಹೆಡ್‌ವಿಂಡ್‌ಗೆ ವಿರುದ್ಧವಾಗಿ) ಬರಲು ಸುಮಾರು 7-8 ಗಂಟೆ ತೆಗೆದುಕೊಳ್ಳುತ್ತದೆ.

ಅರಸು, ಕೃಷ್ಣ, ಯಡಿಯೂರಪ್ಪ ಅವರಿಗೆ ನಸೀಬು ಇತ್ತು

ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಇದು 1999ರಲ್ಲಿ ನಡೆದ ಘಟನೆ.

ಆ ಸಂದರ್ಭದಲ್ಲಿ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಲಿಂಗಾಯತ ನಾಯಕ ರಾಜಶೇಖರ ಮೂರ್ತಿ ಅವರನ್ನು ತರಲು ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ನಿರ್ಧರಿಸಿದ್ದರು. ಅವರು ಹೀಗೆ ನಿರ್ಧರಿಸಲು ಹಲವು ಕಾರಣಗಳಿದ್ದವು. ಈ ಪೈಕಿ ಮುಖ್ಯವಾದುದೆಂದರೆ ಜನತಾದಳದಲ್ಲಿ ನಡೆದ ಬೆಳವಣಿಗೆ.

ಅರ್ಥಾತ್, ಅ ಹೊತ್ತಿಗೆ ಕರ್ನಾಟಕದಲ್ಲಿ ಆಡಳಿತ ನಡೆಸುತ್ತಿದ್ದ ಜನತಾದಳ ಆಂತರಿಕ ಸಂಘರ್ಷದಿಂದ ಕಂಗಾಲಾಗಿತ್ತು. ಕರ್ನಾಟಕದಲ್ಲಿ ಅಧಿಕಾರ ಹಿಡಿದ ನಂತರ ಜನತಾಪರಿವಾರದ ಆಧಾರಸ್ತಂಭವೇ ಆಗಿದ್ದ ಹಿರಿಯ ನಾಯಕ ರಾಮಕೃಷ್ಣ ಹೆಗಡೆ ಪಕ್ಷದಿಂದ ಉಚ್ಚಾಟಿತರಾಗಿದ್ದು ಈ ಸಂಘರ್ಷದ ಮೂಲವಾಗಿತ್ತು. ಯಾವಾಗ ಹೆಗಡೆ ಉಚ್ಚಾಟಿತರಾದರೋ, ಲಿಂಗಾಯತ ವರ್ಗ ತಿರುಗಿಬಿತ್ತು ಮತ್ತು ಹೆಗಡೆಯವರ ಉಚ್ಚಾಟನೆಗೆ ಕಾರಣರಾದ ದೇವೇಗೌಡರ ವಿರುದ್ಧ ಕುದಿಯುತ್ತಿತ್ತು. ಹೀಗೆ ಜನತಾದಳದಲ್ಲಿ ಭುಗಿಲೆದ್ದಿದ್ದ ಆಂತರಿಕ ಸಂಘರ್ಷದ ಜಾಡು ಹಿಡಿದ ಕಾಂಗ್ರೆಸ್ ವರಿಷ್ಠರು 1999ರ ವಿಧಾನಸಭೆ ಚುನಾವಣೆ ಹತ್ತಿರವಾಗುತ್ತಿದ್ದಂತೆಯೇ ಲಿಂಗಾಯತ ನಾಯಕರೊಬ್ಬರನ್ನು ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ತರಲು ಯೋಚಿಸಿದರು. ಈ ಸಂದರ್ಭದಲ್ಲಿ ಅವರ ಕಣ್ಣಿಗೆ ಕಂಡವರು ಲಿಂಗಾಯತ ಸಮುದಾಯದ ನಾಯಕ, ಮಾಜಿ ಹಣಕಾಸು ಸಚಿವರಾದ ಎಂ.ರಾಜಶೇಖರ ಮೂರ್ತಿ. ಎಷ್ಟೇ ಅದರೂ ರಾಜಶೇಖರಮೂರ್ತಿ ದಕ್ಷ ಆಡಳಿತಗಾರ ಅಂತ ಹೆಸರಾದವರು. ಅಂಥವರು ಪಕ್ಷದ ಅಧ್ಯಕ್ಷರಾದರೆ ಸಹಜವಾಗಿಯೇ ಪಕ್ಷಕ್ಕೆ ಲಾಭ ಎಂಬುದು ಕಾಂಗ್ರೆಸ್ ವರಿಷ್ಠರ ಲೆಕ್ಕಾಚಾರವಾಗಿತ್ತು. ಈ ಲೆಕ್ಕಾಚಾರ ಅನುಷ್ಠಾನಗೊಂಡಿದ್ದರೆ ಕರ್ನಾಟಕದ ರಾಜಕೀಯ ಚಿತ್ರ ಬೇರೆಯೇ ಆಗುತ್ತಿತ್ತು. ಆದರೆ ಕಾಂಗ್ರೆಸ್ ವರಿಷ್ಠರ ಈ ಲೆಕ್ಕಾಚಾರ ತಿಳಿಯುತ್ತಿದ್ದಂತೆಯೇ ಕರ್ನಾಟಕದ ಮದ್ಯದ ದೊರೆಗಳು ಕಂಗಾಲಾದರು. ಅಷ್ಟೇ ಅಲ್ಲ, ವಿಜಯಮಲ್ಯ ಅವರ ನೇತೃತ್ವದಲ್ಲಿ ದಿಲ್ಲಿಗೆ ಹೋಗಲು ಸಜ್ಜಾದರು.

ಅವರ ಈ ನಿರ್ಧಾರಕ್ಕೆ ಒಂದು ಕಾರಣವಿತ್ತು. ಅದೆಂದರೆ- ಹತ್ತು ವರ್ಷಗಳ ಹಿಂದೆ ನಡೆದ ಒಂದು ಘಟನೆ. ಆ ಸಂದರ್ಭದಲ್ಲಿ ವೀರೇಂದ್ರ ಪಾಟೀಲರು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದರು ಮತ್ತು ಅವರ ಸಚಿವ ಸಂಪುಟದಲ್ಲಿ ಎಂ.ರಾಜಶೇಖರ ಮೂರ್ತಿ ಹಣಕಾಸು ಮಂತ್ರಿಯಾಗಿದ್ದರು. ರಾಜಶೇಖರಮೂರ್ತಿ ಮದ್ಯದ ಲಾಬಿಯ ವಿರುದ್ಧ ಯಾವ ರೀತಿ ಮುಗಿಬಿದ್ದರು ಎಂದರೆ, ಕೆಲವೇ ದಿನಗಳಲ್ಲಿ ಮದ್ಯದ ದೊರೆಗಳು ಕಂಗಾಲಾಗಿ ಹೋಗಿದ್ದರು. ಹೀಗೆ ಮುಗಿಬಿದ್ದ ರಾಜಶೇಖರಮೂರ್ತಿ ಅವತ್ತು 700 ಕೋಟಿ ರುಪಾಯಿಗಳಿಗಿಂತಲೂ ಅಧಿಕ ಹಣವು ಸರಕಾರದ ಬೊಕ್ಕಸದಲ್ಲಿ ಸ್ಟಾಕ್ ಇರುವಂತೆ ನೋಡಿಕೊಂಡಿದ್ದರು ಎಂದರೆ ಅವರ ಪವರ್ ಹೇಗೆ ಕೆಲಸ ಮಾಡಿತ್ತು ಎಂಬುದನ್ನು ಊಹಿಸಬಹುದು. ಒಂದು ಹಂತದಲ್ಲಿ ಅವರ ಈ ಹೊಡೆತಕ್ಕೆ ಮದ್ಯದ ದೊರೆಗಳು ಯಾವ ಮಟ್ಟಿಗೆ ಕಂಗಾಲಾಗಿದ್ದರು ಎಂದರೆ, ಹಲವರು ತಮ್ಮ ಉದ್ಯಮವನ್ನೇ ಕರ್ನಾಟಕದಿಂದ ಒಕ್ಕಲೆಬ್ಬಿಸಲು ಮುಂದಾಗಿದ್ದರು.

ಹೀಗೆ ಹತ್ತು ವರ್ಷಗಳ ಹಿಂದೆ ತಮ್ಮನ್ನು ಈ ರೀತಿ ಬಡಿದಿದ್ದ ರಾಜಶೇಖರಮೂರ್ತಿ ಇವತ್ತು ಕೆಪಿಸಿಸಿ ಅಧ್ಯಕ್ಷರಾದರೆ ಸಿಎಂ ಹುದ್ದೆಗೆ ಹತ್ತಿರವಾಗುತ್ತಿದ್ದಾರೆ ಅಂತಲೇ ಅರ್ಥವಲ್ಲವೇ? ಹಾಗಂದುಕೊಂಡ ಮದ್ಯದ ದೊರೆಗಳು ವಿಜಯ್ ಮಲ್ಯ ಅವರ ನೇತೃತ್ವದಲ್ಲಿ ದಿಲ್ಲಿಗೆ ಹೋದರು. ಅಲ್ಲಿ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವರನ್ನು ಭೇಟಿ ಮಾಡಿ ತಮ್ಮ ಸಂಕಟ ತೋಡಿಕೊಂಡರು. ಎಷ್ಟೇ ಆದರೂ ಮದ್ಯದ ದೊರೆಗಳು ಪಾರ್ಟಿ ಫಂಡು ಕೊಡುವವರು. ಅಂಥವರು ಬಂದು ರಾಜಶೇಖರಮೂರ್ತಿಯವರ ವಿರುದ್ಧ ಮಾತನಾಡುತ್ತಿದ್ದಾರೆ ಎಂದರೆ ಸೋನಿಯಾ ಗಾಂಧಿ ಸುಮ್ಮನಿರಲು ಸಾಧ್ಯವೇ? ಹಾಗಂತಲೇ ರಾಜಶೇಖರಮೂರ್ತಿ ಅವರನ್ನು ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ತಂದು ಕೂರಿಸುವ ಪ್ರಪೋಸಲ್ಲನ್ನು ಅವರು ಕೈಬಿಟ್ಟರು. ಪರಿಣಾಮ? ನೋಡನೋಡುತ್ತಿದ್ದಂತೆಯೇ ರಾಜಶೇಖರ ಮೂರ್ತಿ ಅವರ ಜಾಗಕ್ಕೆ ಒಕ್ಕಲಿಗ ನಾಯಕ ಎಸ್.ಎಂ.ಕೃಷ್ಣ ಬಂದು ಕುಳಿತರು.

ಹೀಗೆ ಅವತ್ತು ಕೆಪಿಸಿಸಿ ಅಧ್ಯಕ್ಷರಾದ ಎಸ್.ಎಂ.ಕೃಷ್ಣ ಅವರು ಮುಂದೆ ಕರ್ನಾಟಕದ ಮುಖ್ಯಮಂತ್ರಿಯಾದರು. ಅಷ್ಟೇ ಅಲ್ಲ, ಮಹಾರಾಷ್ಟ್ರದ ರಾಜ್ಯಪಾಲರಾಗಿ, ಕೇಂದ್ರ ಸಚಿವರಾಗಿ ರಾಷ್ಟ್ರ ರಾಜಕಾರಣದ ಉತ್ತುಂಗಕ್ಕೇರಿದರು.

ಅಧಿಕಾರದ ಸನಿಹ ಬಂದಿದ್ದ ಅನಂತ್

ಇನ್ನು 2004ರ ವಿಧಾನಸಭಾ ಚುನಾವಣೆಯಲ್ಲಿ ಅತಂತ್ರ ಫಲಿತಾಂಶ ಬಂತಲ್ಲ? ಆ ಸಂದರ್ಭದಲ್ಲಿ ಕಾಂಗ್ರೆಸ್-ಜೆಡಿಎಸ್ ಮಧ್ಯೆ ಮೈತ್ರಿ ಮಾತುಕತೆ ಶುರುವಾಗಿತ್ತು. ಹೀಗೆ ಮಾತುಕತೆ ನಡೆಯುತ್ತಿದ್ದ ಕಾಲದಲ್ಲೇ ಬಿಜೆಪಿ ನಾಯಕ ಅನಂತಕುಮಾರ್ ಅವರು ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರ ಜತೆ ಒಳಗಿಂದೊಳಗೇ ಮಾತುಕತೆ ಶುರುವಿಟ್ಟುಕೊಂಡರು. ಆ ಸಂದರ್ಭದಲ್ಲಿ ಪಕ್ಷದ ಹಿರಿಯ ನಾಯಕ ಅರುಣ್ ಜೇಟ್ಲಿ ಅವರ ಜತೆಗೂಡಿ ಕುಮಾರಸ್ವಾಮಿಯವರ ಜತೆ ಸಂಧಾನಸಭೆ ನಡೆಸಿದ ಅನಂತಕುಮಾರ್ ಅವರು, ಸಿಎಂ ಹುದ್ದೆಗೆ ನೀವು, ಡಿಸಿಎಂ ಹುದ್ದೆಗೆ ನಾನು ಅಂತ ಹೇಳಿ ಒಪ್ಪಿಸಿದ್ದರು.



ಅವತ್ತು ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದರೂ, ಬಿಜೆಪಿ ತಮಗೆ ನೀಡಿದ ಆಫರ್‌ನಿಂದ ಕುಮಾರಸ್ವಾಮಿ ಖುಷಿಯಾಗಿದ್ದರು. ಆದರೆ ಅರುಣ್ ಜೇಟ್ಲಿ ಮತ್ತು ಅನಂತಕುಮಾರ್ ಅವರು ತಮ್ಮ ಮುಂದೆ ಮಂಡಿಸಿದ ಈ ಪ್ರಪೋಸಲ್ಲನ್ನು ದೇವೇಗೌಡರ ಬಳಿ ಕೊಂಡೊಯ್ದ ಕುಮಾರಸ್ವಾಮಿಯವರಿಗೆ ನಿರಾಸೆ ಕಾದಿತ್ತು. ಯಾಕೆಂದರೆ ಅವತ್ತು ದೇವೇಗೌಡರು ಬಿಜೆಪಿ ಜತೆ ಕೈ ಜೋಡಿಸಲು ಬಿಲ್‌ಕುಲ್ ಒಪ್ಪಲಿಲ್ಲ. ಕಾರಣ? ಅದುವರೆಗಿನ ತಮ್ಮ ರಾಜಕೀಯ ಬದುಕಿನಲ್ಲಿ ಸೆಕ್ಯುಲರ್ ಶಕ್ತಿಗಳ ಜತೆ ಹೆಜ್ಜೆ ಹಾಕಿದ್ದ ಗೌಡರು ಈಗ ಮಗನಿಗಾಗಿ ಬಿಜೆಪಿ ಜತೆ ಕೈಜೋಡಿಸಲು ಸಿದ್ಧರಿರಲಿಲ್ಲ. ಪರಿಣಾಮ? ಕುಮಾರಸ್ವಾಮಿ ಮಾತ್ರವಲ್ಲ, ಬಿಜೆಪಿ ನಾಯಕ ಅನಂತಕುಮಾರ್ ಕೂಡಾ ನಿರಾಸೆ ಅನುಭವಿಸಬೇಕಾಯಿತು.

ಹಾಗೊಂದು ವೇಳೆ ಅವತ್ತು ಅನಂತಕುಮಾರ್ ಮಂಡಿಸಿದ ಪ್ರಪೋಸಲ್ಲು ಕ್ಲಿಕ್ ಆಗಿ ಕುಮಾರಸ್ವಾಮಿ ಸಿಎಂ ಆಗಿದ್ದರೆ, ಅನಂತಕುಮಾರ್ ಡಿಸಿಎಂ ಆಗಿದ್ದರೆ ಕರ್ನಾಟಕದ ರಾಜಕಾರಣ ಬೇರೆಯದೇ ದಿಕ್ಕು ಹಿಡಿಯುತ್ತಿತ್ತು. ಆದರೆ ಇದು ಸಾಧ್ಯವಾಗಲಿಲ್ಲ. ಹೀಗಾಗಿ ಭವಿಷ್ಯದಲ್ಲಿ ಅನಂತಕುಮಾರ್ ದಿಲ್ಲಿಗೆ ಹೋಗಿ ಸೆಟ್ಲಾದರೆ ಯಡಿಯೂರಪ್ಪನವರು ಡಿಸಿಎಂ ಆಗಿ, ಸಿಎಂ ಆಗಿ ಕರ್ನಾಟಕದ ರಾಜಕಾರಣದಲ್ಲಿ ಹೆಮ್ಮರವಾಗಿ ಬೆಳೆದು ನಿಂತರು.

ಅರಸರು ಮೇಲೆದ್ದು ನಿಂತ ಕಥೆ

ಇನ್ನು 1969ರಲ್ಲಿ ಕಾಂಗ್ರೆಸ್ ಪಕ್ಷವು ರಾಷ್ಟ್ರ ಮಟ್ಟದಲ್ಲಿ ವಿಭಜನೆಯಾಯಿತಲ್ಲ? ಆ ಸಂದರ್ಭದಲ್ಲಿ ರಾಜ್ಯದಲ್ಲೂ ಕಾಂಗ್ರೆಸ್ (ಓ) ಮತ್ತು ಕಾಂಗ್ರೆಸ್ (ಆರ್) ತಲೆ ಎತ್ತಿ ನಿಂತವು. ಅವತ್ತು ತಮ್ಮ ನೇತೃತ್ವದ ಕಾಂಗ್ರೆಸ್ (ಆರ್) ಘಟಕಕ್ಕೆ ಕರ್ನಾಟಕದಲ್ಲಿ ಯಾರನ್ನು ಅಧ್ಯಕ್ಷರನ್ನಾಗಿ ಮಾಡಬೇಕು ಅಂತ ಯೋಚಿಸಿದ ಇಂದಿರಾ ಗಾಂಧಿ ಅವರಿಗೆ ಹೊಳೆದಿದ್ದು ಕೋಳೂರು ಮಲ್ಲಪ್ಪನವರ ಹೆಸರು. ಯಾಕೆಂದರೆ ಅಷ್ಟೊತ್ತಿಗಾಗಲೇ ಕೋಳೂರು ಮಲ್ಲಪ್ಪನವರು ರಾಜ್ಯದ ಪ್ರಬಲ ನಾಯಕರಾಗಿ ಬೆಳೆದು ನಿಂತಿದ್ದರು. ಮುಂಬಯಿ-ಕರ್ನಾಟಕ ಮಾತ್ರವಲ್ಲದೆ, ಹೈದ್ರಾಬಾದ್-ಕರ್ನಾಟಕ ಭಾಗದಲ್ಲೂ ಪ್ರಭಾವಿಯಾಗಿದ್ದ ಕೋಳೂರು ಮಲ್ಲಪ್ಪನವರು ತಮ್ಮ ನೇತೃತ್ವದ ಕಾಂಗ್ರೆಸ್ ಘಟಕಕ್ಕೆ ಸೂಟಬಲ್ಲು ಎಂಬುದು ಇಂದಿರಾ ಗಾಂಧಿಯವರ ಲೆಕ್ಕಾಚಾರವಾಗಿತ್ತು.

ಹಾಗಂತಲೇ ಕೋಳೂರು ಮಲ್ಲಪ್ಪನವರನ್ನು ಒಮ್ಮೆ ಸಂಪರ್ಕಿಸಿದ ಇಂದಿರಾ, ''ಮಲ್ಲಪ್ಪಾಜೀ, ನೀವು ರಾಜ್ಯದಲ್ಲಿ ನಮ್ಮ ಪಕ್ಷದ ಅಧ್ಯಕ್ಷರಾಗಬೇಕು ಎಂಬುದು ನಮ್ಮ ಬಯಕೆ. ಇವತ್ತು ನೀವು ಅಧ್ಯಕ್ಷರಾದರೆ ಮುಂದಿನ ವಿಧಾನಸಭೆ ಚುನಾವಣೆಯ ನಂತರ ಸಿಎಂ ಆಗುತ್ತೀರಿ'' ಎಂದರು. ಅವತ್ತು ಇಂದಿರಾ ಗಾಂಧಿ ಅವರು ನೀಡಿದ ಪ್ರಪೋಸಲ್ಲನ್ನು ಕೋಳೂರು ಮಲ್ಲಪ್ಪನವರು ಒಪ್ಪಿದ್ದರೆ ರಾಜ್ಯ ರಾಜಕಾರಣದ ಚಿತ್ರವೇ ಬೇರೆಯಾಗುತ್ತಿತ್ತು. ಆದರೆ ಅದನ್ನು ನಯವಾಗಿ ತಿರಸ್ಕರಿಸಿದ ಕೋಳೂರು ಮಲ್ಲಪ್ಪನವರು, ''ಮೇಡಂ, ಇವತ್ತು ಪಕ್ಷದ ರಾಜ್ಯ ಘಟಕಕ್ಕೆ ನನ್ನನ್ನು ಅಧ್ಯಕ್ಷನನ್ನಾಗಿ ನೇಮಕ ಮಾಡಬೇಕೆಂಬ ನಿಮ್ಮ ಇಚ್ಛೆಗೆ ನಾನು ಋಣಿ. ಆದರೆ ಈ ಜಾಗಕ್ಕೆ ನನ್ನ ಬದಲು ಪ್ರಾಮಿಸಿಂಗ್ ಲೀಡರ್ ದೇವರಾಜ ಅರಸರನ್ನು ನೇಮಕ ಮಾಡಿ. ಯಾಕೆಂದರೆ ಅವರಿಗೆ ಶೋಷಿತ ವರ್ಗಗಳ ಬಗ್ಗೆ ತುಂಬ ಕನಸರ್ನ್ ಇದೆ. ಇದರಿಂದ ಪಕ್ಷಕ್ಕೂ ಅನುಕೂಲ, ರಾಜ್ಯಕ್ಕೂ ಅನುಕೂಲ'' ಎಂದರು.

ಕೋಳೂರು ಮಲ್ಲಪ್ಪನವರ ಈ ಮಾತು ಹೇಳಿದ ನಂತರವೂ ಇಂದಿರಾ ಗಾಂಧಿ ಪಟ್ಟು ಬಿಡಲಿಲ್ಲ. ''ಇಲ್ಲ, ಮಲ್ಲಪ್ಪಾಜೀ ಮತ್ತೊಮ್ಮೆ ಯೋಚಿಸಿ'' ಎಂದರು. ಆದರೆ ತಮ್ಮ ಮಾತಿಗೆ ಅಂಟಿಕೊಂಡಿದ್ದ ಮಲ್ಲಪ್ಪನವರು, ''ಮೇಡಂ, ನಾನು ಪಕ್ಷ ಮತ್ತು ರಾಜ್ಯಕ್ಕೆ ಅನುಕೂಲವಾಗುವ ಪ್ರಪೋಸಲ್ಲು ಕೊಟ್ಟಿದ್ದೇನೆ. ದಯವಿಟ್ಟು ಅದನ್ನು ಪರಿಗಣಿಸಿ'' ಎಂದರು. ಯಾವಾಗ ಮಲ್ಲಪ್ಪನವರು ಈ ಮಾತು ಹೇಳಿದರೋ, ಆಗ ಇಂದಿರಾ ಗಾಂಧಿ ಅವರಿಗೆ ಬೇರೆ ದಾರಿ ಉಳಿಯಲಿಲ್ಲ. ಹೀಗಾಗಿ ಅವರು ದೇವರಾಜ ಅರಸರನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ನೇಮಕ ಮಾಡಿದರು. ಹೀಗೆ ಅವತ್ತು ಕಾಂಗ್ರೆಸ್ ಅಧ್ಯಕ್ಷರಾಗಿ ನೇಮಕಗೊಂಡ ದೇವರಾಜ ಅರಸರು ಮುಂದೆ ಮುಖ್ಯಮಂತ್ರಿಯಾದರು, ಸಾಮಾಜಿಕ ಕ್ರಾಂತಿಯ ಹರಿಕಾರ ಅನ್ನಿಸಿಕೊಂಡರು.

ರಾಚಯ್ಯ ಅವರಿಗೆ ಆಫರ್ ಬಂದಿತ್ತು

ಅಂದ ಹಾಗೆ, ಕರ್ನಾಟಕದಲ್ಲೀಗ ದಲಿತ ಸಿಎಂ ಕೂಗು ಕೇಳಿಸುತ್ತಿದೆಯಲ್ಲ? ಇಂಥ ಕೂಗು ಮೊದಲು ಕೇಳಿಸಿದ್ದು 1968ರಲ್ಲಿ. ಆ ಸಂದರ್ಭದಲ್ಲಿ ಮುಖ್ಯಮಂತ್ರಿ ನಿಜಲಿಂಗಪ್ಪ ಎಐಸಿಸಿ ಅಧ್ಯಕ್ಷರಾಗಿ ನೇಮಕಗೊಂಡಿದ್ದರು. ಹೀಗೆ ನೇಮಕಗೊಂಡವರು ದಿಲ್ಲಿಗೆ ಹೋಗುವ ಮುನ್ನ ಹೊಸ ಮುಖ್ಯಮಂತ್ರಿಯ ಅನ್ವೇಷಣೆಗಿಳಿದರು. ಇಂಥ ಸಂದರ್ಭದಲ್ಲಿ ಅವರ ಕಣ್ಣ ಮುಂದೆ ವೀರೇಂದ್ರ ಪಾಟೀಲ್ ಮತ್ತು ರಾಮಕೃಷ್ಣ ಹೆಗಡೆ ಅವರ ಹೆಸರುಗಳಿದ್ದವಾದರೂ, ಮತ್ತೊಂದು ಹೆಸರು ಅವರನ್ನು ತೀವ್ರವಾಗಿ ಕಾಡತೊಡಗಿತ್ತು. ಆ ಹೆಸರು- ಬಿ.ರಾಚಯ್ಯ.

ಅಷ್ಟೊತ್ತಿಗಾಗಲೇ ದಲಿತ ಸಮುದಾಯದ ಪವರ್‌ಫುಲ್ ನಾಯಕರಾಗಿ ಬೆಳೆದಿದ್ದ ರಾಚಯ್ಯನವರು ನಿಜಲಿಂಗಪ್ಪ ಅವರ ಸಂಪುಟದಲ್ಲಿ ಕಂದಾಯ ಸಚಿವರಾಗಿದ್ದರು. ಇಂಥವರನ್ನು ಸಿಎಂ ಹುದ್ದೆಗೆ ತಂದು ಕೂರಿಸಿದರೆ ರಾಷ್ಟ್ರ ರಾಜಕಾರಣದಲ್ಲಿ ತಮ್ಮ ಇಮೇಜ್ ಹೆಚ್ಚುತ್ತದೆ ಎಂಬುದು ನಿಜಲಿಂಗಪ್ಪನವರ ಲೆಕ್ಕಾಚಾರವಾಗಿತ್ತು. ಹಾಗಂತಲೇ ಒಂದು ದಿನ ರಾಚಯ್ಯನವರನ್ನು ಕರೆಸಿಕೊಂಡ ನಿಜಲಿಂಗಪ್ಪನವರು ತಮ್ಮ ಮನದಿಂಗಿತವನ್ನು ತೋಡಿಕೊಂಡರು. ಆದರೆ ಅಷ್ಟೊತ್ತಿಗಾಗಲೇ ಪರ್ಯಾಯ ನಾಯಕನ ಹುದ್ದೆಗೆ ತಮ್ಮ ಸಮುದಾಯದವರೇ ಬರಬೇಕು ಅಂತ ಲಿಂಗಾಯತ ಶಾಸಕರು ಎಬ್ಬಿಸಿದ್ದ ಕೂಗು ರಾಚಯ್ಯನವರಿಗೆ ಗೊತ್ತಿತ್ತಲ್ಲ? ಹೀಗಾಗಿ ತಾವು ನಿಜಲಿಂಗಪ್ಪನವರ ಪ್ರಪೋಸಲ್ಲು ಒಪ್ಪಿದರೆ ಪಕ್ಷದಲ್ಲಿ ಒಡಕು ಕಾಣಿಸಬಹುದು ಅಂತ ಆತಂಕಗೊಂಡ ರಾಚಯ್ಯನವರು, ''ಬೇಡ, ನನಗೆ ಸಿಎಂ ಹುದ್ದೆ ಬೇಡ'' ಎಂದುಬಿಟ್ಟರು.

ಸ್ವಾಭಿಮಾನಿ ರಾಷ್ಟ್ರನಿರ್ಮಾಣ ನಮ್ಮ ಹೊಣೆಯಾಗಲಿ

ನೆರೆಹೊರೆ
ಕೌಶಿಕ್ ಗಟ್ಟಿಗಾರ್
vveditoped@gmail.com

ಕಳೆದ 15 ವರ್ಷಗಳ ವಿಶ್ವದ ಇತಿಹಾಸವನ್ನು ಸೂಕ್ಷ್ಮವಾಗಿ ಗಮನಿಸಿದರೆ, ನಮಗೆ ಕಾಣಸಿಗುವುದು ಒಂದೇ ಮಾದರಿಯ ವ್ಯವಸ್ಥಿತ ಗಲಭೆಗಳು, ಕ್ರಾಂತಿಗಳು, ಚಳವಳಿಗಳು ಹಾಗೂ ಆಂದೋಲನಗಳು. ವೈಶ್ವಿಕವಾಗಿ 'ಅರಬ್ ಸ್ಪ್ರಿಂಗ್'ನಿಂದ ಪ್ರಾರಂಭವಾಗಿ, 'ಬ್ಲ್ಯಾಕ್ ಲೈವ್ಸ್ ಮ್ಯಾಟರ್' ಆಂದೋಲನದವರೆಗೆ, ಉಕ್ರೇನ್‌ನ ಭೂಸಂಘರ್ಷದಿಂದ ಶ್ರೀಲಂಕಾ, ಪಾಕಿಸ್ತಾನ ಹಾಗೂ ಬಾಂಗ್ಲಾದೇಶದ ಪರಿಸ್ಥಿತಿಗಳವರೆಗೆ, ಅಂತೆಯೇ ಭಾರತದಲ್ಲಿನ 'ಸಿಎಎ' ಪ್ರತಿಭಟನೆ, ಶಹೀನ್‌ಬಾಗ್ ಹೋರಾಟದಿಂದ ಮೊದಲ್ಗೊಂಡು ರೈತರ ಹೋರಾಟದವರೆಗೆ ಕಂಡುಬರುತ್ತಿರುವುದು ಒಂದೇ ವಿನ್ಯಾಸ. ಅಮೆರಿಕದ ಡೀಪ್ ಸ್ಟೇಟ್ (Deep State) ಸಂಬಂಧ, ಎಡಪಂಥೀಯ ಉದಾರವಾದಿಗಳು, ಕೋಟ್ಯಧಿಪತಿಗಳು ಹಣ ನೀಡಿ ಬೆಳೆಸಿದ ಸರಕಾರೇತರ ಸಂಸ್ಥೆಗಳು (NGO) ಮತ್ತು ಅವುಗಳ ಬೌದ್ಧಿಕ ಅಸ್ತ್ರವಾದ ಸಾಂಸ್ಕೃತಿಕ ಮಾರ್ಕ್ಸ್‌ವಾದ ಮತ್ತು ಯಹೂದಿಗಳ ಅಂತ್ಯದ ಗುರಿಯ ಪಿತೂರಿಯೇ ಈ ದಂಗೆಗಳ ಹಿಂದಿದೆ. ಸಾರ್ವಭೌಮ ರಾಷ್ಟ್ರಗಳನ್ನು ದುರ್ಬಲಗೊಳಿಸಿ, ಜಗತ್ತಿನಾದ್ಯಂತ ಅಶಾಂತಿಯ ವಾತಾವರಣ ನಿರ್ಮಿಸಿ, ಏಕರೂಪದ ಕಾರ್ಯವೈಖರಿಯ, ಪಾಶ್ಚಾತ್ಯ ಪ್ರಭುತ್ವದ, ಒಂದೇ ವಿಶ್ವ ಕ್ರಮದ (One World Order) ನಿರ್ಮಾಣದ ಗುರಿ ಈ ಎಲ್ಲಾ ದಂಗೆಗಳ ಹಿಂದಿದೆ.

ಕ್ರಾಂತಿಕಾರ್ಖಾನೆಯ ನಿರ್ಮಾಣ: ಡೀಪ್ ಸ್ಟೇಟ್‌ನ ಕಾರ್ಯವಿಧಾನ/ವೈಖರಿಯನ್ನು ಇಂದು ಜಗತ್ತಿನಲ್ಲಿ ತುಂಬಾ ಸ್ಪಷ್ಟವಾಗಿ ಗುರುತಿಸಬಹುದಾಗಿದೆ ಹಾಗೂ ಭವಿಷ್ಯದ ಘಟನೆಗಳನ್ನು ಸುಲಭವಾಗಿ ಊಹಿಸಬಹುದಾಗಿದೆ. ಮೊದಲಿಗೆ, ಜಾತಿ, ಮತ, ಜನಾಂಗ, ವರ್ಣ, ಲಿಂಗ ಮುಂತಾದ ಭೇದಗಳನ್ನೂ, ಭ್ರಷ್ಟಾಚಾರ ಅಥವಾ ಆರ್ಥಿಕ ಅಸಮಾನತೆಯಂಥ ಸ್ಥಳೀಯ ಸಮಸ್ಯೆಗಳನ್ನೂ ಗುರುತಿಸುವುದು. ನಂತರ ಈ ವಿಷಯಗಳನ್ನು ವಿಶ್ವವಿದ್ಯಾಲಯಗಳಲ್ಲಿ, ಕಾಲೇಜುಗಳಲ್ಲಿ ತೀಕ್ಷ್ಣವಾಗಿ ವರ್ಧಿಸಿ, ದೇಶದ ಮೂಲ ಸಂಸ್ಕೃತಿಯಿಂದ ಬೇರ್ಪಡಿಸಿ, ಕಮ್ಯುನಿಸ್ಟ್ ಮೂಲ ಭೂತವಾದದ ಬ್ಯಾನರ್ ಅಡಿಯಲ್ಲಿ 'ಹಕ್ಕು-ನ್ಯಾಯ-ಸ್ವಾತಂತ್ರ್ಯ'ದ ಹೆಸರಿನಲ್ಲಿ ಯುವಜನಾಂಗದ ಮನಸ್ಸಿನಲ್ಲಿ ಕ್ರಾಂತಿಯ ಬೀಜವನ್ನು ಬಿತ್ತುವುದು. ನಂತರ, ಹ್ಯಾಶ್ ಟ್ಯಾಗ್, ವಿಡಿಯೋ, ಕೃತಕ ಬುದ್ಧಿಮತ್ತೆ (ಎಐ) ಬಳಸಿ ತಯಾರಿಸಿದ ಕಂಟೆಂಟ್ ಮೂಲಕ ಮತ್ತು ಪ್ರಸಿದ್ಧ ವ್ಯಕ್ತಿಗಳ ಚಳವಳಿಗಳ ನೆರವಿನಿಂದ, ಈ ವಿಚಾರಧಾರೆಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂತಹಂತವಾಗಿ ಹರಿಬಿಡುವುದು, ಕ್ರಮೇಣ ಸದರಿ ವಿಷಯವು ತಲುಪುವ ವೇಗವನ್ನು ಹೆಚ್ಚಿಸುವುದು ಡೀಪ್ ಸ್ಟೇಟ್‌ನ ಕಾರ್ಯವೈಖರಿ. ಈ 'ಮಹತ್ಕಾರ್ಯ'ಕ್ಕೆ ಕೋಟ್ಯಂತರ ಹಣವನ್ನು ಸುರಿದು, ಮುಖ್ಯವಾಹಿನಿ ಮಾಧ್ಯಮಗಳಲ್ಲಿ ಸುದ್ದಿಯಾಗಿ ಕಾಣುವಂತೆ ನೋಡಿಕೊಳ್ಳಲಾಗುತ್ತದೆ. ಪ್ರಜೆಗಳಿಂದ ರೂಪುಗೊಂಡ ಪ್ರಜಾಸತ್ತಾತ್ಮಕ ಸರಕಾರವನ್ನು 'ಸರ್ವಾಧಿಕಾರಿ' ಎಂಬಂತೆ ಬಿಂಬಿಸಿ, 'ಆಡಳಿತ ವ್ಯವಸ್ಥೆಯ ಬದಲಾವಣೆ'ಯ ಪ್ರಕ್ರಿಯೆಗೆ ವೇಗವನ್ನು ತುಂಬಲಾಗುತ್ತದೆ.

ಡೀಪ್ ಸ್ಟೇಟ್ ತನ್ನ ಕಾರ್ಯವೈಖರಿಯ ವಿಸ್ತರಣೆ ಹಾಗೂ ಕಾರ್ಯವಿಧಾನದ ಪ್ರಯೋಗವನ್ನು, 2010-2012ರ ಸುಮಾರಿನ 'ಅರಬ್ ಸ್ಪ್ರಿಂಗ್' ಮೂಲಕ ಮುನ್ನಡೆಸಿತು. ತೈಲನಿಕ್ಷೇಪಗಳ ಕಾರಣದಿಂದಾಗಿ ಆರ್ಥಿಕವಾಗಿಯೂ, ವಿಶ್ವದ ವ್ಯಾಪಾರಮಾರ್ಗದ ಕಾರಣದಿಂದಾಗಿ ವಾಣಿಜ್ಯಿಕವಾಗಿಯೂ ಅಲ್ಲದೆ, ಮತೀಯವಾಗಿ ಮತ್ತು ಪ್ರಭುತ್ವದ ದೃಷ್ಟಿಯಿಂದ ಸದೃಢವಾಗಿದ್ದ ಅರಬ್ ದೇಶಗಳ ಮೇಲೆ ಡೀಪ್ ಸ್ಟೇಟ್‌ನ ವಕ್ರದೃಷ್ಟಿ ಬಿತ್ತು. ಲಿಬಿಯಾ, ಈಜಿಪ್ಟ್, ಯೆಮೆನ್, ಸಿರಿಯಾ, ಇರಾನ್, ಇರಾಕ್ ಹೀಗೆ ಮಧ್ಯಪ್ರಾಚ್ಯದ ದೇಶಗಳಲ್ಲಿ ಸರ್ವಾಧಿಕಾರ, ಮಾನವ ಹಕ್ಕುಗಳ ಉಲ್ಲಂಘನೆ, ಮಾಫಿಯಾ ಹಾಗೂ ಭಯೋತ್ಪಾದನೆಯ ಕಾರಣಗಳನ್ನು ತೋರಿಸಿ, ಆಂತರಿಕ ಅಶಾಂತಿ ಮತ್ತು ಪ್ರಕ್ಷುಬ್ಧತೆಯನ್ನು ಹುಟ್ಟುಹಾಕಿ, ದುರ್ಬಲ ಸರಕಾರವನ್ನು ಕಿತ್ತೊಗೆಯಲಾಯಿತು ಅಥವಾ ಅದನ್ನು ಅಮೆರಿಕದ ಕೈಗೊಂಬೆಯನ್ನಾಗಿಸಲಾಯಿತು. ಇಸ್ಲಾಮಿಕ್ ಉಗ್ರವಾದದ ಕಾರಣದಿಂದಾಗಿ ಸಹಸ್ರಾರು ಜೀವಗಳು ಬೆಲೆತೆತ್ತು, ಅರಬ್ ಪ್ರದೇಶದಲ್ಲಿ ಈ 'ಸ್ಕ್ರಿಪ್ಟ್' ಚೆನ್ನಾಗಿ ಕಾರ್ಯರೂಪಕ್ಕೆ ಬಂತು.

ಈ ಮಾದರಿಯ ಯಶಸ್ಸು ಮುಂದೆ, ರಷ್ಯಾವನ್ನು ಬಗ್ಗುಬಡಿಯಲು ಉಕ್ರೇನ್ ಅನ್ನೂ, ಚೀನಾವನ್ನು ಎದುರಿಸಲು ಹಾಂಗ್‌ಕಾಂಗ್ ಅನ್ನೂ ಛೂಬಿಡುವುದಕ್ಕೆ ಹಾಗೂ ಭಾರತವನ್ನು ಚುಚ್ಚಲು ಶ್ರೀಲಂಕಾ, ಪಾಕಿಸ್ತಾನ, ಬಾಂಗ್ಲಾ ದೇಶಗಳಿಗೆ ಕುಮ್ಮಕ್ಕು ನೀಡುವುದಕ್ಕೆ, ತರುವಾಯದಲ್ಲೀಗ ನೇಪಾಳದಲ್ಲಿ ತನ್ನ ಕುತಂತ್ರವನ್ನು ಕಾರ್ಯಗತಗೊಳಿಸುವುದಕ್ಕೆ ಡೀಪ್ ಸ್ಟೇಟ್‌ಗೆ ದಾರಿಮಾಡಿಕೊಟ್ಟಿತು. ಉದ್ದೇಶಿತ ಗುರಿ ಹಾಗೂ ಸ್ಥಳವನ್ನು ಮೊದಲಿಗೆ ಗುರುತುಮಾಡಿಕೊಳ್ಳುವುದು, ನಂತರ ಸ್ಥಳೀಯ ಚರ್ಚಾವಿಷಯ/ಸಮಸ್ಯೆಯನ್ನು ಹೊರತೆಗೆಯುವುದು, ಮಾಧ್ಯಮದಲ್ಲಿ ಆ ಕುರಿತಾಗಿ ತೀವ್ರ ಪ್ರಚಾರ ಮಾಡುವುದು, ಸಾಮಾಜಿಕ ಜಾಲತಾಣಗಳಲ್ಲಿ ಸದರಿ ಆಖ್ಯಾನವನ್ನು ಟ್ರೆಂಡಿಗ್ ಮಾಡುವುದು, ವಿಶ್ವವಿದ್ಯಾಲಯಗಳಲ್ಲಿ ಹಂತಹಂತವಾಗಿ ವಿಷಬೀಜವನ್ನು ಬಿತ್ತಿ ಯುವಜನರನ್ನು ಆಮೂಲಾಗ್ರವಾಗಿ ತೀವ್ರವಾದಿಗಳನ್ನಾಗಿಸುವುದು, ಕೊನೆಗೆ ದುರ್ಬಲ ಸರಕಾರದ ಅಸ್ಥಿರತೆಗೆ ಕೈಹಾಕುವುದು- ಇವಿಷ್ಟೂ ಡೀಪ್ ಸ್ಟೇಟ್‌ನ ಕಾರ್ಯವಿಧಾನದ (Modus Operandi) ವಿವಿಧ ಹಂತಗಳಾಗಿವೆ. ಭಾರತದಲ್ಲಿ ಈಗಿರುವಂಥ ಪ್ರಬಲ ಸರಕಾರ ಮತ್ತು ಬಿಗಿ ಆಡಳಿತ ಒಂದೊಮ್ಮೆ ಇಲ್ಲದಿದ್ದರೆ, ಈ ಕಾರ್ಯವು ಡೀಪ್ ಸ್ಟೇಟ್‌ಗೆ ನೀರು ಕುಡಿದಷ್ಟೇ ಸಲೀಸು-ಸುಗಮ...!!

ಸಾಮಾಜಿಕ ಜಾಲತಾಣವೆಂಬ ಮಾರಕಾಸ್ತ್ರ: ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ವಿವಿಧ ಕಂಪನಿಗಳು ಇತ್ತೀಚೆಗೆ ನಡೆಸಿದ ವ್ಯವಹಾರ ಸಭೆಯಲ್ಲಿ ಮೆಟಾ, ಫೇಸ್‌ಬುಕ್, ಗೂಗಲ್ ಕಂಪನಿಗಳು ಕೋಟ್ಯಂತರ ಡಾಲರ್ ಮೊತ್ತದ ಹಣವನ್ನು ಅಮೆರಿಕದಲ್ಲಿ ಹೂಡಿಕೆ ಮಾಡುವುದಾಗಿ ಮುಕ್ತವಾಗಿ ಘೋಷಿಸಿದವು. ಎಕ್ಸ್ (ಟ್ವಿಟರ್), ಫೇಸ್‌ಬುಕ್, ಇನ್‌ಸ್ಟಾಗ್ರಾಂನಂಥ ಸಾಮಾಜಿಕ ಜಾಲತಾಣಗಳ ಅಲ್ಗಾರಿದಮ್‌ಗಳು ತಟಸ್ಥವಾಗಿಲ್ಲ. 'ಡೇಟಾ ಪಾಯಿಸನಿಂಗ್', 'ಡೇಟಾ ಇಂಜೆಕ್ಷನ್', 'ಡೇಟಾ-ಆಧಾರಿತ ತರಬೇತಿ'ಗಳಿಗಾಗಿ ಸಾಮಾಜಿಕ ಜಾಲತಾಣಗಳನ್ನು ಒಂದು ಉಪಕರಣದಂತೆ (ಟೂಲ್ ಕಿಟ್‌ನಂತೆ) ಬಳಸಿಕೊಳ್ಳಲಾಗುತ್ತಿದೆ.

ನೇಪಾಳದ ವಿಷಯದಲ್ಲಿ ಹೊಸ ಪ್ರಯೋಗವೊಂದು ನಡೆಯಿತು. ಭಾರತದ ನಿಯಮದ ಪ್ರಕಾರ ಸಾಮಾಜಿಕ ಜಾಲತಾಣವಾದ 'ಮೆಟಾ' ನೋಂದಣಿಯನ್ನು ಮಾಡಿಕೊಂಡರೆ, ನೇಪಾಳದಲ್ಲಿ ಡೀಪ್ ಸ್ಟೇಟ್‌ನ ಪ್ರಭಾವದ ಕಾರಣ ನೋಂದಾಯಿಸಿಕೊಳ್ಳಲಿಲ್ಲ. ಇಲ್ಲಿ ಡೀಪ್ ಸ್ಟೇಟ್‌ನ ಜತೆಗೆ, ಜಾಗತಿಕ ಮಾರುಕಟ್ಟೆಯ ಶಕ್ತಿಶಾಲಿ ಕುಳಗಳು ತಮ್ಮ ಕೈಚಳಕವನ್ನು ತೋರಿಸಿವೆ. ಭಾರತದಲ್ಲಿ ನಡೆದ ರೈತರ ಹೋರಾಟದ ಸಮಯದಲ್ಲಿ, ಜಗತ್ತಿನಾದ್ಯಂತ ನಡೆದ 'ಟ್ವೀಟ್' ಮತ್ತು 'ಕಂಟೆಂಟ್' ಸೃಷ್ಟಿಯ ಮಾದರಿ ಇದೇ ರೀತಿಯದಾಗಿತ್ತು.

ಸಾಮಾಜಿಕ ಜಾಲತಾಣವು ಕೇವಲ ಮನೋರಂಜನೆಯ ವೇದಿಕೆ ಮಾತ್ರವಾಗದೆ, ಮನೋವೈಜ್ಞಾನಿಕ ಯುದ್ಧದ ಅಸ್ತ್ರವಾಗಿಯೂ ಮಾರ್ಪಟ್ಟಿದೆ. ಇದಕ್ಕೆಲ್ಲಾ ಚೀನಾದಂತೆ ತನ್ನದೇ ಆದ ಸಾಮಾಜಿಕ ಜಾಲತಾಣಗಳನ್ನು ಹೊಂದುವುದು ಸರಿಯಾದ ಮಾರ್ಗ. ಆತ್ಮನಿರ್ಭರತೆಯನ್ನು ಮಾತಿಗಷ್ಟೇ ಸೀಮಿತಗೊಳಿಸದೆ ಪ್ರಾಯೋಗಿಕವಾಗಿಯೂ ಪರಿಹಾರವನ್ನು ಕಂಡುಕೊಳ್ಳಬೇಕಿದೆ.

ನಮ್ಮ ಮುಂದೆ ಯುದ್ಧ ನಿಂತಿದೆ, ಹೀಗಾಗಿ ಸಾಮಯಿಕ ಭ್ರಮೆಯಿಂದ ಹೊರಬಂದು ರಾಷ್ಟ್ರಕ್ಕಾಗಿ ನಿಲ್ಲುವ ಕಾರ್ಯವನ್ನು ಮಾಡಬೇಕಿದೆ. 'ಭಾರತೀಯ ಮೂಲಸಂಸ್ಕೃತಿಯ ನಾಶವೇ ಭಾರತದ ಪರಾಜಯದ ಮೂಲ' ಎಂಬುದನ್ನು ಹಾಗೂ 'ಭಾರತೀಯರಲ್ಲಿ ಕಾಣಬರುವ ಆಚಾರ-ವಿಚಾರ, ಧರ್ಮ, ನಂಬಿಕೆ, ಸಂಸ್ಕಾರ, ವ್ಯಕ್ತಿ-ವ್ಯಕ್ತಿಗಳ ನಡುವಿನ ನಂಟು, ಮನೆಮನೆಗಳಲ್ಲಿನ ಕುಟುಂಬ ಪ್ರಬೋಧನ ಇವುಗಳನ್ನು ಒಡೆದುಬಿಟ್ಟರೆ, ಅದುವೇ ಭಾರತದ ಪತನಕ್ಕೆ ಹೇತುವಾಗುತ್ತದೆ' ಎಂಬುದನ್ನು ವಿದೇಶಿ-ಪ್ರೇರಿತ ಕುತ್ಸಿತ ಶಕ್ತಿಗಳು ಅರಿತಿವೆ. ಭಾರತೀಯರಾದ ನಾವು ಇದಕ್ಕೆ ಆಸ್ಪದ ನೀಡಬಾರದು. ನಮ್ಮ 'ಸಾಂಸ್ಕೃತಿಕ ವಿರಾಸತ್' ಅನ್ನು ಜೋಪಾನವಾಗಿ ಕಾಪಿಟ್ಟುಕೊಂಡು ವರ್ತಮಾನದಲ್ಲಿ ಆಚರಣೆಗೆ ತರುವುದರ ಜತೆಗೆ, ಮುಂದಿನ ಪೀಳಿಗೆಗೂ ಹಸ್ತಾಂತರಿಸಬೇಕಾದ ಗುರುತರ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ. ನಮ್ಮ ಆಖ್ಯಾನಗಳನ್ನು ಮರುಸ್ಥಾಪಿಸುವ, ನಮ್ಮ ಸಂಸ್ಕೃತಿ-ಪರಂಪರೆಗಳ ಕಥನಗಳನ್ನು ಮತ್ತೆ ಮತ್ತೆ ಬಿಂಬಿಸುವ, ಪ್ರಚುರಪಡಿಸುವ ಕೆಲಸಗಳು ಆಗಬೇಕಿದೆ. ಜತೆಗೆ, ನಮ್ಮ ವಿಶ್ವವಿದ್ಯಾಲಯಗಳನ್ನು ಭದ್ರಪಡಿಸಿ, ಯುವಕರಲ್ಲಿ ಧಾರ್ಮಿಕ ಪ್ರಜ್ಞೆ ಮತ್ತು ಜಾಗರೂಕತೆಯನ್ನು ಮೂಡಿಸಿ, ಬೌದ್ಧಿಕ ವಿಸ್ಮೃತಿಯಿಂದ ಅವರನ್ನು ಹೊರತರಬೇಕಾದ ಚಟುವಟಿಕೆಗಳು ನಡೆಯಬೇಕಿದೆ.

ಸದೃಢವಾದ ಕೌಟುಂಬಿಕ ವ್ಯವಸ್ಥೆಗಳ ನಿರ್ವಹಣೆಯಿಂದ ಪ್ರಬಲ ರಾಷ್ಟ್ರೀಯ ವ್ಯಕ್ತಿತ್ವದ ಮತ್ತು ಸಮೃದ್ಧ ರಾಷ್ಟ್ರದ ನಿರ್ಮಾಣ ಸಾಧ್ಯ ಎಂಬುದನ್ನೂ, ಸ್ವರಾಜ್ಯ ಮತ್ತು ಸ್ವಾವಲಂಬಿತನದಿಂದಲೇ ಭಾರತದ ಆತ್ಮಗೌರವದ ರಕ್ಷಣೆ ಸಾಧ್ಯ ಎಂಬುದನ್ನು ಮರೆಯದಿರೋಣ.

(ಲೇಖಕರು ಹವ್ಯಾಸಿ ಬರಹಗಾರರು)

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಕಣ್ಣು ತೆರೆಸಿತು

ವೀಕೆಂಡ್ ವಿತ್ ಮೋಹನ್' ಅಂಕಣದಲ್ಲಿ (ಸೆ.13) ಮೋಹನ್ ವಿಶ್ವ ಅವರು, ಪೂಜನೀಯ ಕೇಶವ್ ಬಲಿರಾಮ್ ಹೆಡ್ಗೆವಾರ್ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಸಂದರ್ಭಗಳನ್ನು ಉದಾಹರಣೆ ಸಮೇತ ವಿವರಿಸಿದ್ದಾರೆ. ಬ್ರಿಟಿಷ್ ಸರಕಾರವು 1933ರಲ್ಲಿ, 'ಸರಕಾರಿ ಶಾಲಾ ಅಧ್ಯಾಪಕರು ಆರೆಸ್ಸೆಸ್‌ನ ಕೆಲಸದಲ್ಲಿ ತೊಡಗಬಾರದು' ಎಂಬ ಫರ್ಮಾನನ್ನು ಹೊರಡಿಸಿದ್ದು, ಮೆಕಾಲೆ ತತ್ವಗಳನ್ನು ಭಾರತೀಯರ ಮೇಲೆ ಹೇರುವ ನಿಟ್ಟಿನಲ್ಲಿನ ಪೂರ್ವಸಿದ್ಧತಾ ಸ್ವರೂಪದ ಸಂಚಾಗಿತ್ತು. ಬ್ರಿಟಿಷ್ ನೀತಿಯನ್ನು ವಿರೋಧಿಸುವ ಭಾವನೆಗಳನ್ನು ಅಧ್ಯಾಪಕ ವೃತ್ತಿಯವರು ಯುವಜನರಲ್ಲಿ ಎಲ್ಲಿ ಬೋಧಿಸಿಬಿಡುವರೋ ಎಂಬ ಆತಂಕ ಮತ್ತು ಸಂಕುಚಿತ ಮನೋಭಾವ ಎರಡೂ ಇದರಲ್ಲಿ ಸೇರಿಕೊಂಡಿದ್ದವು ಎನ್ನಲಡ್ಡಿಯಿಲ್ಲ.

'ಜೈಲಿಗೆ ಹೋಗುವುದೊಂದೇ ಸ್ವಾತಂತ್ರ್ಯ ಹೋರಾಟದ ಭಾಗವಲ್ಲ, ದೇಶಕ್ಕಾಗಿ ಸೇವೆ ಸಲ್ಲಿಸಲು ಜೈಲಿನಿಂದ ಹೊರಗಡೆ ಹೆಚ್ಚಿನ ಕೆಲಸ ಮಾಡುವ ಅಗತ್ಯವಿದೆ' ಎಂಬುದನ್ನು ಹೆಡ್ಗೆವಾರ್ ಅವರು ತಮ್ಮನ್ನು ಸೆರೆಮನೆಯಲ್ಲಿ ಸಂದರ್ಶಿಸಿದವರಿಗೆ ಹೇಳುತ್ತಿದ್ದರು ಎಂಬ ಮಾಹಿತಿಯನ್ನು ಓದಿ ಅವರ ಕುರಿತಾದ ಹೆಮ್ಮೆ ಮತ್ತು ಗೌರವಗಳು ಮತ್ತಷ್ಟು ಹೆಚ್ಚಿದವು. ಆರೆಸ್ಸೆಸ್‌ನವರು ದೇಶದ ಸ್ವಾತಂತ್ರ್ಯಕ್ಕಾಗಿ ಏನು ಮಾಡಿದ್ದಾರೆ ಎಂದು ಪದೇಪದೆ ಕೇಳುವ ಎಡಚರ ಪಟಾಲಂಗಳಿಗೆ ಈ ಅಂಕಣಬರಹ ಕಣ್ತೆರೆಸುವಂತಿದೆ.

- ಪರಮೇಶ್ವರ ಜಿ.ಎಂ., ಸಂಡೂರು

ಪ್ರಶ್ನಾತೀತ ನ್ಯಾಯ

ಟ್ರಂಪಣ್ಣನ ಕುರಿತು ಶಿಶಿರ ಹೆಗಡೆಯವರು ಬರೆದ ಲೇಖನವನ್ನು (ಸೆ.12) ಓದಿದೆ. ಜಗತ್ತಿನ 'ದೊಡ್ಡಣ್ಣ' (?!) ಅಂತ ಕರೆಸಿಕೊಳ್ಳುವ ಈ ಅಮೆರಿಕವೆಂಬ 50 ರಾಜ್ಯಗಳ ಒಕ್ಕೂಟದ ಇಂದಿನ ಈ ಮುಖ್ಯಸ್ಥನ ಗುಣ-ಸ್ವಭಾವಗಳ ಬಗ್ಗೆ ತಿಳಿಯಿತು, ಆದರೆ ಇದಕ್ಕೆ ಹೇಗೆ ಪ್ರತಿಕ್ರಿಯೆ ನೀಡಬೇಕೆಂಬುದು ಗೊತ್ತಾಗುತ್ತಿಲ್ಲ.

ಪ್ರಪಂಚದ ಸರಿಸುಮಾರು 195 ದೇಶಗಳು ಒಂದಲ್ಲಾ ಒಂದು ರೀತಿಯಲ್ಲಿ ಮತ್ತೊಂದು ದೇಶವನ್ನು ಅವಲಂಬಿಸಿ ಬದುಕುತ್ತಿವೆ. ಇದು ವಾಸ್ತವ ಮತ್ತು ಸ್ವಾಭಾವಿಕ. ಅವಲಂಬನೆಯ ಪ್ರಮಾಣ ಸ್ವಲ್ಪ ಹೆಚ್ಚು ಅಥವಾ ಕಡಿಮೆ ಆಗಿರಬಹುದು; ಹಾಗೆಂದ ಮಾತ್ರಕ್ಕೆ ಒಂದು ದೇಶವು ಇನ್ನೊಂದರ ಆಳಾಗಿದೆ ಎಂದೇನೂ ಖಂಡಿತ ಅರ್ಥವಲ್ಲ. ನೈಸರ್ಗಿಕವಾಗಿ ಒಂದೊಂದು ಭೂಭಾಗ ಕೆಲವೊಮ್ಮೆ ಸಮೃದ್ಧ ಎನಿಸಿದರೂ, ಇನ್ನೊಂದು ಭಾಗ ಇನ್ನಾವುದೋ ವಿಚಾರದಲ್ಲಿ ಅಷ್ಟೇ ಹೆಸರುವಾಸಿ ಆಗಿರುತ್ತದೆ. ಇದು ಪೃಥ್ವಿಯು ನೀಡಿದ ಪ್ರಶ್ನಾತೀತ ನ್ಯಾಯ ಎನ್ನಬಹುದು.

ಇನ್ನು, 'ಭರತಖಂಡ' ಎಂದೇ ಹೆಮ್ಮೆಯಿಂದ ಹೇಳಿಕೊಳ್ಳಬಹುದಾದ ನಮ್ಮ ದೇಶದ ಕುರಿತು ಹೇಳಲು ಸಾಕಷ್ಟಿದೆ. ದೇವರು-ದಿಂಡರು, ಗುಡಿ-ಗುಂಡಾರ, ಸತ್ಯ-ಧರ್ಮ, ನ್ಯಾಯ-ನೀತಿ, ಆಚಾರ-ವಿಚಾರ, ಸಂಸ್ಕಾರ-ಸಂಸ್ಕೃತಿ, ಋಷಿಮುನಿಗಳು, ಗುರುಕುಲ ಶಿಕ್ಷಣ ಪದ್ಧತಿ ಸೇರಿದಂತೆ ಅನೇಕ ಅನುಪಮ ಅಂಶಗಳು/ಪರಿಕಲ್ಪನೆಗಳನ್ನು ತನ್ನ ಗರ್ಭದಲ್ಲಿ ಇಟ್ಟುಕೊಂಡು ಬೆಳೆಸಿದ ನೆಲವಿದು. ಯಾವ್ಯಾವುದೋ ಕಾರಣಕ್ಕೆ ಮುಘಲರು ಮತ್ತು ಆಂಗ್ಲರ ದಾಸ್ಯದಲ್ಲಿ ತನ್ನ ಗಣನೀಯ ಆಯಸ್ಸನ್ನು ಸವೆಸಿದರೂ, ಒಡಲಲ್ಲಿ ಇನ್ನೂ ಮೂಲಸಂಸ್ಕೃತಿಯನ್ನು ಬೆಚ್ಚಗೆ ಕಾಪಿಟ್ಟುಕೊಂಡಿರುವ ವಿಶೇಷತೆ ನಮ್ಮ ದೇಶದ್ದು. ಆದರೆ. ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದು ದಶಕಗಳೇ ಆಗಿದ್ದರೂ, ದಾಸ್ಯದ ಸ್ವಭಾವ ನಮ್ಮಿಂದ ಹೋಗಿರಲಿಲ್ಲ; ಇತ್ತೀಚಿನ 10 ವರ್ಷಗಳಲ್ಲಿ 'ಆತ್ಮನಿರ್ಭರ' ಎಂಬ ಮಂತ್ರವನ್ನು ಪಠಿಸಿ, ನಾವೂ ಸಬಲರು-ಸಮರ್ಥರು ಎಂಬುದನ್ನು ಜಗತ್ತಿಗೆ ಮನವರಿಕೆ ಮಾಡಿಕೊಡುತ್ತಿದ್ದೇವೆ.

ಈ ನಮ್ಮ ಸ್ವಭಾವ, ತಾಕತ್ತು ಮತ್ತು ಬೆಳವಣಿಗೆಯನ್ನು ಜೀರ್ಣಿಸಿಕೊಳ್ಳಲು ಅಮೆರಿಕಕ್ಕೆ ಆಗಿಲ್ಲ ಎನ್ನಬಹುದು. ಒಂದು ಕಾಲಕ್ಕೆ ತನ್ನ ಮುಂದೆ ಮಂಡಿಯೂರುತ್ತಿದ್ದ ಭಾರತವು ಇಂದು ತನಗೆ ಡೊಗ್ಗುಸಲಾಮು ಹಾಕುತ್ತಿಲ್ಲ ಎಂಬುದು ಅಮೆರಿಕಕ್ಕೆ ಅರಿವಾಗಿದೆ, ಅಂತೆಯೇ ಊಹಿಸಲೂ ಆಗದ ಅವಮಾನಕ್ಕೂ ಅದು ಒಳಗಾಗಿದೆ. ಕಾರಣ, ಕ್ಷಣಕ್ಕೊಂದು ನಿರ್ಧಾರ ತಳೆಯುತ್ತಾ, ಗಳಿಗೆಗೊಂದು ವಿಲಕ್ಷಣ ಹೇಳಿಕೆ ನೀಡುತ್ತಾ, ಯಾರ ನಿಲುಕಿಗೂ ಸಿಗದ ಎಡವಟ್ಟು ಆಸಾಮಿ ಎನಿಸಿಕೊಂಡಿರುವ ಡೊನಾಲ್ಡ್ ಟ್ರಂಪ್ ಸ್ವತಃ ತಮ್ಮ ಹಾಗೂ ತಮ್ಮ ದೇಶದ ಮರ್ಯಾದೆಯನ್ನು ಮೂರು ಕಾಸಿಗೆ ಹರಾಜು ಹಾಕಿಕೊಂಡಿರುವ ಸಂದರ್ಭವಿದು. ಈ 'ಹಿರಿಯಣ್ಣ'ನ ಸೊಕ್ಕು ಮುರಿಯಲು ಭಾರತಕ್ಕೆ ಒಬ್ಬ 'ನಿಜನಾಯಕ' ಬೇಕಾಗಿತ್ತು, ಅದು ನರೇಂದ್ರ ಮೋದಿಯವರ ರೂಪದಲ್ಲಿ ನಮಗೆ ದಕ್ಕಿತು...

ಅಂಕಣಕಾರರು ಅಭಿಪ್ರಾಯಪಟ್ಟಂತೆ, ಚೀನಾ, ಪಾಕಿಸ್ತಾನದಂಥ ದೇಶಗಳು ನಂಬಿಕೆಗೆ ಅರ್ಹವಲ್ಲದಂಥವು, ಅಂತೆಯೇ 'ಅಮೆರಿಕ ನಮ್ಮ ಗೆಳೆಯ' ಎಂಬ ಗ್ರಹಿಕೆ ಕೂಡ ಅಷ್ಟೇ ಮಿಥ್ಯ. ಎಲ್ಲಾ ಅನುಕೂಲಸಿಂಧು ಮತ್ತು ಕ್ಷಣಿಕ ಭಾವವಷ್ಟೇ. ಭಾರತ ಮಾತ್ರ ಇಂಥ ಯಾವ ಆಷಾಢಭೂತಿತನಕ್ಕೂ ಮರುಳಾಗದೆ, ತನ್ನ ಸ್ವಾವಲಂಬನೆಯ ಹಾದಿಯನ್ನು ಪಟ್ಟಾಗಿ ಹಿಡಿದು ಮುಂದೆ ನಡೆದರೆ ಸಾಕು. ಉತ್ತಮ ವಿಶ್ಲೇಷಣೆಯ ಲೇಖನವನ್ನು ನೀಡಿದ ಅಂಕಣಕಾರರಿಗೂ, ಪ್ರಕಟಿಸಿದ ಪತ್ರಿಕೆಗೂ ಧನ್ಯವಾದಗಳು.

- ಲಕ್ಷ್ಮೀಕಾಂತ ಪಾಟೀಲ, ಮಾಂಟ್ರಿಯಲ್ (ಕೆನಡಾ)

ಟ್ರಂಪಾದವ್ರೋ ಎಲ್ಲ...

ಈಗ ಎಲ್ಲ ಕಡೆ ಡೊನಾಲ್ಡ್ ಟ್ರಂಪ್ ಅವರ 'ಹವಾ' ಮತ್ತು ಅವರದೇ ನೆನಕೆ... ಆದರೆ ಅದು ಗುಣಾತ್ಮಕತೆಯ ಕಾರಣಕ್ಕಲ್ಲ! ಹೀಗಾಗಿ ಅಮೆರಿಕದ ಬಗ್ಗೆ ಗೊತ್ತಿಲ್ಲದವರು ಕೂಡ ತಮಗೆ ತಿಳಿದಂತೆ ಮಾತನಾಡುತ್ತಿದ್ದಾರೆ. 'ಟ್ರಂಪ್' ಹೆಸರು ಕೇಳಿದರೆ ಎಲ್ಲರ ಮುಖವೂ 'ಕೆಂಪ್' ಆಗುತ್ತದೆ, ಲಂಕೇಶರು ಬರೆದ 'ಕೆಂಪಾದವ್ರೋ ಎಲ್ಲ ಕೆಂಪಾದವ್ರೋ' (ಟ್ರಂಪಾದವ್ರೋ!) ಎಂಬ ಹಾಡು ನೆನಪಾಗುತ್ತದೆ. ಆದರೆ ಶಿಶಿರ್ ಹೆಗಡೆಯವರ ಅಂಕಣವು (ಸೆ.12) ಟ್ರಂಪ್ ವ್ಯಕ್ತಿತ್ವದ ಬಗ್ಗೆ ಹಾಗೂ ಈಗ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆ ಅಂಕಿ-ಅಂಶಗಳ ಸಮೇತ ಅತ್ಯುತ್ತಮ ಮಾಹಿತಿಯನ್ನೇ ಹಂಚಿಕೊಂಡಿದೆ. ಓದಿ ಖುಷಿಯಾಯಿತು...

- ರಾಘವೇಂದ್ರ ಜೋಯಿಸ್, ಮೈಸೂರು

ಇದ್ದಾಗಲೇ ಗೌರವಿಸಿ

ಚಲನಚಿತ್ರ ತಾರೆಯರಾದ ಬಿ.ಸರೋಜಾದೇವಿ ಹಾಗೂ ಡಾ.ವಿಷ್ಣುವರ್ಧನ್ ಅವರ ಸಾಧನೆಯನ್ನು ಪರಿಗಣಿಸಿದ ರಾಜ್ಯ ಸರಕಾರ, ಅವರಿಗೆ ಮರಣೋತ್ತರವಾಗಿ 'ಕರ್ನಾಟಕ ರತ್ನ' ಪ್ರಶಸ್ತಿಯನ್ನು ಘೋಷಿಸಿದೆ, ಜತೆಗೆ ರಾಷ್ಟ್ರಕವಿ ಕುವೆಂಪು ಅವರಿಗೆ ಮರಣೋತ್ತರವಾಗಿ 'ಭಾರತ ರತ್ನ' ಪ್ರಶಸ್ತಿ ಘೋಷಿಸುವಂತೆ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿದೆ ಎಂದು ತಿಳಿದುಬಂದಿದೆ. ತಡವಾಗಿಯಾದರೂ ಇಂಥ ಬೆಳವಣಿಗೆಗಳಾಗುತ್ತಿರುವುದು ಸಂತಸದ ಸಂಗತಿ.

ಆದರೆ, ಇಂಥ ಸಾಧಕರು ಬದುಕಿರುವಾಗಲೇ ಅವರ ಸಾಧನೆಯನ್ನು ಗುರುತಿಸಿ ಹೀಗೆ ಪುರಸ್ಕರಿಸಬೇಕಲ್ಲವೇ? ಗತಿಸಿದ ಮೇಲೆ ನೀಡಿದರೇನು ಬಂತು?! ಅಪಘಾತದಿಂದಾಗಿ ಅಕಾಲಿಕವಾಗಿ ಅಸುನೀಗಿದರೆ 'ಮರಣೋತ್ತರ' ಮಾನ್ಯತೆಯು ಅನಿವಾರ್ಯವಾಗುತ್ತದೆ. ಸಂಬಂಧಪಟ್ಟವರು ಈ ನಿಟ್ಟಿನಲ್ಲಿ ಇನ್ನಾದರೂ ಆತ್ಮಾವಲೋಕನ ಮಾಡಿಕೊಳ್ಳಲಿ.

- ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- ವೆಂಕಣ್ಣ ಆಚಾರ್ಯ, ಮೈಸೂರು
ಭಟ್ರೇ, ಅಡಿಗಾಸ್ ಜತೆ ಹೋದರೆ ಅದು ತೀರ್ಥಯಾತ್ರೆ, ಪಲಿಮಾರು ಸ್ವಾಮಿಗಳೊಂದಿಗೆ ಹೋದರೆ ಪಾವನಯಾತ್ರೆ, ಕರಂದ್ಲಾಜೆ ಜತೆ ಬೆಟ್ಟ ಹತ್ತಿದರೆ ಅದು?
– **ನಿಜಕ್ಕೂ ಶೋಭಾಯಾತ್ರೆ!**

- ಗುರುಮಧ್ವರಾಯ, ಉಡುಪಿ
ಭಟ್ರೇ, ಸಿನಿಮಾದಲ್ಲಿ ಗೆಸ್ಟ್ ನಟನಾಗಿ ನಟಿಸುವುದಕ್ಕೂ, ಕಾಲೇಜಿನಲ್ಲಿ ಗೆಸ್ಟ್ ಉಪನ್ಯಾಸಕನಾಗಿ ಪಾಠ ಮಾಡೋದಕ್ಕೂ ಏನು ಸಾಮ್ಯ?
– **ಎರಡಲ್ಲೂ ಸಂಭಾವನೆ ಅಷ್ಟಕ್ಕಷ್ಟೇ!**

- ನೇರಲಗುಡ್ಡ ಶಿವಕುಮಾರ್, ಶಿರಾ
ಭಟ್ರೇ, ರಾಜಕಾರಣಿಗಳು ಮುಲ್ಲಾಗಳ ಟೋಪಿ ಧರಿಸಲು ಕಾರಣವೇನು?
– **ಮತದಾರರಿಗೆ ಮಕ್ಮಲ್ ಟೋಪಿ ಹಾಕಬಹುದಲ್ವ?!**

- ಬೆಂ.ಮು.ಮಾರುತಿ, ಬೆಂಗಳೂರು
ಭಟ್ರೇ, ಕ್ಯಾಲೆಂಡರ್‌ಗಳಲ್ಲಿ ಭಾನುವಾರ, ಹಬ್ಬದ ದಿನಾಂಕಗಳನ್ನು ಕೆಂಪು ಬಣ್ಣದಲ್ಲಿ ಹೈಲೈಟ್ ಮಾಡಿರುತ್ತಾರಲ್ಲಾ!
– **ಎಂದಿನಂತೆ ಆಫೀಸಿಗೆ ಹೋಗಿಬಿಟ್ಟಾರು ಎಂಬುದನ್ನು ಎಚ್ಚರಿಸಲು!**

- ಜ್ಯೋತಿ, ಡಾಲರ್ಸ್ ಕಾಲೋನಿ
ಭಟ್ರೇ, ಜಾತಿಗಣತಿ ಆರಂಭದ ದಿನವೇ ಅಧಿಕಾರಿಗಳಿಂದ ನನ್ನ ಮನೆ ಬಾಗಿಲಲ್ಲಿ ನನಗೆ ಎದುರಾಗುವ ಪ್ರಶ್ನೆ?
– **'ಜ್ಯೋತಿ ಯಾವುದಮ್ಮ ನಿನ್ನ ಜಾತಿ..?'**

- ನರಸಿಂಹ, ಸಾಗರಕಟ್ಟೆ ಮಠ
ಭಟ್ರೇ, ನಿಮಗೆ ಎಷ್ಟು ತರಹದ ಸಿಂಹಗಳ ಪರಿಚಯವಿದೆ?
– **ನೀನು ಸೇರಿ ಐದು. ಸಾಹಸಸಿಂಹ, ಕೇಸರಿದಸಿಂಹ, ಪ್ರತಾಪಸಿಂಹ ಹಾಗೂ ಸುಬ್ಬನರಸಿಂಹ!**

- ರವೀಂದ್ರ ಶೆಟ್ಟಿ, ಕುಂದಾಪುರ
ಭಟ್ರೇ, ಯತ್ನಾಳ್ ಮುಖ್ಯಮಂತ್ರಿ ಆಗ್ತಾರಾ?
– **ಅದು ಅವರು ಬಾಯಿ ಮುಚ್ಚಿಕೊಂಡಿರುತ್ತಾರಾ, ಇಲ್ಲವಾ ಎಂಬುದನ್ನು ಆಧರಿಸಿದೆ!**

- ನರೇಶ ಪಿ. ನಾಗಶೆಟ್ಟಿ, ತುಮಕೂರು
ಭಟ್ರೇ, ಒಂದು ದೇಶಕ್ಕೆ ಹೋದಾಗ ಅಲ್ಲಿನ ಬಗ್ಗೆ ಬರೆಯಬೇಕಲ್ಲ ಎಂದು ನಿಮಗೆ ಅನಿಸುವುದುಂಟಾ?
– **ಎಷ್ಟೆಲ್ಲ ಬರೆಯಬಹುದಲ್ಲ ಎಂದು ಅನಿಸುತ್ತದೆ!**

- ವೀರೇಶ ಅಂಬಲಿ, ಧಾರವಾಡ
ಭಟ್ರೇ, ದೇವರಲ್ಲಿ ಪಂಗಡಗಳಿವೆಯಾ?
– **ಹಾಗಿದ್ದಿದ್ದರೆ ಗಣಪತಿಗೆ ಪೂಜೆ ಸಲ್ಲಿಸಿದರೆ, ಕೃಷ್ಣ ನನಗೇಕೆ ಸಲ್ಲಿಸಿಲ್ಲ ಅಂತ ಮುನಿಸಿಕೊಳ್ತಾ ಇದ್ದ!**

ದಯಾಮಯಿ ದೇವರೇ, ಈ ದೇಶಕ್ಕೆ ದಯಮಾಡಿ ಆನೆ ಕೊಡು...

ಲಾವೋಸ್ ಇಂದಿಗೂ ತನ್ನ ಸಂಪ್ರದಾಯ ಉಳಿಸಿಕೊಂಡ ನಾಡು. ಆ ಕಾರಣದಿಂದ ಆನೆಗಳು ಹೆಚ್ಚು ಮಹತ್ವ ಪಡೆಯುತ್ತವೆ. ಭಾರತದಲ್ಲಿ ಗೋವಿಗೆ ಇರುವ ಸ್ಥಾನ ಅಲ್ಲಿ ಆನೆಗಿದೆ. ಆ ದೇಶದಲ್ಲಿ 2-3 ರಾಷ್ಟ್ರೀಯ ಹೆದ್ದಾರಿಯನ್ನು ಬಿಟ್ಟರೆ, ರಸ್ತೆಯ ಸುವ್ಯವಸ್ಥೆಯೂ ಇಲ್ಲ. ಬಹುತೇಕ ರಸ್ತೆಗಳು ಕಿರಿದಾದದ್ದು, ಇಕ್ಕಟ್ಟಾದದ್ದು. ವಿಶಾಲವಾದ ರಸ್ತೆಗಳನ್ನು ಮಾಡುವ ಭೂಪ್ರದೇಶವೂ ಅದಲ್ಲ. ಏಕೆಂದರೆ ಬಹುತೇಕ ಭೂಮಿ ಕಾಡು, ಗುಡ್ಡಗಳಿಂದಲೇ ತುಂಬಿಕೊಂಡಿದೆ. ಮರವನ್ನೋ, ಗುಡ್ಡವನ್ನೋ ಕಡಿದು ರಸ್ತೆ ನಿರ್ಮಿಸುವುದು ತುಂಬಾ ಕಷ್ಟದ ಕೆಲಸವಂತೂ ಹೌದು. ಆದ್ದರಿಂದ ಅನಿವಾರ್ಯಕ್ಕೆ ಎಷ್ಟು ಬೇಕೋ ಅಷ್ಟು ರಸ್ತೆಯನ್ನು ಆ ದೇಶ ನಿರ್ಮಿಸಿಕೊಂಡಿದೆ.

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ನೀವು ದೇವರ ಸಮ್ಮುಖದಲ್ಲಿ ನಿಂತು ಮತ್ತೇನನ್ನೂ ಬೇಡಿಕೊಳ್ಳಬೇಡಿ, ದೇವರೇ ನನಗೆ 'ಆನೆ' ಕೊಡು ಎಂದು ಕೇಳಿಕೊಳ್ಳಿ''. ಇದು ಇತ್ತೀಚಿನ ದಿನಗಳಲ್ಲಿ ಕೇಳಿಬರುತ್ತಿರುವ ಮಾತು. ಇಲ್ಲಿ ಆನೆ ಎಂದರೆ ಗಜ ಅಲ್ಲ, 'ಆರೋಗ್ಯ' ಮತ್ತು 'ನೆಮ್ಮದಿ'. ಆರೋಗ್ಯದಿಂದ 'ಆ', ನೆಮ್ಮದಿಯಿಂದ 'ನೆ' ಆರಿಸಿಕೊಂಡು ಜೋಡಿಸಿ ರಚಿಸಿದ 'ಆನೆ'. ಮನುಷ್ಯನಿಗಾದರೆ ಇದು ಸರಿ, ಆರೋಗ್ಯ ಮತ್ತು ನೆಮ್ಮದಿಗಿಂತ ಹೆಚ್ಚೇನು ಬೇಕು? ಮನುಷ್ಯನಾಗಿ ದೇವರಲ್ಲಿ ಆನೆ ಬೇಡುವುದು ಒಂದು ಕಡೆಯಾದರೆ, ದೇಶವಾಗಿ ಆನೆ ಬೇಡುವುದು ಮತ್ತೊಂದು ಕಡೆ. ಅದರಲ್ಲೂ ಕಾಂಬೋಡಿಯಾ, ಲಾವೋಸ್, ವಿಯೆಟ್ನಾಂ, ಥಾಯ್ಲೆಂಡ್‌ನಂಥ ದೇಶಗಳು ನಿಜವಾಗಿಯೂ ದೇವರಲ್ಲಿ 'ಆನೆ ಕೊಡು' ಎಂದೂ, ಮನುಷ್ಯನಲ್ಲಿ 'ಆನೆಯನ್ನು ಉಳಿಸಿಕೊಡು' ಎಂದೂ ಬೇಡಿಕೊಳ್ಳುವಂತಾಗಿದೆ.

ವರದಿಯ ಪ್ರಕಾರ, ಒಂದು ಕಾಲದಲ್ಲಿ ಸಾವಿರಕ್ಕೂ ಹೆಚ್ಚು ಆನೆಯನ್ನು ಹೊಂದಿದ್ದ ವಿಯೆಟ್ನಾಂನಲ್ಲಿ ಇಂದು ಕೇವಲ ಒಂದು ನೂರು ಆನೆ ಮಾತ್ರ ಉಳಿದುಕೊಂಡಿವೆ. ಥಾಯ್ಲೆಂಡ್‌ನಲ್ಲಿ ಆನೆಗಳ ಸಂಖ್ಯೆ ಇಳಿದಿದೆ, ಕಾಂಬೋಡಿಯಾ, ಮ್ಯಾನ್ಮಾರ್‌ನಂಥ ದಟ್ಟ ಅಡವಿ ಇರುವ ದೇಶಗಳಲ್ಲೂ ಆನೆಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಲಾವೋಸ್ ದೇಶದ ಕಥೆಯಂತೂ ಇನ್ನೂ ಚಿಂತಾಜನಕವಾಗಿದೆ.

ಒಂದು ಕಾಲದಲ್ಲಿ ಲಾವೋಸ್ ದೇಶವನ್ನು 'Land of Million Elephants' (ಹತ್ತು ಲಕ್ಷ ಆನೆಗಳ ಭೂಮಿ) ಎಂದು ಕರೆಯುತ್ತಿದ್ದರು. ಆ ಕಾಲದಲ್ಲಿ ಲಾವೋಸ್‌ನಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಆನೆಗಳಿದ್ದವಂತೆ. ಈಗ ಆ ಸಂಖ್ಯೆ ಒಂದು ಸಾವಿರಕ್ಕಿಂತಲೂ ಕೆಳಗೆ ಇಳಿದಿದೆ. ಹಾಗೆ ನೋಡಲು ಹೋದರೆ ಈಗ ಭೂಮಿಯ ಮೇಲೆ ಯಾವ ದೇಶದಲ್ಲಿಯೂ ಹತ್ತು ಲಕ್ಷ ಆನೆಗಳಿಲ್ಲ, ಇಂದು ಅತಿ ಹೆಚ್ಚು ಆನೆಗಳನ್ನು ಹೊಂದಿದ ದೇಶವೆಂದರೆ ಆಫ್ರಿಕಾ ಖಂಡದ ಬೋಟ್ಸ್‌ವಾನಾ. ನಾಲ್ಕು ವರ್ಷದ ಹಿಂದಿನ ಗಣತಿಯ ಪ್ರಕಾರ, ಆ ದೇಶದಲ್ಲಿ ಒಂದು ಲಕ್ಷ ಮೂವತ್ತು ಸಾವಿರ ಆನೆಗಳಿವೆಯಂತೆ. ನಂತರದ ಸ್ಥಾನದಲ್ಲಿ ಒಂದು ಲಕ್ಷ ಆನೆಗಳನ್ನು ಹೊಂದಿರುವ ಜಿಂಬಾಬ್ವೆ ನಿಲ್ಲುತ್ತದೆ. ನಾಲ್ಕು ವರ್ಷದ ಹಿಂದಿನ ಗಣತಿಯಂತೆ, ಹದಿನೇಳು ಸಾವಿರ ಆನೆಗಳಿರುವ ಭಾರತ ಎಂಟನೆಯ ಸ್ಥಾನದಲ್ಲಿದೆ. ಅದರ ನಂತರ ಭಾರತದಲ್ಲಿ ಗಣತಿ ನಡೆದಂತಿಲ್ಲ. ಇಲ್ಲಿ ಜನಗಣತಿಗೇ ಗತಿಯಿಲ್ಲ, ಇನ್ನು ಗಜಗಣತಿ ಯಾರಿಗೆ ಬೇಕು?

ಇರಲಿ, ಇತ್ತೀಚೆಗೆ ಲಾವೋಸ್ ದೇಶಕ್ಕೆ ಹೋಗುವಾಗಲೇ ಅಲ್ಲಿರುವ ಆನೆಗಳನ್ನು ನೋಡಬೇಕು, ಅವುಗಳ ಬಗ್ಗೆ ಇನ್ನಷ್ಟು ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳಬೇಕೆಂಬ ಕುತೂಹಲವಿತ್ತು. ಆಗಲೇ ಹೇಳಿದಂತೆ, ಹತ್ತು ಲಕ್ಷ ಆನೆಗಳ ನೆಲ ಇಂದು ಆನೆಗಳಿಲ್ಲದೆ ಬರಡಾಗುತ್ತಿದೆ ಅಂದರೆ ನಂಬಲು ಕಷ್ಟವಾಗಿತ್ತು. ಕಾರಣ, ಲಾವೋಸ್‌ನ ಅರ್ಧದಷ್ಟು ಭೂಭಾಗ ಅರಣ್ಯ ಪ್ರದೇಶ. ದಟ್ಟವಾದ ಅಡವಿಗಳಿದ್ದಲ್ಲಿ ಆನೆಗಳು ಇರಲೇಬೇಕು. ಅದೂ ಅಲ್ಲದೆ ಲಾವೋಸ್‌ನ ಅರಣ್ಯದಲ್ಲಿ ಆನೆಗಳನ್ನು ಬೇಟೆಯಾಡಿ ಕೊಲ್ಲುವಂಥ, ತಿನ್ನುವಂಥ ಯಾವುದೇ ಪ್ರಾಣಿಗಳೂ ಸದ್ಯಕ್ಕಂತೂ ಇಲ್ಲ. ಒಂದು ವರದಿಯ ಪ್ರಕಾರ ಲಾವೋಸ್‌ನ ಪ್ರಾಣಿ ಸಂಗ್ರಹಾಲಯದಲ್ಲಿ ಬಿಟ್ಟರೆ, ಅಡವಿಯಲ್ಲಿ ಒಂದೇ ಒಂದು ಹುಲಿಯೂ ಇಲ್ಲ. 2013ರಲ್ಲಿಯೇ ಲಾವೋಸ್‌ನ ಅಡವಿಯಲ್ಲಿ ಕೊನೆಯ ಹುಲಿ ಕೊನೆಯುಸಿರೆಳೆಯಿತು ಎಂಬ ವರದಿಯಿದೆ. ಹಾಗೆಯೇ ಸಿಂಹವನ್ನು ಕೂಡ 2019ರಲ್ಲಿ ದಕ್ಷಿಣ ಆಫ್ರಿಕಾದಿಂದ ತರಿಸಿಕೊಂಡಿದ್ದಾರೆ. ಸಿಂಹಗಳ ಸಂತತಿಯನ್ನು ಪುನಃ ಬೆಳೆಸಬೇಕು, ಲಾವೋಸ್‌ನ ಅಡವಿಯಲ್ಲಿ ಸಿಂಹಗಳನ್ನು ಮರುಸ್ಥಾಪಿಸಬೇಕು ಎಂಬ ನಿಟ್ಟಿನಲ್ಲಿ ಐದು ಹೆಣ್ಣು, ಐದು ಗಂಡು ಸಿಂಹವನ್ನು ತಂದು ಸಂತಾನಾಭಿವೃದ್ಧಿಯ ಪ್ರಯತ್ನ ನಡೆಯುತ್ತಿದೆ. ಕಳೆದ ಐದು ವರ್ಷದಲ್ಲಿ ಅದು ಎಷ್ಟರಮಟ್ಟಿಗೆ ಫಲಕಾರಿಯಾಗಿದೆಯೋ ಗೊತ್ತಿಲ್ಲ. ಒಂದು ವೇಳೆ ಅವು ಇದ್ದಿದ್ದರೂ ಅವು ಆನೆಗಳ ತಂಟೆಗೆ ಹೋಗುವುದು ಕಡಿಮೆ. ಹಾಗಾದರೆ ಆನೆಗಳ ಸಂತತಿ ಕ್ಷೀಣಿಸಲು ಕಾರಣವಾದರೂ ಏನು ಎಂದು ಹುಡುಕುತ್ತಾ ಹೊರಟರೆ ಮೋಟಾಮೋಟಿ ಕಾಣುವುದು ಅರಣ್ಯನಾಶ ಒಂದೇ.

ಹೇಳಬೇಕು ಎಂದರೆ, ಲಾವೋಸ್ ಇಂದಿಗೂ ತನ್ನ ಸಂಪ್ರದಾಯ ಉಳಿಸಿಕೊಂಡ ನಾಡು. ಆ ಕಾರಣದಿಂದ ಆನೆಗಳು ಹೆಚ್ಚು ಮಹತ್ವ ಪಡೆಯುತ್ತವೆ. ಭಾರತದಲ್ಲಿ ಗೋವಿಗೆ ಇರುವ ಸ್ಥಾನ ಅಲ್ಲಿ ಆನೆಗಿದೆ. ಆ ದೇಶದಲ್ಲಿ 2-3 ರಾಷ್ಟ್ರೀಯ ಹೆದ್ದಾರಿಯನ್ನು ಬಿಟ್ಟರೆ, ರಸ್ತೆಯ ಸುವ್ಯವಸ್ಥೆಯೂ ಇಲ್ಲ. ಬಹುತೇಕ ರಸ್ತೆಗಳು ಕಿರಿದಾದದ್ದು, ಇಕ್ಕಟ್ಟಾದದ್ದು. ವಿಶಾಲವಾದ ರಸ್ತೆಗಳನ್ನು ಮಾಡುವ ಭೂಪ್ರದೇಶವೂ ಅದಲ್ಲ. ಏಕೆಂದರೆ ಬಹುತೇಕ ಭೂಮಿ ಕಾಡು, ಗುಡ್ಡಗಳಿಂದಲೇ ತುಂಬಿಕೊಂಡಿದೆ. ಮರವನ್ನೋ, ಗುಡ್ಡವನ್ನೋ ಕಡಿದು ರಸ್ತೆ ನಿರ್ಮಿಸುವುದು ತುಂಬಾ ಕಷ್ಟದ ಕೆಲಸವಂತೂ ಹೌದು. ಆದ್ದರಿಂದ ಅನಿವಾರ್ಯಕ್ಕೆ ಎಷ್ಟು ಬೇಕೋ ಅಷ್ಟು ರಸ್ತೆಯನ್ನು ಆ ದೇಶ ನಿರ್ಮಿಸಿಕೊಂಡಿದೆ. ಇನ್ನು, ದೊಡ್ಡ ಅಣೆಕಟ್ಟಾಗಲಿ, ವಿದ್ಯುತ್ ಉತ್ಪಾದನಾ ಘಟಕಗಳಾಗಲಿ, ಹೇಳಿಕೊಳ್ಳುವಂಥ ದೊಡ್ಡ ಕಾರ್ಖಾನೆಯಾಗಲಿ ಯಾವುದೂ ಇಲ್ಲ. ಆದರೂ ಆನೆಗಳ ಸಂಖ್ಯೆ ಘಟಿಸಲು ಅರಣ್ಯನಾಶವೇ ಮೂಲ ಕಾರಣ ಎಂದು ಹೇಳಲಾಗುತ್ತಿದೆ. ಅಲ್ಲದೆ, ಕೆಲವು ವರ್ಷಗಳ ಹಿಂದಿನವರೆಗೂ ಅಲ್ಲಿಯೂ ಆನೆಯ ಶಿಕಾರಿ ನಡೆಯುತ್ತಿತ್ತಂತೆ. ದಂತಚೋರರು ಯಾವ ದೇಶದಲ್ಲಿ ಇಲ್ಲ ಹೇಳಿ? ಇತ್ತೀಚಿನ ವರ್ಷಗಳಲ್ಲಿ ಆನೆಯ ಶಿಕಾರಿಗೆ ಅಲ್ಲಿಯ ಸರಕಾರ ಸಂಪೂರ್ಣ ಕಡಿವಾಣ ಹಾಕಿದೆ.

ಇರಲಿ, ಲಾವೋಸ್‌ನಲ್ಲಿ ನನ್ನ ಗಜದರ್ಶನದ ಸಂಕಲ್ಪ ಈಡೇರಿತು. ನಾನು ಪೂರ್ವ ನಿರ್ಧಾರಿತ (ಪ್ಯಾಕೇಜ್ ಟೂರ್) ಪ್ರವಾಸ ಹೋಗುವುದು ತೀರಾ ಎಂದರೆ ತೀರಾ ಕಡಿಮೆ. ಅಲ್ಲಿಯೂ ಅಷ್ಟೇ, ಯಾವುದೂ ನಿರ್ದಿಷ್ಟವಾಗಿರಲಿಲ್ಲ, ನಿರ್ಧಾರವಾಗಿರಲಿಲ್ಲ. ಆದರೆ ಆನೆಗಳನ್ನು ನೋಡಲಿಕ್ಕೆ ಒಬ್ಬನೇ ಹೋಗಲು ಸಾಧ್ಯವಿರಲಿಲ್ಲ, ಆ ವಿಷಯದಲ್ಲಿ ರಿಸ್ಕ್ ತೆಗೆದುಕೊಳ್ಳುವಂತಿರಲಿಲ್ಲ. ಆದ್ದರಿಂದ ಒಂದು ಮಿನಿ ಬಸ್‌ನಲ್ಲಿ ಒಬ್ಬ ಗೈಡ್, 10-12 ಜನರನ್ನು ಕೂಡಿಕೊಂಡು ಆನೆ ಇರುವ ಸ್ಥಳಕ್ಕೆ ಹೊರಟೆ.

ನಾವು ಉಳಿದುಕೊಂಡಿದ್ದ ಲುವಾಂಗ್ ಪ್ರಬಾಂಗ್ ಪಟ್ಟಣದಿಂದ ಆನೆ ಶಿಬಿರ ತಲುಪಿ, ಸುತ್ತಲೂ ನೋಡಿದರೆ ಒಂದು ಅಪರೂಪದ ಅನುಭವ. ಅಲ್ಲಿ ಆನೆಗಳು ಆರಾಮದಲ್ಲಿ ಆಚೆ-ಈಚೆ ಓಡಾಡುತ್ತಿದ್ದವು. ಅವುಗಳ ಕಾಲಿಗೆ ಸರಪಳಿ ಇರಲಿಲ್ಲ, ಹಗ್ಗ ಕಟ್ಟಿರಲಿಲ್ಲ, ಕಿವಿಗಳಿಗೆ ಅಂಕುಶ ನೇತುಹಾಕಿರಲಿಲ್ಲ. ಕೆಲವು ಆನೆಗಳ ಪಕ್ಕದಲ್ಲಿ ಮಾವುತರೂ ಇರಲಿಲ್ಲ. ಅಲ್ಲಿ ಒಂದೊಂದು ಆನೆಗೂ ಒಬ್ಬರೋ-ಇಬ್ಬರೋ ಮಾವುತರು ನೇಮಕವಾಗಿದ್ದರು. ಆದರೆ ಅದು ಊಟದ ಸಮಯವಾದದ್ದರಿಂದ ಕೆಲವು ಮಾವುತರು ಬಂದ ಪ್ರವಾಸಿಗರಿಗೆ ಊಟ ಬಡಿಸುವುದರಲ್ಲಿ ನಿರತರಾಗಿದ್ದರು. ವಿಶೇಷವೆಂದರೆ, ಯಾವುದೇ ಬಂಧ, ನಿರ್ಬಂಧವೂ ಇಲ್ಲದ ಆನೆಗಳ ಪಕ್ಕದಲ್ಲಿ ಪ್ರವಾಸಿಗರು ಸುಳಿದಾಡುತ್ತಿದ್ದರೆ ಅವು ಏನೂ ಮಾಡುತ್ತಿರಲಿಲ್ಲ.

ನಾನು ಮಾವುತ ಇದ್ದ ಆನೆಯ ಬಳಿಗೆ ಹೋಗಿದ್ದೆ. ಆನೆಯ ಗಾತ್ರಕ್ಕೆ ಭಯಪಡುತ್ತಿದ್ದ ನಾನು ಲಾವೋಸ್‌ನ ಆನೆಗಳ ಬಗ್ಗೆ ಓದಿ, ಕೇಳಿದ್ದರಿಂದಲೋ ಏನೋ, ಅಲ್ಲಿಯ ಆನೆಯ ಪಕ್ಕದಲ್ಲಿ ನಿಂತಾಗ ಭಯವಾಗಲಿಲ್ಲ. ಲಾವೋಸ್‌ನಲ್ಲಿ ಆನೆಗಳು ಮನುಷ್ಯರ ಜತೆ ಮನುಷ್ಯರಾಗಿಯೇ ಇರುತ್ತವೆ, ಮಾನವಸ್ನೇಹಿಯಾಗಿ ವರ್ತಿಸುತ್ತವೆ ಎಂದು ಕೇಳಿದ್ದು ನೂರಕ್ಕೆ ನೂರರಷ್ಟು ಸತ್ಯ ಎಂದೆನಿಸಿತು. ಆದರೂ ಇನ್ನಷ್ಟು ವಿಷಯಗಳನ್ನು ತಿಳಿದುಕೊಳ್ಳಲು ನನಗೆ ಮಾವುತ ಬೇಕಾಗಿತ್ತು.

ನಾವು ಹೋದ ಸ್ಥಳದಲ್ಲಿ ಆನೆಗಳು ಸ್ವಚ್ಛಂದವಾಗಿ ಓಡಾಡುತ್ತಿದ್ದವು. ಅಲ್ಲಿಯೇ ನಮಗೆ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಊಟಕ್ಕೂ ಮೊದಲು ಸಮಯಾವಕಾಶ ಇದ್ದದ್ದರಿಂದ ಆನೆಯ ಬಳಿ ಹೊರಟೆ. ನಾನು ಮಾತನಾಡುವುದಕ್ಕಿಂತ ಮುಂಚೆಯೇ ಮಾವುತ ನನ್ನ ಕೈಯಲ್ಲಿ ಕಬ್ಬು ಕೊಟ್ಟು, ''ಆನೆಗೆ ತಿನ್ನಿಸಿ'' ಎಂದ. ಮೊದಲು ಮಾತಾಡಿ ಆಮೇಲೆ ಆನೆಗೆ ತಿನ್ನಿಸುತ್ತೇನೆ ಎಂದರೂ ಕೇಳಲಿಲ್ಲ. ಅವನ ಮಾತಿಗೆ ಒಪ್ಪಿ ನಾನು ಆನೆಗೆ ಕಬ್ಬು, ಬಾಳೆಹಣ್ಣು ತಿನ್ನಿಸುತ್ತಿರುವಾಗ ಆತ ಆನೆಯನ್ನು ಮುಟ್ಟುವಂತೆ ಹೇಳಿದ. ನಿಧಾನಕ್ಕೆ ಸೊಂಡಿಲು ಮುಟ್ಟಿದೆ. ''ಇನ್ನೂ ಹತ್ತಿರ ಹೋಗಿ, ಕಿವಿಯ ಹಿಂಭಾಗವನ್ನು ನೇವರಿಸಿ'' ಎಂದ. ಆಜ್ಞಾಧಾರಿಯಾದೆ. ಒಂದೆರಡು ನಿಮಿಷ ಅದರ ಜತೆಗಿದ್ದು ಮೈ ನೇವರಿಸಿ, ಫೋಟೋ ಕ್ಲಿಕ್ಕಿಸಿಕೊಂಡು ತಿರುಗಿ ಬಂದಾಗ ಮಾವುತನೇ ಮಾತು ಆರಂಭಿಸಿದ.

''ನಿಮ್ಮಲ್ಲಿ ಸಾಕಷ್ಟು ಪ್ರಶ್ನೆಗಳಿವೆ ಎಂಬುದು ಗೊತ್ತು. ಆದರೆ ನೀವು ಆನೆಯನ್ನು ಮುಟ್ಟಿ, ಸಂವಹನ ನಡೆಸಿ, ಸಾಮೀಪ್ಯವನ್ನು ಅನುಭವಿಸಿದ ನಂತರ ನಿಮ್ಮ ಭಾವನೆಗಳು ಬದಲಾಗುತ್ತವೆ. ಆನೆಯ ಬಗ್ಗೆ ಇರುವ ಭಯ ಸ್ವಲ್ಪಮಟ್ಟಿಗಾದರೂ ದೂರವಾಯಿತಲ್ಲ?'' ಎಂದ. ಅದು ನಿಜ ಎಂದೆನಿಸಿತು. ಎಷ್ಟೋ ಬಾರಿ ನಾವು ಭಯದಿಂದ ಎಷ್ಟೋ ವಸ್ತುಗಳ, ವಿಷಯಗಳ ಹತ್ತಿರವೇ ಹೋಗುವುದಿಲ್ಲ. ಒಮ್ಮೆ ಅದರ ಕುರಿತಾಗಿ ತಿಳಿದುಕೊಂಡರೆ ನಮ್ಮ ಭಯ ತಕ್ಕಮಟ್ಟಿಗೆ ನಿವಾರಣೆಯಾಗುತ್ತದೆ. ಮಾವುತ ಮಾತು ಮುಂದುವರಿಸಿದ್ದ, ''ಮನುಷ್ಯನಿಗೆ ಬಹಳ ಹತ್ತಿರವಾದ ಪ್ರಾಣಿಗಳು ಎಂದರೆ ಹಸು, ನಾಯಿ ಮತ್ತು ಆನೆ. ಇವೆಲ್ಲವೂ ಮನುಷ್ಯನ ಮಾತನ್ನು, ಭಾವನೆಯನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಲ್ಲವು. ಇದರಲ್ಲಿ ಹಸು ಮತ್ತು ನಾಯಿ ಸಾಕುಪ್ರಾಣಿಗಳು. ಅಡವಿಯಲ್ಲಿರುವ ಪ್ರಾಣಿಗಳಲ್ಲಿ ಮನುಷ್ಯನಿಗೆ ತೀರಾ ಹತ್ತಿರವಾದ, ಮನುಷ್ಯನ ಭಾವನೆಗಳನ್ನು ಅರ್ಥಮಾಡಿಕೊಳ್ಳುವ ಏಕೈಕ ಪ್ರಾಣಿ ಆನೆ. ಮಂಗಗಳು ಅರ್ಧ ಮನುಷ್ಯರೇ ಆಗಿರುವುದರಿಂದ ಅವುಗಳನ್ನು ಈ ಜಾತಿಗೆ ಸೇರಿಸುವುದು ಬೇಡ'' ಎಂದ.

''ಇಲ್ಲಿ ಸುಮಾರು ಆನೆಗಳಿವೆ. ನನ್ನ ಕಣ್ಣಿಗೆ ಎಲ್ಲವೂ ಒಂದೇ ರೀತಿ ಕಾಣುತ್ತಿವೆ. ಪ್ರತಿ ಆನೆಗೂ ಮಾವುತರಿದ್ದಾರೆ. ಯಾವ ಆನೆಯ ಮಾವುತ ಯಾರು ಎಂದು ಹೇಗೆ ಗುರುತು ಹಿಡಿಯುತ್ತೀರಿ?'' ಎಂದು ಕೇಳಿದೆ.

ಅದಕ್ಕೆ, ''ಇಲ್ಲಿಯ ಸರಕಾರ ಪ್ರತಿಯೊಂದು ಆನೆಗೂ ಗುರುತಿನ ಚೀಟಿ ನೀಡಿದೆ. ನೀವು ಬೇಕಾದರೆ ಅದನ್ನು 'ಆನೆಗಳ ಪಾಸ್‌ಪೋರ್ಟ್' ಎಂದು ಹೇಳಬಹುದು. ಅಧಿಕಾರಿಗಳು ಬಂದಾಗ ನಾವು ಆ ಗುರುತಿನ ಚೀಟಿಯನ್ನು ತೋರಿಸಬೇಕಾಗುತ್ತದೆ. ಆದರೆ, ನಮಗೆ ನಮ್ಮ ಆನೆಯನ್ನು ಗುರುತಿಸಲು ಯಾವುದೇ ಕಷ್ಟವಿಲ್ಲ. ಅವಳಿ-ತ್ರಿವಳಿ ಮಕ್ಕಳಾದರೂ ತಾಯಿ-ತಂದೆ ಅವರನ್ನು ಹೇಗೆ ಗುರುತಿಸುತ್ತಾರೋ ಹಾಗೆ ನಮ್ಮ ಆನೆಯನ್ನು ನಾವು ಗುರುತಿಸುತ್ತೇವೆ. ಅಷ್ಟೇ ಅಲ್ಲ, ಆನೆಗಳೇ ನಮ್ಮ ಗುರುತು ಹಿಡಿಯುತ್ತವೆ. ನಾನು ಕಳೆದ 25 ವರ್ಷದಿಂದ ಇದೇ ಆನೆಯ ಜತೆ ಇದ್ದೇನೆ. ಈ ಆನೆ ನನ್ನ ಕಣ್ಣ ಮುಂದೆಯೇ ಹುಟ್ಟಿದೆ. ನಾನೇ ಅದನ್ನು ಬೆಳೆಸಿದ್ದೇನೆ. ಈ ಆನೆಯನ್ನು ಬೆಳೆಸುವಾಗ ಒಂದು ದಿನವೂ, ಒಂದೇ ಒಂದು ಪೆಟ್ಟನ್ನೂ ಕೊಟ್ಟಿಲ್ಲ, ಅದನ್ನು ಕಟ್ಟಿಹಾಕಲಿಲ್ಲ. ಬಾಲ್ಯದಲ್ಲಿ ಅದು ಮಾಡಿದ ಪುಂಡಾಟಗಳನ್ನು ಸಹಿಸಿಕೊಂಡಿದ್ದೇನೆ. ಈಗ ನನಗಿಂತಲೂ ದೊಡ್ಡದಾಗಿ ಬೆಳೆದ ಈ ಆನೆ ನಾನು ಹೇಳಿದಂತೆಯೇ ಕೇಳುತ್ತದೆ. ನನ್ನ ಯಾವ ಮಾತನ್ನೂ ಮೀರುವುದಿಲ್ಲ. ಅದಕ್ಕೆ ನನ್ನ ನಗು, ಸಂತೋಷ ಅರ್ಥವಾಗುತ್ತದೆ. ನನ್ನ ಬೇಸರವೂ ಅರ್ಥವಾಗುತ್ತದೆ. ನನಗೂ ಅಷ್ಟೇ, ಅದರ ಭಾವನೆ, ಭಾಷೆ ಅರ್ಥಮಾಡಿಕೊಳ್ಳಲು ಅದರ ಎರಡು ಕಣ್ಣುಗಳೇ ಸಾಕು'' ಎಂದು ಆತ ಹೇಳುವಾಗ ನನ್ನ ಕಣ್ಣುಗಳು ತೇವವಾಗಿದ್ದವು. ನನಗೆ ಆಶ್ಚರ್ಯ ಎನಿಸಿದ್ದು, ತನ್ನ ಜೀವನದ 25 ವರ್ಷವನ್ನು ಈತ ಒಂದೇ ಪ್ರಾಣಿಯೊಂದಿಗೆ, ಒಂದೇ ಕೆಲಸ ಮಾಡಿಕೊಂಡು ಕಳೆದಿದ್ದಾನೆ. ಆತನನ್ನು ನೋಡಿದರೆ ಆತ ಸಂಬಳಕ್ಕಾಗಿ ಕೆಲಸ ಮಾಡುತ್ತಿದ್ದಾನೆ ಎಂದಾಗಲಿ, ಆನೆಯ ಕೆಲಸ ಮಾಡಿ ಆತ ಸುಸ್ತಾಗಿದ್ದಾನೆ ಎಂದಾಗಲಿ, ಕೆಲಸ ಬೇಸರ ತರಿಸಿದೆ ಎಂದಾಗಲಿ ಅನ್ನಿಸಲೇ ಇಲ್ಲ. ತನ್ನ 15-20ನೇ ವರ್ಷಕ್ಕೆ ಆತ ಈ ಕೆಲಸ ಆರಂಭಿಸಿರಬಹುದು. ಹೆಚ್ಚೆಂದರೆ ಆತ ಇನ್ನೂ 25 ವರ್ಷ ಬದುಕಿರಬಹುದು. ಇದನ್ನೇ ಮನಸ್ಸಿನಲ್ಲಿಟ್ಟುಕೊಂಡು ಕೇಳಿದೆ, ''ಇನ್ನು ಎಷ್ಟು ವರ್ಷ ಇದೇ ಕೆಲಸ ಮಾಡಬೇಕೆಂದಿರುವೆ? ನಿನಗೆ ಬೇರೆ ಏನಾದರೂ ಮಾಡಬೇಕು, ನಿವೃತ್ತ ಜೀವನ ಸಾಗಿಸಬೇಕು ಎಂಬ ಆಸೆಯಿಲ್ಲವೇ?''. ಆತ ಹೃದಯಾಳದಿಂದ ಹೇಳಿದನೋ, ತಮಾಷೆಗಾಗಿ ಹೇಳಿದನೋ, ''ನಾನು ಈ ಆನೆಯನ್ನು ನನ್ನ ಹೆಂಡತಿ ಮತ್ತು ಮಕ್ಕಳಿಗಿಂತ ಹೆಚ್ಚಾಗಿ ಪ್ರೀತಿಸುತ್ತೇನೆ. ನಾನು ಬದುಕಿರುವವರೆಗೂ ಇದೇ ಕೆಲಸ ಮಾಡುತ್ತೇನೆ. ಇದೇ ಆನೆಯೊಂದಿಗೆ ಬದುಕುತ್ತೇನೆ. ಇದು ನನ್ನ ಮನೆಯವರಿಗೂ ತಿಳಿದಿರುವ ಸತ್ಯ''. ಆತನ ಮಾತು ತಮಾಷೆ ಎಂದು ಅನ್ನಿಸಲಿಲ್ಲ.

ಕೊನೆಯ ಪ್ರಶ್ನೆ ಎಂಬಂತೆ ಆತನನ್ನು ಕೇಳಿದೆ, ''ನಿನಗೆ ಯಾವಾಗಲೂ ಬೇಸರವೇ ಆಗುವುದಿಲ್ಲವೇ?''. ಆತ ನನ್ನ ಕಿವಿಯಲ್ಲಿ ಪಿಸುಗುಟ್ಟಿದ. ''ಆನೆಯ ಬೆನ್ನಿನ ಮೇಲೆ ಭಾರ ಹೊರಿಸಿದಾಗ, ಮನುಷ್ಯರು ಸವಾರಿ ಮಾಡುವಾಗ ಬೇಸರವಾಗುತ್ತದೆ. ಆನೆ ಎಷ್ಟೇ ಶಕ್ತಿಯುತವಾದ ಪ್ರಾಣಿಯಾದರೂ, ತನ್ನ ಬಲದಿಂದ ದೊಡ್ಡ ದೊಡ್ಡ ಮರಗಳನ್ನೇ ಬುಡಮೇಲು ಮಾಡುವ ತಾಕತ್ತಿದ್ದರೂ ಅದರ ಬೆನ್ನು ಭಾರ ಹೊರಲು ಯೋಗ್ಯವಾದದ್ದಲ್ಲ. ಅದರ ಕಾಲಿಗೆ ವಜ್ಜೆ ಕಟ್ಟಿ ಎಳೆಸಬಹುದು, ಸೊಂಡಲಿನಲ್ಲಿ ತಾಕತ್ತು ಇರುವಷ್ಟನ್ನು ಎತ್ತಿ ಸಾಗಿಸಬಹುದು. ಆದರೆ ಕತ್ತೆಯಂತೆ ಆನೆಯ ಬೆನ್ನಿನ ಮೇಲೆ ಭಾರ ಹೊರಿಸಬಾರದು'' ಎಂದ. ''ಸರಿ, ಆದರೆ ಕುದುರೆ, ಒಂಟೆ ಸವಾರಿ ಮಾಡಿದಂತೆ ಆನೆ ಸವಾರಿಯನ್ನೂ ಮನುಷ್ಯರು ಅದರಲ್ಲೂ ಮಕ್ಕಳು ಇಷ್ಟಪಡುತ್ತಾರಲ್ಲ? ಅಷ್ಟಕ್ಕೂ ಆ ಗಾತ್ರದ ಪ್ರಾಣಿಯ ಮೇಲೆ 50-60 ಕಿಲೋ ತೂಗುವ ಒಬ್ಬ ಮನುಷ್ಯ ಕುಳಿತರೆ ಆನೆಗೆ ತೊಂದರೆಯಾಗಲಿಕ್ಕಿಲ್ಲ. ನಮ್ಮ ಮೈ ಮೇಲೆ ಸೊಳ್ಳೆ ಕುಳಿತಂತೆ ಆಗಬಹುದು. ಆನೆ ಸವಾರಿಯಿಂದ ಮಕ್ಕಳು ಖುಷಿಪಟ್ಟುಕೊಳ್ಳುತ್ತಾರಲ್ಲ?'' ಎಂದೆ. ಮಾವುತ ಹೇಳಿದ, ''ಮನುಷ್ಯರಿಗೆ ಖುಷಿಯಾಗಬಹುದು, ಆನೆಗಲ್ಲ. ನೀವೇ ಹೇಳಿದಂತೆ ಮನುಷ್ಯ ಆನೆಯ ಮುಂದೆ ಸೊಳ್ಳೆಯಂತಿರಬಹುದು. ಮನುಷ್ಯನ ಮೈಮೇಲೆ ಸೊಳ್ಳೆ ಬಂದು ಕುಳಿತಾಗ ಮನುಷ್ಯ ಏನು ಮಾಡುತ್ತಾನೆ? ಅದು ಸೊಳ್ಳೆಯ ಮರಿಯೋ, ಸಣ್ಣದೋ ದೊಡ್ಡದೋ ಎಂದು ನೋಡುವುದಿಲ್ಲ. ಸೊಳ್ಳೆಯಾದರೂ ಕಚ್ಚುತ್ತದೆ ಎಂದುಕೊಳ್ಳಿ. ನೊಣ ಬಂದು ಕುಳಿತಾಗಲೂ, ಕಚ್ಚದ ಇರುವೆ ಮೈಮೇಲೆ ಹತ್ತಿದಾಗಲೂ ಮನುಷ್ಯ ಮೈಕೊಡವಿಕೊಳ್ಳುವುದಿಲ್ಲವೇ? ಪ್ರತಿಯೊಂದು ಪ್ರಾಣಿಗೂ ಅದರದ್ದೇ ಆದ ಒಂದು ವಲಯ ಇರುತ್ತದೆ. ಯಾವುದೇ ಪ್ರಾಣಿಯಾದರೂ ಕೆಲವನ್ನು ಇಷ್ಟಪಡುತ್ತವೆ, ಕೆಲವನ್ನು ಇಲ್ಲ. ಅವುಗಳಿಗೆ ಮಾತು ಬರುವುದಿಲ್ಲ ಎಂಬ ಮಾತ್ರಕ್ಕೆ, ಅವು ಸುಮ್ಮನಿರುತ್ತವೆ ಎಂಬ ಕಾರಣಕ್ಕೆ ಅವು ಅದನ್ನು ಇಷ್ಟಪಡುತ್ತವೆ ಎಂದಲ್ಲ. ನಿಜವಾಗಿಯೂ ಪ್ರೀತಿಯಿದ್ದರೆ, ನೀವು ಅದರ ಮೈ ನೇವರಿಸಿ, ಅಪ್ಪಿಕೊಳ್ಳಿ, ಅದರೊಂದಿಗೆ ಮಾತನಾಡಿ. ವಾರವೋ, ತಿಂಗಳೋ ಇದ್ದು ಅದರ ಭಾವನೆಯನ್ನು, ಭಾಷೆಯನ್ನು ಕಲಿತುಕೊಳ್ಳಿ. ಆಗ ನಿಮಗೆ ಒಂದು ಫೋಟೋಕ್ಕಾಗಿ ಅದರ ಮೇಲೆ ಹತ್ತಿ ಕುಳಿತುಕೊಂಡದ್ದಕ್ಕಿಂತ ಹೆಚ್ಚು ಖುಷಿಯಾಗುತ್ತದೆ''.

ನನ್ನಲ್ಲಿ ಮಾತಿರಲಿಲ್ಲ. ಅವನ ಕೈಗೆ ಸ್ವಲ್ಪ ಹಣ ಇಡಲು ಹೋದೆ. ಆತ ಎರಡು ಹೆಜ್ಜೆ ಹಿಂದೆ ಹೋಗಿ ಹೇಳಿದ, ''ನಿಮಗೆ ಏನೇ ಕೊಡಬೇಕೆಂದಿದ್ದರೂ ಡಬ್ಬದಲ್ಲಿ ಹಾಕಿ. ಅದು ಆನೆಗಳ ಉಪಚಾರಕ್ಕೆ, ರಕ್ಷಣೆಗೆ ಬಳಕೆಯಾಗುತ್ತದೆ. ನನಗೆ ಹಣ ಬೇಡ'' ಎಂದು ಒಂದು ಡಬ್ಬ ತೋರಿಸಿದ. ನಾನು ಡಬ್ಬದಲ್ಲಿ ಹಣ ಹಾಕುವಾಗ ಆತನದ್ದೇ ಭಾಷೆಯಲ್ಲಿ ಆನೆ ಕಡೆ ತಿರುಗಿ ಏನೋ ಹೇಳಿದ. ಅದು ಸೊಂಡಲು ಎತ್ತಿ ಅದರದ್ದೇ ಭಾಷೆಯಲ್ಲಿ ಏನೋ ಹೇಳಿತು. ನನಗೆ ಭಾಷೆ ಅರ್ಥವಾಗಲಿಲ್ಲ, ಭಾವನೆ ಅರ್ಥವಾಗಿತ್ತು. ಲಾವೋಸ್ ದೇಶದ ಜನರ ಮನವೂ ತಿಳಿದಿತ್ತು.

ಮನಸ್ಸಿನಲ್ಲಿಯೇ ಕೇಳಿಕೊಂಡೆ, ''ದೇವರೇ, ಲಾವೋಸ್ ದೇಶಕ್ಕೆ ಎರಡೂ 'ಆನೆ' ಕೊಡು''.

ಬಡತನದ ವಿರುದ್ಧ ಪ್ರಧಾನಿ ನರೇಂದ್ರ ಮೋದಿಯವರು ಸಾರಿದ ಯುದ್ಧ...

ಮೋದಿಯವರು ಬಡವರ ಸಬಲೀಕರಣಕ್ಕೆ ಕೈಗೊಂಡ ಅತ್ಯಂತ ವಿಶಿಷ್ಟ ಉಪಕ್ರಮವೆಂದರೆ ಡಿಜಿಟಲ್ ಕ್ರಾಂತಿ. ಅಲ್ಲಿಯವರೆಗೂ ತಂತ್ರಜ್ಞಾನವೆಂಬುದು ಮಧ್ಯಮ ವರ್ಗದ ಸ್ವತ್ತಾಗಿತ್ತು. ಆ ನಂಬಿಕೆ ಬದಲಾಯಿತು. ಬಡವರ ಕೈಗೂ ಡಿಜಿಟಲೀಕರಣದ ಲಾಭ ವರ್ಗಾವಣೆಯಾಯಿತು. ಭಾರತೀಯ ಮಾರುಕಟ್ಟೆ ಕೂಡ ವೈಯಕ್ತಿಕ ತಂತ್ರಜ್ಞಾನವನ್ನು ಕೈಗೆಟಕುವ ದರದಲ್ಲೇ ಇರಿಸಿತು. ಭಾರತವೀಗ ಆತ್ಮವಿಶ್ವಾಸದಿಂದ ಹೀಗೆ ಹೇಳಬಹುದು: 'ಬಡವರು ಬೇರೆ ದೇಶದವರಲ್ಲ!'



ಅಕ್ಬರ್‌ನಾಮಾ
ಎಂ.ಜೆ.ಅಕ್ಬರ್
vveditoped@gmail.com

ಮಗು ಎಂಬುದು ಮನುಷ್ಯನ ತಂದೆ! ಈ ಮಾತು ಕವಿಗೊಂದು ಉಪಮೆಯಾಗಿ ಕಾಣಿಸಬಹುದು. ಆದರೆ ಭಾರತದ ಪ್ರಧಾನಿ ನರೇಂದ್ರ ಮೋದಿಯವರಿಗೆ ಇದೊಂದು ವಾಸ್ತವ. ಮೋದಿ ಹುಟ್ಟಿದ್ದು ಬಡ ಕುಟುಂಬದಲ್ಲಿ. ಬ್ರಿಟಿಷರು ಭಾರತದ ಸಂಪತ್ತನ್ನೆಲ್ಲಾ ಲೂಟಿ ಹೊಡೆದು, ಈ ದೇಶದ ಸಂಪನ್ಮೂಲಗಳನ್ನು ಹಿಂಡಿ ಹಿಪ್ಪೆ ಮಾಡಿ, ದೇಶದ ಆರ್ಥಿಕತೆಯನ್ನು ಅಡ್ಡಡ್ಡ ಮಲಗಿಸಿ, ಜನರನ್ನು ಬಡತನದ ಕೂಪಕ್ಕೆ ತಳ್ಳಿ, ಕೊನೆಗೆ ಎಲ್ಲಾ ಮುಗಿದ ಮೇಲೆ ದೇಶವನ್ನು ನಡುನೀರಿನಲ್ಲಿ ತೊರೆದು ಹೋದ ಸಂದರ್ಭದಲ್ಲೇ ಜನಿಸಿದವರು ಮೋದಿ. ಬಂಗಾಳದ ಬರಗಾಲದಲ್ಲಿ ಲಕ್ಷಾಂತರ ಜನರು ಸತ್ತ ನೆನಪು ದೇಶಕ್ಕಿತ್ತು. ಅದನ್ನು ಕಣ್ಣಾರೆ ಕಂಡ ಜನರು ಆಗಿನ್ನೂ ಬಡತನದ ಭೀತಿಯಿಂದ ಹೊರಗೆ ಬಂದಿರಲಿಲ್ಲ. ದೇಶದ ಬಡವರು ಮೂಳೆಯ ಹಂದರವಾಗಿ ಜೀವ ಹಿಡಿದುಕೊಂಡಿದ್ದರು. ಅವರಿಗೆ ಆಡಳಿತ ವ್ಯವಸ್ಥೆಯ ಬಗ್ಗೆ ಆಕ್ರೋಶವಿತ್ತು. ಅದನ್ನೆಲ್ಲ ಬಡ ಹುಡುಗ ಮೋದಿ ನೋಡಿದ್ದರು.

ಈಗ ಅವರ ಸರಕಾರದ ಮೂಲ ಉದ್ದೇಶವೇ ಬಡತನದಿಂದ ದೇಶಕ್ಕೆ ಮುಕ್ತಿ ಕೊಡಿಸುವುದಾಗಿದೆ. ಪೂರ್ವಗ್ರಹಗಳನ್ನು ಬದಿಗಿಟ್ಟು ಕೇಳಿಸಿಕೊಳ್ಳಲು ತಯಾರಿರುವವರಿಗೆ ಸಾಕಷ್ಟು ಸಾಕ್ಷ್ಯಗಳು ಸಿಗುತ್ತವೆ. ದೆಹಲಿಯ ಕೆಂಪುಕೋಟೆಯ ಮೇಲಿನಿಂದ ಅವರು 2014ರಲ್ಲಿ ಮಾಡಿದ ಮೊದಲ ಭಾಷಣವನ್ನು ಇನ್ನೊಮ್ಮೆ ಕೇಳಿಸಿಕೊಂಡರೆ ಅವರ ಉದ್ದೇಶವೇನಾಗಿತ್ತು ಎಂಬುದು ಪುನಃ ನೆನಪಾದೀತು.

ಭಾಷಣಗಳು ಪ್ರಜಾಪ್ರಭುತ್ವದಲ್ಲಿ ಸರ್ವೇಸಾಮಾನ್ಯ. ಆದರೆ ಜನರಿಗೆ ನೆನಪಿನ ಶಕ್ತಿ ಕಡಿಮೆ. ನಿಜ ಹೇಳಬೇಕೆಂದರೆ, ಸ್ವಾತಂತ್ರ್ಯೋತ್ಸವದ ದಿನ ಪ್ರಧಾನ ಮಂತ್ರಿಗಳು ಮಾಡುವಂಥ ಅತ್ಯಂತ ಪ್ರಮುಖವಾದ ಸಾರ್ವಜನಿಕ ಭಾಷಣವನ್ನೂ ಕೂಡ ಜನರು ಬಹಳ ಬೇಗ ಮರೆತುಬಿಡುತ್ತಾರೆ. ಆದರೆ, ಮೋದಿಯವರ ಭಾಷಣಗಳನ್ನು ಅಷ್ಟು ಸುಲಭಕ್ಕೆ ಮರೆಯಲಾಗದು.

2014ರ ಆಗಸ್ಟ್ 15ರಂದು ಪ್ರಧಾನಿ ಮೋದಿ ಕೆಂಪುಕೋಟೆಯ ಮೇಲಿನಿಂದ ಮಾಡಿದ ಮೊದಲ ಭಾಷಣವು ಮೊಟ್ಟಮೊದಲ ಬಾರಿಗೆ ಅಧಿಕಾರಿಗಳು ಬರೆದುಕೊಡುವ ಪ್ರಧಾನಿಯ ಸ್ವಾತಂತ್ರ್ಯೋತ್ಸವದ ನೀರಸ ಭಾಷಣದಂತೆ ಇರಲಿಲ್ಲ. ಅದು ಪ್ರಚಂಡ ವಾಗ್ಮಿಯೊಬ್ಬನ ಅದ್ಭುತ ಭಾಷಣವಾಗಿತ್ತು. ಅದರಲ್ಲಿ ಅವರು ತಮ್ಮ ಕಲ್ಪನೆಯ ಉತ್ತಮ ಆಡಳಿತ ಎಂದರೇನೆಂಬುದನ್ನು ಜನರ ಮುಂದೆ ತೆರೆದಿಟ್ಟಿದ್ದರು. ತಮ್ಮ ಕನಸಿನ ಭಾರತ ಹೇಗಿರಬೇಕು ಎಂಬುದನ್ನು ತಿಳಿಸಿದರು. ಸಾಂಪ್ರದಾಯಿಕ ಸಿದ್ಧ ಸೂತ್ರಗಳನ್ನು ಬದಿಗೊತ್ತಿದ ಅವರು, ಬಡತನ ಹಾಗೂ ಹಸಿವಿನ ನಾನಾ ಮುಖಗಳನ್ನೂ, ತಾವು ಅನುಭವಿಸಿದ ಕಷ್ಟಕೋಟಲೆಗಳನ್ನೂ ನಿರ್ಭಿಡೆಯಿಂದ ತಮ್ಮ ಭಾಷಣದಲ್ಲಿ ಬಿಚ್ಚಿಟ್ಟರು. ದೇಶದ ಅಮ್ಮಂದಿರು, ಚಿಕ್ಕಮ್ಮಂದಿರು, ದೊಡ್ಡಮ್ಮಂದಿರು ತಮ್ಮ ಮನೆಯಲ್ಲಿ ಸರಿಯಾದ ಶೌಚಾಲಯದ ವ್ಯವಸ್ಥೆಯಿಲ್ಲದೆ ಸೂರ್ಯಾಸ್ತವಾಗುವುದನ್ನೇ ಕಾಯುತ್ತಾ, ಅಲ್ಲಿಯವರೆಗೂ ದೇಹದೊಳಗೆ ವಿಷಕಾರಿ ಪದಾರ್ಥಗಳನ್ನು ಹೇಗೆ ಅನಿವಾರ್ಯವಾಗಿ ಉಳಿಸಿಕೊಂಡು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ ಎಂಬುದನ್ನು ಹೇಳಿದರು. ಸಹಜವೆಂದು ಎಲ್ಲರೂ ಸ್ವೀಕರಿಸಿದ ಬದುಕಿನಲ್ಲೇ ಎಷ್ಟೊಂದು ದೌರ್ಜನ್ಯಗಳು ಅಡಗಿವೆ ಎಂಬುದನ್ನು ಅವರು ತಿಳಿಸಿದರು. ಆ ಭಾಷಣ ಇಂಟರ್ನೆಟ್‌ನಲ್ಲಿ ಸುಲಭವಾಗಿ ಸಿಗುತ್ತದೆ. ಎಲ್ಲರೂ ಅದನ್ನು ಕೇಳಬೇಕು.

ನಂತರ ಆ ಭಾಷಣವನ್ನು ಮೋದಿ ಮರೆಯಲಿಲ್ಲ. ತಕ್ಷಣವೇ ದೇಶದಲ್ಲಿ ಕೆಲಸಗಳು ಆರಂಭವಾದವು. ಸರಕಾರದ ಆದ್ಯತೆಗಳಲ್ಲಿ ನಾಟಕೀಯ ಬದಲಾವಣೆಗಳಾದವು. ಅವು ಬಡವರು, ಅದರಲ್ಲೂ ವಿಶೇಷವಾಗಿ ಮಹಿಳೆಯರ ಬದುಕಿನಲ್ಲಿ ಆಮೂಲಾಗ್ರ ಬದಲಾವಣೆ ಉಂಟುಮಾಡಿದವು. ಬಡವರ ಬದುಕನ್ನು ಸುಧಾರಣೆ ಮಾಡುವುದು ಕೇಂದ್ರ ಸರಕಾರದ ರಾಷ್ಟ್ರೀಯ ಮಿಷನ್ ಆಯಿತು. ದೇಶದಲ್ಲಿ ಸಾಕಷ್ಟು ಮನೆಗಳಲ್ಲಿ ಟಾಯ್ಲೆಟ್ ಇರಲಿಲ್ಲ ಎಂಬುದು ಗುಟ್ಟೇನೂ ಆಗಿರಲಿಲ್ಲ. ಆದರೆ ಅವರೆಗಿನ ಯಾವ ಸರಕಾರವೂ ಶೌಚಾಲಯ ನಿರ್ಮಾಣವನ್ನು ಕಡ್ಡಾಯವಾದ ಆದ್ಯತೆ ಎಂಬಂತೆ ಪರಿಗಣಿಸಿರಲಿಲ್ಲ. ಏಕೆಂದರೆ ಮನೆಯಲ್ಲಿ ಟಾಯ್ಲೆಟ್ ಇರುವ ಆಗರ್ಭ ಶ್ರೀಮಂತರ ಕೈಯಲ್ಲೇ ಸರಕಾರವಿತ್ತು! ಆದರೆ, ಮೋದಿಯವರು ಭಾಷಣದಲ್ಲಿ ಹೇಳಿದ ನೈರ್ಮಲ್ಯ, ವಿದ್ಯುತ್, ಆರೋಗ್ಯ ವಿಮೆ, ಬ್ಯಾಂಕ್ ಖಾತೆ, ಅಡಮಾನವಿಲ್ಲದೆ ಸುಲಭವಾದ ಬ್ಯಾಂಕ್ ಸಾಲ- ಇವೆಲ್ಲ ಸರಕಾರದ ಕಡತಕ್ಕೆ ಹೋಗಿ ಅಡಗುವ ಭರವಸೆಗಳಷ್ಟೇ ಆಗಲಿಲ್ಲ. ಅವು ಎಲ್ಲರನ್ನೂ ಒಳಗೊಳ್ಳುವ ಭಾರತದ ಚಿಹ್ನೆಯಾಗಿ ಹೊರಹೊಮ್ಮಿದವು. ಬ್ಯಾಂಕ್‌ನೊಳಗೆ ಕಾಲೇ ಇಟ್ಟಿರದ ಲಕ್ಷಾಂತರ ಬಡವರಿಗೆ ಬ್ಯಾಂಕ್ ಖಾತೆಗಳನ್ನು ಮಾಡಿಸುತ್ತೇವೆ ಎಂದು 2014ರ ಆಗಸ್ಟ್ 15ರಂದು ಮೋದಿ ಘೋಷಿಸಿದಾಗ ಪ್ರತಿಪಕ್ಷಗಳು ನಕ್ಕಿದ್ದವು. ಆದರೆ ನಂತರ ನಡೆದಿದ್ದು 'ಜನಧನ್ ಯೋಜನೆ' ಎಂಬ ಕ್ರಾಂತಿ ಮತ್ತು ಪವಾಡ. ಯೋಜನೆ ಜಾರಿಗೊಂಡ ದಿನವೇ 1.5 ಕೋಟಿ ಬ್ಯಾಂಕ್ ಖಾತೆಗಳು ತೆರೆಯಲ್ಪಟ್ಟವು. ಮೋದಿಯವರ ಮೊದಲ ಅವಧಿ ಮುಗಿಯುವ ಹೊತ್ತಿಗೆ ಈ ಸಂಖ್ಯೆ 30 ಕೋಟಿಗೆ ಏರಿಕೆಯಾಗಿತ್ತು.

ಮೋದಿಯವರು ಬಡವರ ಸಬಲೀಕರಣಕ್ಕೆ ಕೈಗೊಂಡ ಅತ್ಯಂತ ವಿಶಿಷ್ಟ ಉಪಕ್ರಮವೆಂದರೆ ಡಿಜಿಟಲ್ ಕ್ರಾಂತಿ. ಅಲ್ಲಿಯವರೆಗೂ ತಂತ್ರಜ್ಞಾನವೆಂಬುದು ಮಧ್ಯಮ ವರ್ಗದ ಸ್ವತ್ತಾಗಿತ್ತು. ಆ ನಂಬಿಕೆ ಬದಲಾಯಿತು. ಬಡವರ ಕೈಗೂ ಡಿಜಿಟಲೀಕರಣದ ಲಾಭ ವರ್ಗಾವಣೆಯಾಯಿತು. ಭಾರತೀಯ ಮಾರುಕಟ್ಟೆ ಕೂಡ ವೈಯಕ್ತಿಕ ತಂತ್ರಜ್ಞಾನವನ್ನು ಕೈಗೆಟಕುವ ದರದಲ್ಲೇ ಇರಿಸಿತು.

ಅಂಕಿಸಂಖ್ಯೆಗಳು ಅರ್ಥಶಾಸ್ತ್ರಜ್ಞರ ಆಡುಂಬೊಲ. ಆದರೆ ಅವು ಅನೇಕ ಸಲ ಬೇರೆ ಬೇರೆ ರೀತಿಯ ಕತೆಗಳನ್ನು ಹೇಳುತ್ತವೆ. 1750ರ ದಶಕದಲ್ಲಿ ವಸಾಹತುಶಾಹಿ ಬ್ರಿಟಿಷರು ಬಂಗಾಳವನ್ನು ನಿಯಂತ್ರಣಕ್ಕೆ ತೆಗೆದುಕೊಂಡು ದೇಶಾದ್ಯಂತ ತಮ್ಮ ರೆಕ್ಕೆಯನ್ನು ಬಿಚ್ಚುವುದಕ್ಕೂ ಮೊದಲು ಭಾರತದಲ್ಲಿ ಜಗತ್ತಿನ ಶೇ.30ರಷ್ಟು ವ್ಯಾಪಾರ ನಡೆಯುತ್ತಿತ್ತು. ಚೀನಾದ ಪಾಲು ಇನ್ನೂ ಸ್ವಲ್ಪ ಜಾಸ್ತಿಯಿತ್ತು. ಆದರೆ ಬ್ರಿಟನ್ನಿನ ಪಾಲು ಶೇ.2ರಷ್ಟಿತ್ತು. 1947ರ ಹೊತ್ತಿಗೆ ಈ ಅಂಕಿ-ಅಂಶಗಳು ಉಲ್ಟಾಪಲ್ಟಾ ಆಗಿದ್ದವು. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಾಗ ಶೇ.70ರಷ್ಟು ಭಾರತೀಯರು, ಅಂದರೆ 25 ಕೋಟಿ ಜನರು, ಬಡತನದ ರೇಖೆಗಿಂತ ಕೆಳಗಿದ್ದರು. ರಂಗರಾಜನ್ ಸಮಿತಿಯ ಅಂದಾಜಿನ ಪ್ರಕಾರ 2014ರ ವೇಳೆಗೆ ಭಾರತದಲ್ಲಿ ಶೇ.38.2ರಷ್ಟು ಜನರು, ಅಂದರೆ ಸುಮಾರು 45 ಕೋಟಿ ಜನರು ಬಡತನದ ರೇಖೆಗಿಂತ ಕೆಳಗಿದ್ದರು. ಇವುಗಳನ್ನು ನೀವು ಅರ್ಥಶಾಸ್ತ್ರಜ್ಞನ ಕಣ್ಣಿನಿಂದ ನೋಡದೆ ಒಬ್ಬ ಮಾನವತಾವಾದಿಯ ಕಣ್ಣಿನಿಂದ ನೋಡಿದರೆ 2014ರ ವೇಳೆಗೆ ಇನ್ನೂ 20 ಕೋಟಿಯಷ್ಟು ಹೆಚ್ಚು ಜನರು ಕಡುಬಡತನದಲ್ಲೇ ಇದ್ದರು. 1947 ಹಾಗೂ ಮೋದಿ ಪ್ರಧಾನಿಯಾದ ಸಮಯಕ್ಕೂ ನಡುವೆ ಇದ್ದ ವ್ಯತ್ಯಾಸವಿದು.

ಕೆಲ ದಿನಗಳ ಹಿಂದಷ್ಟೇ ವಿಶ್ವಬ್ಯಾಂಕ್ ಇತ್ತೀಚಿನ ಅಂಕಿ-ಅಂಶಗಳನ್ನು ನೀಡಿದೆ. 2023ರ ವೇಳೆಗೆ ಬಡತನದ ರೇಖೆಗಿಂತ ಕೆಳಗಿದ್ದ ಭಾರತೀಯರ ಸಂಖ್ಯೆ ಶೇ.2.8ಕ್ಕೆ ಕುಸಿದಿದೆ. ಬಿಪಿಎಲ್ ಮಾನದಂಡವನ್ನು ಬದಲಿಸಿ, ದಿನಕ್ಕೆ 2.15 ಡಾಲರ್ ಬದಲು 3 ಡಾಲರ್ ಗಳಿಸುವವರು ಮಾತ್ರ ಕಡುಬಡವರು ಎಂದು ಮಾನದಂಡವನ್ನು ಪರಿಷ್ಕರಣೆ ಮಾಡಿದ ಮೇಲೂ ಭಾರತದಲ್ಲಿನ ಕಡುಬಡವರ ಸಂಖ್ಯೆ ಈ ಪ್ರಮಾಣಕ್ಕೆ ಕುಸಿದಿದೆ. ಅದು ಹಾಗಿರಲಿ, ಕೋವಿಡ್‌ನ ಹೊಡೆತ ತಿಂದ ಮೇಲೂ ಭಾರತದ ಬಡತನದ ಪ್ರಮಾಣ ಇಷ್ಟು ಕುಸಿದಿದೆ ಎಂಬುದು ಎಲ್ಲರನ್ನೂ ಅಚ್ಚರಿಗೆ ನೂಕಿತ್ತು.

ಪ್ರಜಾಪ್ರಭುತ್ವ ಬಹಳ ಸರಳವಾದ ಪ್ರಶ್ನೆಗಳನ್ನು ಕೇಳುತ್ತದೆ: ಈಗ ಯಾವುದಾದರೂ ಮಗು ಹಸಿದ ಹೊಟ್ಟೆಯಲ್ಲಿ ಮಲಗುತ್ತಿದೆಯಾ? ತಾಯಂದಿರು ಇಂದು ಒತ್ತಡದ ಜತೆಗೆ ಹೋರಾಡುತ್ತಿದ್ದಾರಾ? ದಿನಗೂಲಿಯ ಅಪ್ಪಂದಿರು 2020ರ ಭಾರತದಲ್ಲೂ ತಮ್ಮ ಮನೆಯವರಿಗೆ ಹೊಟ್ಟೆ ತುಂಬಾ ಊಟ ಹಾಕಲು ಪರದಾಡುತ್ತಿದ್ದಾರಾ? ಇವುಗಳಿಗೆ ಉತ್ತರ 'ಇಲ್ಲ'. ಮೋದಿಯವರ ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಯೋಜನೆ ಈ ದೇಶದ ಪ್ರತಿಯೊಬ್ಬರಿಗೂ ಪರಮೋಚ್ಚ ಭದ್ರತೆಯೊಂದನ್ನು ಒದಗಿಸಿದೆ. ಅದು ಆಹಾರ ಭದ್ರತೆ. ದೇಶದ 80 ಕೋಟಿ ಜನರು ಪ್ರತಿ ತಿಂಗಳು ಐದು ಕೆ.ಜಿ. ಗೋಧಿ ಅಥವಾ ಅಕ್ಕಿ ಮತ್ತು ತಮ್ಮಿಷ್ಟದ ಒಂದು ಕೆ.ಜಿ. ಬೇಳೆಕಾಳುಗಳನ್ನು ಪಡೆಯುತ್ತಾರೆ. ಇದು ಜಾಗತಿಕ ಇತಿಹಾಸದಲ್ಲೇ ಅತಿ ದೊಡ್ಡ ಸಾಮಾಜಿಕ ಕಲ್ಯಾಣ ಯೋಜನೆ. ಮೋದಿಯವರ ಪಾಲಿಗೆ ಇದು ಜನರ ಮೂಲಭೂತ ಹಕ್ಕು.

ನಮ್ಮ ದೇಶದಲ್ಲಿ ಆಗಿಹೋದ ಪ್ರತಿಯೊಬ್ಬ ಪ್ರಧಾನಿಯೂ ಬಡತನವನ್ನು ಕಡಿಮೆ ಮಾಡಬೇಕು ಎಂದು ಬಯಸಿದ್ದರು. ಆದರೆ ಎಲ್ಲರೂ ಈ ಜವಾಬ್ದಾರಿಯನ್ನು ಸರಕಾರವೆಂಬ ಬೃಹತ್ ವ್ಯವಸ್ಥೆಯ ಕೈಗೆ ನೀಡಿ ಕುಳಿತುಕೊಂಡಿದ್ದರು. ಆ ಸರಕಾರಿ ವ್ಯವಸ್ಥೆಯು ದೇಶದ ಸಮಗ್ರ ಆರ್ಥಿಕ ಅಭಿವೃದ್ಧಿಯ ಅಲ್ಗಾರಿದಂ ಅನ್ನು ನೆಚ್ಚಿಕೊಂಡು ಕುಳಿತಿತ್ತು. ಹೀಗಾಗಿ ಬಡತನದ ಪ್ರಮಾಣ ಕಡಿಮೆ ಮಾಡುವ ಕನಸು ನನಸಾಗಿರಲೇ ಇಲ್ಲ. ಆದರೂ ದೇಶದಲ್ಲಿ ಬಡತನ ನಿರ್ಮೂಲನೆಯಾಗಿದೆ ಎಂದು ಪತ್ರಿಕಾಗೋಷ್ಠಿಗಳಲ್ಲಿ ಬಡಾಯಿ ಕೊಚ್ಚಿಕೊಂಡು, 'ಟ್ರಿಕಲ್ ಡೌನ್ ಥಿಯರಿ' ಎಂದೆಲ್ಲಾ ನಾಯಕರು ಮಾತನಾಡುತ್ತಿದ್ದರು. ಮಜಾ ಏನು ಅಂದರೆ, ಅವರಿಗೆ ಟ್ರಿಕಲ್ ಪದದ ಅರ್ಥವೇ ಗೊತ್ತಿರಲಿಲ್ಲ.

ಒಂದರ್ಥದಲ್ಲಿ ಅವರ ಟ್ರಿಕಲ್ ಡೌನ್ ಥಿಯರಿ ನಿಜವಾಗಿತ್ತು ಅನ್ನಿ. ಅದು ಹೇಗೆ? ಶ್ರೀಮಂತರಿಗೆ ನದಿ ಸಿಕ್ಕರೆ, ಮಧ್ಯಮ ವರ್ಗದವರಿಗೆ ತೊರೆ, ಬಡವರಿಗೆ ಹನಿಯೇ (ಟ್ರಿಕಲ್) ಸಿಗುತ್ತಿತ್ತು! ಯಾರೂ ಇದನ್ನು ಬಿಡಿಸಿ ಹೇಳಲು ಹೋಗಲಿಲ್ಲ. ಆದರೆ, ಒಳಗುಟ್ಟು ಏನೆಂದರೆ, ಯಾರಿಗೆ ಎಷ್ಟು ಯೋಗ್ಯತೆಯಿದೆಯೋ ಅಷ್ಟು ಸಿಗುತ್ತದೆ ಬಿಡು ಎಂದು ಎಲ್ಲರೂ ಸುಮ್ಮನಿದ್ದರು. ಬಡವರು ಅವರಲ್ಲಿರುವ ಅಜ್ಞಾನ ಹಾಗೂ ಮೂರ್ಖತನದಿಂದಾಗಿ ಬಡವರಾಗಿ ಇರುವುದಕ್ಕೇ ಲಾಯಕ್ಕು ಎಂಬುದು ಬಾಟಮ್ ಲೈನ್ ಆಗಿತ್ತು. ಅವರ ಅಸ್ತಿತ್ವ ಅವರ ಬದುಕಿನ ಗುಣಮಟ್ಟದ ಆಧಾರದಲ್ಲಿ ನಿರ್ಧಾರವಾಗುವುದರ ಬದಲು ವರ್ಷದಿಂದ ವರ್ಷಕ್ಕೆ ಆದಾಯದಲ್ಲಿ ಆಗಬಹುದಾದ ಯಃಕಶ್ಚಿತ್ ಏರಿಕೆಯಿಂದ ಆಗುತ್ತಿತ್ತು. ಜನರು ಹಿಂದೆ ಇದ್ದುದಕ್ಕಿಂತ ಈಗ ಸ್ವಲ್ಪ ಚೆನ್ನಾಗಿದ್ದಾರೆ ಅಂದರೆ ಎಲ್ಲವೂ ಸುಭಿಕ್ಷವಾಗಿದೆ ಎಂದು ಹೇಳಿಬಿಡುತ್ತಿದ್ದರು. 2014ರವರೆಗೂ ದೇಶದಲ್ಲಿ ಲಕ್ಷಾಂತರ ಮಹಿಳೆಯರಿಗೆ ಸರಿಯಾದ ನೈರ್ಮಲ್ಯ ವ್ಯವಸ್ಥೆ ಇರಲಿಲ್ಲ. ಅದಕ್ಕಾಗಿ ದೇಶದ ಯಾವ ಅಧಿಕಾರಸ್ಥ ಶ್ರೀಮಂತರೂ ನಿದ್ದೆಗೆಟ್ಟು ಯೋಚಿಸಿರಲಿಲ್ಲ. ಅರ್ಧ ಬ್ರೆಡ್ ಕೊಟ್ಟು ಎಲ್ಲರನ್ನೂ ಸಮಾಧಾನಪಡಿಸುವ ಕಾರ್ಯಕ್ರಮವೇ ಸದಾ ಜಾರಿಯಲ್ಲಿತ್ತು. ಜನರು ಕೂಡ, ಪೂರ್ತಿ ಬ್ರೆಡ್ ಸಿಗದಿದ್ದರೂ ಅರ್ಧವಾದರೂ ಸಿಗುತ್ತಿದೆಯಲ್ಲ ಎಂದು ಸಮಾಧಾನ ಮಾಡಿಕೊಳ್ಳುತ್ತಿದ್ದರು. ಮಕ್ಕಳಿಗೆ ಶಿಕ್ಷಣವೇ ಇಲ್ಲದಿರುವುದಕ್ಕಿಂತ ಅರೆಬರೆ ಶಿಕ್ಷಣವಾದರೂ ಇದೆಯಲ್ಲ ಎಂದು ಸಮಾಧಾನ ಮಾಡಲಾಗುತ್ತಿತ್ತು. ಜನರೂ ಇದಕ್ಕೆಲ್ಲ ಹೊಂದಿಕೊಂಡು ಸುಮ್ಮನಿದ್ದರು.

ಆದರೆ ವ್ಯವಸ್ಥೆಯ ಅಣಕವನ್ನು ಸರಿಪಡಿಸಲೇಬೇಕಲ್ಲ. ಪ್ರಜಾಪ್ರಭುತ್ವದಲ್ಲಿ ಸರಕಾರವನ್ನು ಜನರು ನಡೆಸುವುದಿಲ್ಲವಾದರೂ ಅದು ಜನರ ಮತ್ತು ಜನರಿಗಾಗಿ ಇರುವ ಸರಕಾರವಾಗಬೇಕು. ಇಲ್ಲದಿದ್ದರೆ ನೀವು ಮರುಆಯ್ಕೆ ಆಗುವುದಿಲ್ಲ. ಆಡಳಿತ ಚೆನ್ನಾಗಿರಬೇಕು ಎಂಬ ಅತಿದೊಡ್ಡ ಒತ್ತಡ ಅಥವಾ ಬೇಡಿಕೆ ಬರುವುದೇ ಜನರಿಂದ. ಆದರೆ ಅವರು ಬಹಳ ಕಡಿಮೆ ದಂಗೆಯೇಳುತ್ತಿದ್ದುದು ಏಕೆ? ಹಾಗೆ ಮಾಡುವುದು ಮಾರಣಾಂತಿಕವಾಗುತ್ತದೆ ಎಂದು ವಾದಿಸಬಹುದು. ಪಾಶ್ಚಿಮಾತ್ಯ ದೇಶಗಳ ಓರಿಯೆಂಟಲಿಸ್ಟ್‌ಗಳು ತಮ್ಮಲ್ಲಿನ ಆರ್ಥಿಕ ದಬ್ಬಾಳಿಕೆಯನ್ನು ಸಮರ್ಥಿಸಿಕೊಂಡಿದ್ದೇ ಹಾಗೆ. ಪೂರ್ವದ ದೇಶಗಳನ್ನು ತೋರಿಸಿ, 'ನೋಡಿ, ಅಲ್ಲಿ ಎಷ್ಟೊಂದು ಅಧ್ವಾನಗಳಿವೆ! ನಾವು ನೋಡಿ, ಎಷ್ಟು ಚೆನ್ನಾಗಿದ್ದೇವೆ' ಎಂದು ಜನರಿಗೆ ಬೆಣ್ಣೆ ಹಚ್ಚುವ ಕೆಲಸವನ್ನೇ ಅವರು ಮಾಡಿದ್ದರು. ಪೂರ್ವ ದೇಶಗಳ ಸಾಮಾಜಿಕ ವ್ಯವಸ್ಥೆ, ಸಂಸ್ಕೃತಿ, ಧರ್ಮ ಎಲ್ಲವೂ ಕನಿಷ್ಠ ಎಂಬ ಭ್ರಮೆಯನ್ನು ಅವರು ಬಿತ್ತಿದ್ದರು. ಹೀಗಾಗಿ ಬ್ರಿಟಿಷ್ ಓರಿಯೆಂಟಲಿಸ್ಟ್‌ಗಳು ಹಿಂದೂ ದೇವರನ್ನು ರಾಕ್ಷಸರಂತೆ ಬಿಂಬಿಸಿದ್ದರು. ಸಾವಿರಾರು ವರ್ಷಗಳ ಹಳೆಯ ಶ್ರೀಮಂತ ನಾಗರಿಕತೆ ಹಾಗೂ ಹಿಂದೂ ದೇವಸ್ಥಾನಗಳ ವಾಸ್ತುಶಿಲ್ಪವನ್ನು ನೋಡಿ ಅವರು ಮೂಕವಿಸ್ಮಿತರಾಗಿದ್ದರೂ ಹಿಂದೂ ದೇವರ ಅವಹೇಳನವನ್ನು ಅವರು ನಿಲ್ಲಿಸಲಿಲ್ಲ. ಅದೇ ರೀತಿ, ಮುಸ್ಲಿಮರನ್ನು ಹಿಂಸಾಚಾರಪ್ರಿಯರು ಎಂದು ಬಿಂಬಿಸಿದರು. ಚೀನಿಯರನ್ನು ಅಫೀಮು ತಿನ್ನುವವರು ಎಂದು ಬಿಂಬಿಸಿದರು. ಅದೇ ವೇಳೆ, ತಮ್ಮ ದೇಶದಲ್ಲಿ ನಡೆಯುವ ಸಾಮೂಹಿಕ ಹತ್ಯೆ, ಬರಗಾಲದಂಥ ಸಮಯದಲ್ಲಿ ಪರೋಕ್ಷವಾಗಿ ನಡೆಸುವ ಹತ್ಯಾಕಾಂಡಗಳಿಗೆ ಇತಿಹಾಸದ ಪುಸ್ತಕಗಳಲ್ಲಿ ಯಾರಿಗೂ ಕಾಣದಂತೆ ಇಷ್ಟೇ ಇಷ್ಟು ಜಾಗ ಕೊಟ್ಟರು. ಆದರೂ ಸೆನ್ಸಾರ್‌ಶಿಪ್‌ನಿಂದ ತಪ್ಪಿಸಿಕೊಂಡು ಅಂಥ ವಿಷಯಗಳು ಮಾಧ್ಯಮಗಳಲ್ಲಿ ಉಳಿದುಬಿಟ್ಟರೆ ಜನರ ನೆನಪಿನಿಂದಲೇ ವ್ಯವಸ್ಥಿತವಾಗಿ ಅಳಿಸಿಹಾಕಿದರು.

1950ರ ದಶಕದಲ್ಲಿ ಭಾರತದ ಬಡವರಿಗೆ ಆಶಾವಾದವಿತ್ತು. ಹೀಗಾಗಿ 1967ರ ಲೋಕಸಭೆ ಚುನಾವಣೆಯಲ್ಲಿ ಭ್ರಮೆಯಿಂದ ಹೊರಬಂದು ಸೇಡು ತೀರಿಸಿಕೊಂಡರು. 1971ರಲ್ಲಿ ಇಂದಿರಾ ಗಾಂಧಿ 'ಗರೀಬಿ ಹಟಾವೋ' ಘೋಷಣೆಯನ್ನು ಚುನಾವಣೆಯ ಪ್ರಮುಖ ಅಜೆಂಡಾ ಮಾಡಿದರು. ಆದರೆ ಅವರು ಅಂದುಕೊಂಡಷ್ಟು ಕೆಲಸ ಮಾಡಲು ಆಗಲಿಲ್ಲ. 1980 ಮತ್ತು 1990ರ ದಶಕದಲ್ಲಿ ಭಾರತದ ಏಕತೆಗೆ ಬಂದೊದಗಿದ ಸವಾಲಿನಿಂದಾಗಿ ಆರ್ಥಿಕತೆ ಹಳ್ಳ ಹಿಡಿಯಿತು. 1990ರ ದಶಕದ ಉತ್ತರಾರ್ಧದಲ್ಲಿ ದೇಶದ ಉಳಿವಿಗಾಗಿ ಜಾರಿಗೆ ತಂದ ಆರ್ಥಿಕ ಸುಧಾರಣೆಗಳು ಅಸಮಾನ ಫಲ ನೀಡಿದವು. ಆದರೆ, ಶತಮಾನದ ಕೊನೆಗೆ ನೆಪಗಳು, ಅಡ್ಜಸ್ಟ್‌ಮೆಂಟುಗಳೆಲ್ಲ ಮುಗಿದಿದ್ದವು. ನಂತರವಂತೂ ಪ್ರಧಾನಿ ನರೇಂದ್ರ ಮೋದಿಯವರು ಭಾರತೀಯರನ್ನು ಬಡತನದ ಬೇಗೆಯಿಂದ ಮೇಲೆತ್ತದೆ ಇದ್ದಿದ್ದರೆ ದೇಶದಲ್ಲಿ ಅಲ್ಲೋಲಕಲ್ಲೋಲವೇ ಆಗುತ್ತಿತ್ತು.

ಚೀನಾದಲ್ಲಿ ಮಾವೋ ಜೆಡಾಂಗ್ ನೇತೃತ್ವದಲ್ಲಿ ದೇಶವನ್ನು ಏಕಾಏಕಿ ಅಭಿವೃದ್ಧಿಗೊಳಿಸಲು ಜಾರಿಗೆ ತಂದ 'ಎತ್ತರ ಜಿಗಿತದ' ಆರ್ಥಿಕ ನೀತಿಗಳು 5.5 ಕೋಟಿ ಜನರ ಸಾವು ಹಾಗೂ ಆರ್ಥಿಕ ದುರಂತದಲ್ಲಿ ಕೊನೆಗೊಂಡಿತ್ತು. ಏಕೆಂದರೆ ಅವರ ನೀತಿಗಳು ದೇಶದಲ್ಲಿ ಹಾಲಿ ಇದ್ದ ಎಲ್ಲ ವ್ಯವಸ್ಥೆಯನ್ನೂ ತಲೆಕೆಳಗು ಮಾಡಿದ್ದವು. ನಂತರ ಡೆಂಗ್ ಕ್ಸಿಯಾಪಿಂಗ್ ಬಂದು ರಿಪೇರಿ ಮಾಡಬೇಕಾಯಿತು. ಏಕಾಏಕಿ ಜಿಗಿಯುವುದಕ್ಕಿಂತ ವೇಗವಾಗಿ ನಡೆಯುವುದು ಒಳ್ಳೆಯದು. ಆಗ ನಿಮ್ಮ ಕಾಲು ನೆಲದ ಮೇಲೇ ಇರುತ್ತದೆ. ಹೀಗಾಗಿ ಭಾರತ ಜಿಗಿಯುವುದರ ಬದಲು ನಡೆಯತೊಡಗಿತು. ಆದರೆ ಅದರ ವೇಗ ಕೆಲವೊಮ್ಮೆ ಜೋರಾಗಿರುತ್ತಿತ್ತು, ಕೆಲವೊಮ್ಮೆ ನಿಧಾನವಾಗುತ್ತಿತ್ತು ಮತ್ತು ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೀತಿ ಇರುತ್ತಿತ್ತು. ಹೀಗಾಗಿ ಅಸಮಾನತೆ ಇನ್ನೂ ನಿವಾರಣೆಯಾಗಿಲ್ಲ. ಅದು ಆಗುವುದೂ ಇಲ್ಲ. ಪುಸ್ತಕಗಳಲ್ಲಿರುವುದನ್ನು ಬಿಟ್ಟರೆ ರಾಮರಾಜ್ಯ ಎಂಬುದು ಇಲ್ಲ. ಆದರೂ ಭಾರತವೀಗ ಆತ್ಮವಿಶ್ವಾಸದಿಂದ ಒಂದು ಮಾತನ್ನಂತೂ ಹೇಳಬಹುದು: 'ಬಡವರು ಬೇರೆ ದೇಶದವರಲ್ಲ!'

(ಲೇಖಕರು ಹಿರಿಯ ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:244

ಸಮಾಚಾರ ಸಣ್ಣದಲ್ಲ

14 ಕೋಟಿ ಸದಸ್ಯರ ಬಿಜೆಪಿ ವಿಶ್ವದ ನಂ.1

ವಿಶಾಖಪಟ್ಟಣಂ: ಭಾರತೀಯ ಜನತಾ ಪಕ್ಷ 14 ಕೋಟಿ ಸದಸ್ಯರನ್ನು ಹೊಂದಿದ್ದು, ವಿಶ್ವದಲ್ಲೇ ಅತಿ ದೊಡ್ಡ ರಾಜಕೀಯ ಪಕ್ಷವಾಗಿ ಗುರುತಿಸಿಕೊಂಡಿದೆ ಎಂದು ಪಕ್ಷದ ರಾಷ್ಟ್ರಾಧ್ಯಕ್ಷ ಜಗತ್ ಪ್ರಕಾಶ್ ನಡ್ಡಾ ಭಾನುವಾರ ವಿಶಾಖಪಟ್ಟಣಂನಲ್ಲಿ ಹೇಳಿದ್ದಾರೆ. 14 ಕೋಟಿ ಸದಸ್ಯರಲ್ಲಿ 2 ಕೋಟಿ ಮಂದಿ ಸಕ್ರಿಯ ಕಾರ್ಯಕರ್ತರೇ ಆಗಿದ್ದಾರೆ. ದೇಶದ 20 ರಾಜ್ಯಗಳಲ್ಲಿ ಎನ್‌ಡಿಎ ಸರಕಾರ, 13 ರಾಜ್ಯಗಳಲ್ಲಿ ಬಿಜೆಪಿ ಸರಕಾರವಿದೆ. ಪಕ್ಷವು ಸದ್ಯ 240 ಲೋಕಸಭಾ ಸದಸ್ಯರು, 1500 ಶಾಸಕರು, 170ಕ್ಕೂ ಅಧಿಕ ವಿಧಾನಪರಿಷತ್ ಸದಸ್ಯರನ್ನು ಹೊಂದಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ 3ನೇ ಅವಧಿಯಲ್ಲಿ ದೇಶದ ಆಡಳಿತ ನಡೆಸುತ್ತಿದೆ. ದೇಶವನ್ನು ನಿರಂತರ ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುತ್ತಿದೆ ಎಂದು ಪಕ್ಷದ ಸಮಾವೇಶದಲ್ಲಿ ಹೇಳಿದ್ದಾರೆ.

ಪಿಎಫ್‌ಐ ಬಿಹಾರ ಅಧ್ಯಕ್ಷ ನದ್ವಿ ಬಂಧಿಸಿದ ಎನ್‌ಐಎ

ದೆಹಲಿ: ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯ(ಪಿಎಫ್‌ಐ) ಬಿಹಾರ ಘಟಕ ಅಧ್ಯಕ್ಷನಾಗಿದ್ದ ಕಟಿಹಾರ ಜಿಲ್ಲೆ ಹಸನ್‌ಗಂಜ್ ನಿವಾಸಿ ಮಹ್ಬೂಬ್ ಆಲಂ ಅಲಿಯಾಸ್ ಮಹ್ಬೂಬ್ ಆಲಂ ನದ್ವಿಯನ್ನು 2022ರ ಫುಲ್ವಾರಿ ಷರೀಫ್ ಷಡ್ಯಂತ್ರ ಪ್ರಕರಣದಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬಂಧಿಸಿದೆ. 2047ರ ವೇಳೆಗೆ ಭಾರತವನ್ನು ಪೂರ್ಣ ಇಸ್ಲಾಮೀಕರಣಗೊಳಿಸುವ ಉದ್ದೇಶದಿಂದ ಪಿಎಫ್‌ಐ ಸದಸ್ಯರು ಕೆಲಸ ಮಾಡುತ್ತಿದ್ದರು. ಧರ್ಮಗಳ ನಡುವೆ ಶತ್ರುತ್ವ ಬಿತ್ತುವುದು, ಜನರಲ್ಲಿ ಭಯದ ವಾತಾವರಣ ಸೃಷ್ಟಿಸುವುದು ಮತ್ತು ದೇಶವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದರು. ಈ ಪ್ರಕರಣದಲ್ಲಿ ಕಿಶನ್‌ಗಂಜ್‌ನಲ್ಲಿ ಶನಿವಾರ ಆಲಂ ನದ್ವಿಯನ್ನು ಬಂಧಿಸಲಾಗಿದೆ ಎಂದು ಎನ್‌ಐಎ ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಕೇರಳ ಹಣದುಬ್ಬರ ದೇಶದಲ್ಲೇ ಗರಿಷ್ಠ

ತಿರುವನಂತಪುರಂ: ದೇಶದಲ್ಲಿನ ರಾಜ್ಯಗಳ ಹಣದುಬ್ಬರ ಪಟ್ಟಿಯಲ್ಲಿ ಕೇರಳ ಸತತ 8ನೇ ತಿಂಗಳು ಅಗ್ರಸ್ಥಾನದಲ್ಲಿದೆ. ದೇಶದಲ್ಲೇ ಅತಿ ಹೆಚ್ಚು ಹಣದುಬ್ಬರದ ಸಂಕಷ್ಟಕ್ಕೆ ಕೇರಳ ಸಿಲುಕಲು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇತೃತ್ವದ ಸರಕಾರದ ದುರಾಡಳಿತವೇ ಕಾರಣ ಎಂದು ಬಿಜೆಪಿ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ಟೀಕಿಸಿದ್ದಾರೆ. ಕೇಂದ್ರ ಅಂಕಿಅಂಶ ಸಚಿವಾಲಯ ಪ್ರಕಾರ ಆಗಸ್ಟ್‌ನಲ್ಲಿ ಕೇರಳದ ಹಣದುಬ್ಬರ ಶೇ.9.4ರಷ್ಟಿದೆ. ರಾಷ್ಟ್ರ ಮಟ್ಟದ ಹಣದುಬ್ಬರ ಸರಾಸರಿ ಶೇ.2.07ಕ್ಕೆ ಇಳಿಕೆಯಾಗಿದ್ದರೆ ಕೇರಳದ ಜನರು ಹೆಚ್ಚಿನ ಹಣದುಬ್ಬರ ಎದುರಿಸುತ್ತಿದ್ದಾರೆ. ಇದು ರಾಜ್ಯ ಸರಕಾರದ ಅಸಾಮರ್ಥ್ಯಕ್ಕೆ ಸಾಕ್ಷಿ ಎಂದು ರಾಜೀವ್ ಚಂದ್ರಶೇಖರ್ ಟೀಕಿಸಿದ್ದಾರೆ.

4 ಬಾರಿ ಮೇಘಾಲಯ ಸಿಎಂ ಲಪಾಂಗ್ ನಿಧನ

ಶಿಲ್ಲಾಂಗ್: ಮೇಘಾಲಯ ರಾಜ್ಯದಲ್ಲಿ 4 ಬಾರಿ ಮುಖ್ಯಮಂತ್ರಿಯಾಗಿದ್ದ ಮುತ್ಸದ್ದಿ ರಾಜಕಾರಣಿ ಮತ್ತು 'ಮಾಹೇ' ಎಂದೇ ಎಲ್ಲರಿಂದ ಪ್ರೀತಿಯಿಂದ ಕರೆಸಿಕೊಳ್ಳುತ್ತಿದ್ದ 93 ವರ್ಷದ ಡೊನ್ವಾ ಡೆತ್ವೆಲ್ಸನ್ ಲಪಾಂಗ್(ಡಿ.ಡಿ.ಲಪಾಂಗ್) ವಯೋಸಹಜ ಕಾಯಿಲೆಗಳಿಂದಾಗಿ ಆಸ್ಪತ್ರೆಯಲ್ಲಿ ಶನಿವಾರ ನಿಧನರಾದರು. ಪತ್ನಿ ಅಮೆಥಿಸ್ಟ್ ಲಿಂಡಾ ಜೋನ್ಸ್ ಬ್ಲಾ ಮತ್ತು ಇಬ್ಬರು ಮಕ್ಕಳು ಇದ್ದಾರೆ. ಸಕಲ ಸರಕಾರಿ ಗೌರವಗಳೊಂದಿಗೆ ಸೋಮವಾರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ನಾಯಿಕಡಿತ: ಒಂದೇ ದಿನ 67 ಪ್ರಕರಣ

ಮುಂಬೈ: ಮಹಾರಾಷ್ಟ್ರದ ಥಾಣೆ ಜಿಲ್ಲೆಯ ಕಲ್ಯಾಣ ಮತ್ತು ಡೊಂಬಿವಿಲಿ ಪ್ರದೇಶಗಳಲ್ಲಿ ಶನಿವಾರ ಒಂದೇ ದಿನ 67 ಮಂದಿಗೆ ಬೀದಿ ನಾಯಿಗಳು ಕಚ್ಚಿವೆ. ಇದರಿಂದ ಸ್ಥಳೀಯರಲ್ಲಿ ಆತಂಕ ಹೆಚ್ಚಿದ್ದು, ಬೀದಿಗಳಲ್ಲಿ ನಡೆದುಕೊಂಡು ಹೋಗುವುದಕ್ಕೆ ಭಯಪಡುವಂತಾಗಿದೆ. ಈ ಬಗ್ಗೆ ಸುದ್ದಿಸಂಸ್ಥೆ ಜತೆ ಭಾನುವಾರ ಮಾತನಾಡಿದ ಎಂದು ಆರೋಗ್ಯಾಧಿಕಾರಿ ಡಾ. ದೀಪಾ ಶುಕ್ಲಾ, ಕಲ್ಯಾಣ, ಡೊಂಬಿವಿಲಿ ವ್ಯಾಪ್ತಿಯಲ್ಲಿ ಬೀದಿನಾಯಿಗಳ ಕಾಟ ಹೆಚ್ಚಾಗಿದೆ. ನಾಯಿಗಳಿಂದ ಕಡಿಸಿಕೊಂಡವರಿಗೆ ರೇಬೀಸ್ ನಿರೋಧಕ ಲಸಿಕೆ ನೀಡಲಾಗಿದೆ. ಬೀದಿನಾಯಿ ಸಂಖ್ಯೆ ನಿಯಂತ್ರಿಸಲು ಸ್ಥಳೀಯ ಪಾಲಿಕೆ ತಿಂಗಳಲ್ಲಿ ಸಾವಿರ ಬೀದಿನಾಯಿಗಳಿಗೆ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ನಡೆಸುತ್ತಿದೆ ಎಂದು ಹೇಳಿದ್ದಾರೆ.

{ಅಮಿತ್ ಶಾ} ಕೇಂದ್ರ ಗೃಹ ಸಚಿವ

ಸೆ.14 ಹಿಂದಿ ದಿನ. ಹಿಂದಿ ದೇಶದ ಪ್ರಮುಖ ಭಾಷೆ. ಅದು ಇತರೆ ಭಾರತೀಯ ಭಾಷೆಗಳಿಗೆ ಎಂದೂ ಪ್ರತಿಸ್ಪರ್ಧಿಯಾಗಿಲ್ಲ, ಆಗುವುದೂ ಇಲ್ಲ. ಬದಲಾಗಿ ಎಲ್ಲಾ ಭಾರತೀಯ ಭಾಷೆಗಳಿಗೂ ಆಪ್ತ ಸ್ನೇಹಿತನೇ ಆಗಿದೆ. ಅದು ಬೇರಾವುದೇ ಭಾಷೆಗಳ ಜತೆಗೂ ಹಿಂದಿ ಭಾಷೆ ಸಂಘರ್ಷಕ್ಕೆ ಇಳಿಯುವುದಿಲ್ಲ. ಹಿಂದಿ ಜತೆ ಹೊಂದಿಕೊಂಡಿರುವುದಕ್ಕೆ ಗುಜರಾತ್ ರಾಜ್ಯವೇ ಸಾಕ್ಷಿ.



ಬೃಹತ್ ಪ್ರತಿಭಟನೆಯಲ್ಲಿ ಲಕ್ಷಕ್ಕೂ ಅಧಿಕ ಜನರು ಭಾಗಿ | ಪ್ರತಿಭಟನೆ ವಿರೋಧಿ ಗುಂಪಿನಿಂದ ಪೊಲೀಸರಿಗೆ ಹಲ್ಲೆ
ಹಿಂಸಾಚಾರ ನಡೆಸಲೆಂದೇ ಸಂಚು ಹೂಡಿದ ಆರೋಪ | ಗುಂಪಿನ ಹಲ್ಲೆಯಿಂದ 26 ಪೊಲೀಸರಿಗೆ ಗಾಯ

ವಲಸೆಗಾರರ ವಿರುದ್ಧ ಲಂಡನ್ ಪ್ರತಿಭಟನೆ



ಲಂಡನ್: ಯುನೈಟೆಡ್ ಕಿಂಗ್ಡಂ (ಯುಕೆ) ಇತಿಹಾಸದಲ್ಲೇ ಅತಿದೊಡ್ಡ ಬಲ ಪಂಥೀಯ ಪ್ರತಿಭಟನೆ ಲಂಡನ್ ಮಹಾ ನಗರದಲ್ಲಿ ಶನಿವಾರ ಜರುಗಿದೆ. 'ಯುನೈಟ್ ದಿ ಕಿಂಗ್ಡಮ್' ಹೆಸರಲ್ಲಿ ಪ್ರತಿಭಟನೆ ಆಯೋಜಿಸಲಾಗಿತ್ತು.

ಬಲಪಂಥೀಯ ಹೋರಾಟಗಾರ ಟಾಮಿ ರಾಬಿನ್ಸನ್ 'ಯುನೈಟ್ ದಿ ಕಿಂಗ್ಡಮ್' ಎಂದು ಕರೆ ನೀಡಿದ್ದಕ್ಕೆ ಸ್ಪಂದಿಸಿ ಒಂದೂವರೆ ಲಕ್ಷ ಬ್ರಿಟಿಷ್ ಪ್ರಜೆಗಳು ಲಂಡನ್‌ನಲ್ಲಿ ರಸ್ತೆಗಿಳಿದು, ವಲಸೆಗಾರರ ಮತ್ತು ವಲಸೆ ನೀತಿ ವಿರುದ್ಧ ಬೃಹತ್ ಪ್ರತಿಭಟನೆ ನಡೆಸಿದರು. ಪ್ರತಿಭಟನಾಕಾರರು ಇಂಗ್ಲೆಂಡ್ ಮತ್ತು ಗ್ರೇಟ್ ಬ್ರಿಟನ್ ಧ್ವಜಗಳನ್ನ ಹಿಡಿದು, ವೆಸ್ಟಿನ್‌ಸ್ಟಾರ್ ಕಡೆಗೆ ಮೆರವಣಿಗೆ ಹೊರಟಿದ್ದರು. 1,000ಕ್ಕೂ ಹೆಚ್ಚು ಪೊಲೀಸರ ಮೆರವಣಿಗೆಯ ಬಂದೋಬಸ್ತ್‌ಗೆ ನಿಯೋಜಿತರಾಗಿದ್ದರು.

ಪ್ರತಿಭಟನೆಗೆ ಕಾರಣ: ಬ್ರಿಟನ್ನ ಗಡಿಗಳನ್ನು ಬಲಪಡಿಸುವುದು ಮತ್ತು ಅಕ್ರಮ ವಲಸೆ ನಿಲ್ಲಿಸಬೇಕೆಂಬುದು ಯುನೈಟ್ ದಿ ಕಿಂಗ್ಡಮ್ ಪ್ರತಿಭಟನೆಗೆ ಮುಖ್ಯ ಕಾರಣ. ಹಾಗಾಗಿಯೇ ಮೂಲ ಬ್ರಿಟನ್ ಪ್ರಜೆಗಳು ಇಂಗ್ಲಿಷ್ ಡಿಫೆನ್ಸ್ ಲೀಗ್ ಸಂಸ್ಥಾಪಕ. ಬ್ರಿಟನ್‌ನ ಪ್ರಭಾವಶಾಲಿ ಬಲಪಂಥೀಯ ನಾಯಕ ಟಾಮಿ ರಾಬಿನ್ಸನ್ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಸಿದ್ದಾರೆ.

ಹಿಂಸಾಚಾರಕ್ಕಿಳಿದ ಪ್ರತ್ಯೇಕ ಗುಂಪು

ಬ್ರಿಟಿಷ್ ಪ್ರಜೆಗಳ ವಲಸೆ ವಿರೋಧಿ ಪ್ರತಿಭಟನೆಗೆ ವಿರುದ್ಧವಾಗಿ ವಲಸೆಗಾರ ಸಮುದಾಯದ ದೊಡ್ಡ ಗುಂಪೊಂದು ಪ್ರತಿಭಟನಾಕಾರರ ಮೇಲೆ ಹಲ್ಲೆಗೆ ಹೊಂಚು ಹಾಕಿತ್ತು. ಅದನ್ನು ಪೊಲೀಸರು ಯಶಸ್ವಿಯಾಗಿ ತಡೆದರು. ಆದರೆ, ಆ ಗುಂಪು ಪೊಲೀಸರ ಮೇಲೆಯೇ ಹಲ್ಲೆ ಮಾಡಿದೆ. ಕೆಲವರು ಖಾಲಿ ಬಾಟಲಿಗಳನ್ನು ಪೊಲೀಸರ ಮೇಲೆ ಎಸೆದಿದ್ದಾರೆ. ಇದರಿಂದ ಪೈಕಿ 26 ಮಂದಿ ಗಾಯಗೊಂಡಿದ್ದಾರೆ. ಹಿಂಸೆ ಉದ್ದೇಶದಿಂದಲೇ ಬಂದಿದ್ದವರು ನಡೆಸಿದ ಹಲ್ಲೆ ಅದೆಷ್ಟು ತೀವ್ರವಾಗಿತ್ತು ಎಂದರೆ, ಅವರ ಹೊಡೆತಕ್ಕೆ ಕೆಲ ಪೊಲೀಸರಿಗೆ ಹಲ್ಲು ಮುರಿದಿದೆ, ಮೂಗು ಗಾಯವಾಗಿದೆ, ಕೆಲವರಿಗೆ ಬೆನ್ನು ಮೂಳೆಗೆ ಪೆಟ್ಟು ಬಿದ್ದಿದೆ.

ವಲಸೆ ವಿರೋಧಿ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ಹಲ್ಲೆ ನಡೆಸಿ ಹಿಂಸಾಚಾರಕ್ಕೆ ಪ್ರಚೋದನೆ ನೀಡಲೆಂದೇ ಈ ಗುಂಪು ಪ್ರತಿಭಟನಾ ಸ್ಥಳದತ್ತ ಬಂದಿತ್ತು. ಆದರೆ ಅವರನ್ನು ದೂರದಲ್ಲೇ ತಡೆದೆವು. ಆದರೆ ಆ ಗುಂಪಿನ ಜನರು ಪೊಲೀಸ್ ಮೇಲೆಯೇ ಹಲ್ಲೆ ನಡೆಸಿದ್ದರಿಂದ 26 ಪೊಲೀಸರು ಗಾಯಗೊಂಡರು. ಪೊಲೀಸರ ಮೇಲೆ ಹಲ್ಲೆ ನಡೆಸಿದವರಲ್ಲಿ 25 ಜನರನ್ನು ಬಂಧಿಸಲಾಗಿದೆ ಎಂದು ಸಹಾಯಕ ಪೊಲೀಸ್ ಆಯುಕ್ತ ಮ್ಯಾಟ್ ಟ್ವಿಸ್ಟ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. 'ಸ್ಟ್ಯಾಂಡ್ ಅಪ್ ಟು ರೇಸಿಸಂ' ಹೆಸರಲ್ಲಿ 5,000 ಜನರ ಗುಂಪು ರಾಬಿನ್ಸನ್ ನೇತೃತ್ವದ ಪ್ರತಿಭಟನೆಗೆ ತಡೆಯೊಡ್ಡಲು ಯತ್ನಿಸಿತು. ಈ ಗುಂಪನ್ನು ಬ್ರಿಟನ್ ಸಂಸದೆ ಜಾರಾ ಸುಲ್ತಾನಾ ಬೆಂಬಲಿಸಿದ್ದರು.

ಬ್ರಿಟನ್ ವಲಸೆಗಾರರಲ್ಲಿ ಮುಸ್ಲಿಮರ ಸಂಖ್ಯೆಯೇ ಅತ್ಯಧಿಕ

2025
ಮೇನಲ್ಲಿ 'ಬ್ರಿಟಿಷ್ ಮುಸ್ಲಿಂ ಇನ್ ನಂಬರ್ಸ್ ಸೆನ್ಸಸ್' ಗಣತಿ ನಡೆದಿದ್ದು, ಅದರ ಪ್ರಕಾರ ಯುನೈಟೆಡ್ ಕಿಂಗ್ಡಂನಲ್ಲಿ ಸದ್ಯ 45 ಲಕ್ಷ ಮುಸ್ಲಿಮರಿದ್ದಾರೆ. ದೇಶದ ಒಟ್ಟು ಜನಸಂಖ್ಯೆಯ ಶೇ.6.5ರಷ್ಟಿದ್ದಾರೆ.

2021
ಜನಗಣತಿ ಪ್ರಕಾರ, ಬ್ರಿಟನ್‌ನಲ್ಲಿನ ವಲಸೆಗಾರರಲ್ಲಿ ಹಿಂದೂಗಳ ಸಂಖ್ಯೆ ದೇಶದ ಒಟ್ಟು ಜನಸಂಖ್ಯೆಯ 11 ಲಕ್ಷ(ಶೇ.1.7)ದಷ್ಟು ಇದೆ. ಸಿಖ್ ಜನಸಂಖ್ಯೆ ಶೇ.0.90, ಬೌದ್ಧರು ಶೇ.0.50, ಯಹೂದಿ ಶೇ.0.50, ಇತರೆ ಧರ್ಮದವರು ಶೇ. 0.60ರಷ್ಟಿದ್ದಾರೆ.

ಲಷ್ಕರೆ ಉಗ್ರರಿಗೆ ಪಾಕ್ ಸರಕಾರದಿಂದ ಹಣ

ಸಿಂದೂರ್ ಧ್ವಂಸಗೊಳಿಸಿದ್ದ ಮರ್ಕಜ್ ಮರುನಿರ್ಮಾಣ

ಮುರಿಡ್ಕೆ: ಭಾರತ ಸೇನಾಪಡೆಗಳು ಮೇ 7ರಂದು ಆಪರೇಷನ್ ಸಿಂದೂರ್ ಕಾರ್ಯಾಚರಣೆ ನಡೆಸಿದಾಗ ನಾಶಪಡಿಸಲಾಗಿದ್ದ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಮುರಿಡ್ಕೆಯಲ್ಲಿನ ಲಷ್ಕರ್-ಎ-ತಯ್ಯಬಾ(ಎಲ್‌ಇಟಿ) ಭಯೋತ್ಪಾದಕ ಸಂಘಟನೆಯ ಪ್ರಧಾನ ನೆಲೆ ಮರುನಿರ್ಮಾಣವಾಗುತ್ತಿದೆ ಎಂದು ವರದಿಯಾಗಿದೆ. ಮುರಿಡ್ಕೆಯ ಮರ್ಕಜ್ ತೈಬಾದ ಪುನರ್‌ನಿರ್ಮಾಣ ಕಾರ್ಯ ಸದ್ದಿಲ್ಲದೆ ನಡೆಯುತ್ತಿದೆ. ದೊಡ್ಡ ಯಂತ್ರೋಪಕರಣಗಳನ್ನು ಬಳಸಿ ಕಾಮಗಾರಿ ನಡೆಸಲಾಗುತ್ತಿದೆ. ಕಟ್ಟಡವನ್ನು 2026ರ ಫೆ.5ರಂದು ಉದ್ಘಾಟಿಸುವ ಸಾಧ್ಯತೆ ಇದೆ ಎಂದು ಗುಪ್ತಚರ ಮೂಲಗಳು ತಿಳಿಸಿವೆ. ಆದರೆ ಈ ಮರು ನಿರ್ಮಾಣ ಕಾರ್ಯಕ್ಕೆ ಪಾಕಿಸ್ತಾನ ಸರಕಾರವೇ ಹಣದ ನೆರವು ನೀಡುತ್ತಿದೆ. ಆಗಸ್ಟ್‌ನಲ್ಲಿ ಎಲ್‌ಇಟಿಗೆ ಪಾಕ್ ಸರಕಾರದಿಂದ 1.25 ಕೋಟಿ ರು. ಹಣ ಸಂದಿದೆ. ಅಲ್ಲದೇ, ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ(ಪಿಒಕೆ) 2005ರಲ್ಲಿ ಸಂಭವಿಸಿದ ಭೂಕಂಪದ ಬಳಿಕ ಮಾನವೀಯ ನೆರವಿನ ನೆಪದಲ್ಲಿ ನೂರಾರು ಕೋಟಿ ಹಣ ಸಂಗ್ರಹಿಸಿದ ಎಲ್‌ಇಟಿ, ಅದರಲ್ಲಿ ಶೇ.80ರಷ್ಟನ್ನು ಮುರಿಡ್ಕೆ ಉಗ್ರರ ನೆಲೆಯ ಮರು ನಿರ್ಮಾಣಕ್ಕೆ ಬಳಸಿದೆ ಎನ್ನಲಾಗಿದೆ.

ಕುಲ್ಗಾಂ ಕಾರ್ಯಾಚರಣೆ ವೇಳೆ ತಿಳಿದ ಸಂಗತಿ

ಸ್ಥಳೀಯ ಬೆಂಬಲ ಸ್ಥಗಿತ, ಕಾಡಿಗೆ ಉಗ್ರರ ಸ್ಥಳಾಂತರ

ಶ್ರೀನಗರ: ಕೇಂದ್ರಾಡಳಿತ ಪ್ರದೇಶ ಜಮ್ಮು-ಕಾಶ್ಮೀರದಲ್ಲಿ ಗ್ರಾಮೀಣ ಭಾಗದಲ್ಲಿ ಸ್ಥಳೀಯರ ನೆರವು ಪಡೆದು, ಊಟ- ವಸತಿ ಸೌಕರ್ಯಗಳನ್ನು ಗಿಟ್ಟಿಸಿಕೊಳ್ಳುತ್ತಿದ್ದ ಉಗ್ರ ಸಂಘಟನೆಗಳ ಸದಸ್ಯರಿಗೆ ಈಗ ಕಾಶ್ಮೀರದ ಜನರಿಂದ ಹೆಚ್ಚಿನ ನೆರವು ಸಿಗುತ್ತಿಲ್ಲ. ಹಾಗಾಗಿ, ಉಗ್ರ ಸಂಘಟನೆಗಳು ಕಾರ್ಯತಂತ್ರ ಬದಲಿಸಿಕೊಳ್ಳುತ್ತಿವೆ. ಗ್ರಾಮೀಣ ಭಾಗದಲ್ಲಿ ಜನರ ಸಹಕಾರ ಕಡಿಮೆ ಆಗಿರುವುದರಿಂದ ಉಗ್ರರು ಆಶ್ರಯ ತಾಣವನ್ನು ಈಗ ದಟ್ಟ ಕಾಡುಗಳ ಒಳಕ್ಕೆ ಸ್ಥಳಾಂತರಿಸಿಕೊಂಡಿದ್ದಾರೆ. ಎತ್ತರದ ಪರ್ವತಗಳ ಪ್ರದೇಶ ದಲ್ಲಿ ಭೂಗತ ಬಂಕರ್‌ಗಳನ್ನು ನಿರ್ಮಿಸಿಕೊಂಡು ಅಡಗಿಕೊಳ್ಳುತ್ತಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಕಳೆದ ವಾರ ಕುಲ್ಗಾಂ ಜಿಲ್ಲೆಯ ಎತ್ತರದ ಪ್ರದೇಶದಲ್ಲಿ ಕಾರ್ಯಾಚರಣೆ ನಡೆಸಿ ಇಬ್ಬರು ಉಗ್ರರನ್ನು ಹೊಡೆದುರುಳಿಸಿದ ಸಂದರ್ಭ ಈ ಸಂಗತಿ ಬಯಲಾಗಿದೆ. ಸೇನಾಪಡೆಗಳು ಆ ಪ್ರದೇಶದಲ್ಲಿ ಕಾರ್ಯಾಚರಣೆ ಮುಂದುವರಿಸಿದಾಗ ರಹಸ್ಯ ಕಂದಕಗಳು ಕಂಡುಬಂದವು. ಅಲ್ಲಿ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳಷ್ಟೇ ಇರಲಿಲ್ಲ. ಬದಲಾಗಿ ಪಡಿತರ ಪದಾರ್ಥ, ಗ್ಯಾಸ್ ಸ್ಟೌ, ಪ್ರೆಶರ್ ಕುಕ್ಕರ್ ಮೊದಲಾದ ನಿತ್ಯದ ಬದುಕಿಗೆ ಬೇಕಾದ ಅಷ್ಟೂ ಸಾಮಗ್ರಿಗಳಿದ್ದವು. ಆಗ ಉಗ್ರರು ನೆಲೆ ಬದಲಿಸಿರುವ ಸಂಗತಿ ದೃಢಪಟ್ಟಿತು ಎಂದು ಅಧಿಕಾರಿಗಳು ಹೇಳಿದ್ದಾರೆ. ಕುಲ್ಗಾಂ, ಶೋಪಿಯಾನ್ ಜಿಲ್ಲೆಗಳು ಮತ್ತು ಜಮ್ಮು ಭಾಗದ ಪಿರ್ ಪಂಜಾಲ್‌ನ ದಕ್ಷಿಣದಲ್ಲಿ ಉಗ್ರರು ಹೀಗೆ ಅರಣ್ಯಕ್ಕೆ ಸ್ಥಳಾಂತರಗೊಂಡಿದ್ದಾರೆ. ಪರಿಣಾಮ ಈಗ ಸೇನಾಪಡೆಗಳಿಗೆ ಹೊಸ ಸವಾಲು ಎದುರಾದಂತಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರತಿಪ್ರಜೆಗೂ ಜಿಎಸ್‌ಟಿ ಸುಧಾರಣೆ ಲಾಭ

ತೆರಿಗೆ ಕಡಿತ ಪ್ರಯೋಜನ ಸಿಗಲು ವಾರವಷ್ಟೇ ಬಾಕಿ

ಚೆನ್ನೈ: ಸರಕು ಮತ್ತು ಸೇವೆಗಳ ತೆರಿಗೆ ಪದ್ಧತಿಯಲ್ಲಿ ಕೇಂದ್ರ ಹಣಕಾಸು ಸಚಿವಾಲಯ ಇತ್ತೀಚೆಗೆ ಮಾಡಿರುವ ಬದಲಾವಣೆ, ಸುಧಾರಣೆ ಕ್ರಮಗಳು ಜಾರಿಗೆ ಬಂದು ಸರಕು ಮತ್ತು ಸೇವೆಗಳೆಲ್ಲವೂ ಬಹಳ ಅಗ್ಗವಾಗುವುದಕ್ಕೆ ಒಂದು ವಾರವಷ್ಟೇ ಬಾಕಿ ಇದೆ. ಸೆ.22ರಿಂದ ಜಿಎಸ್‌ಟಿ ಸುಧಾರಣೆ ಕ್ರಮಗಳು ಜಾರಿಗೆ ಬರಲಿವೆ.

ಚೆನ್ನೈನ ಸಿಟಿಜನ್ಸ್ ಫೋರಂ ಭಾನುವಾರ ಆಯೋಜಿಸಿದ್ದ 'ಪ್ರಗತಿಗತಿ ಭಾರತ-ತೆರಿಗೆ ಸುಧಾರಣೆ' ಕಾರ್ಯಕ್ರಮದಲ್ಲಿ ಮಾತನಾಡಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಜಿಎಸ್‌ಟಿ ಪದ್ಧತಿಯಲ್ಲಿ ಕೇಂದ್ರ ಸರಕಾರ ಮಾಡಿರುವ ಸುಧಾರಣಾ ಕ್ರಮಗಳು ದೇಶದ ಪ್ರತಿ ನಾಗರಿಕರಿಗೆ ಸಿಕ್ಕ ದೊಡ್ಡ ಗೆಲುವಾಗಿದೆ ಎಂದು ಹೇಳಿದರು. ಭಾರತದ ಪ್ರತಿ ರಾಜ್ಯವೂ ತನ್ನದೇ ಆದ ಹಬ್ಬಗಳನ್ನು ಆಚರಿಸುತ್ತವೆ. ಆದರೆ, ದೀಪಾವಳಿ ಹಬ್ಬವನ್ನು ಇಡೀ ದೇಶ ಏಕತ್ರವಾಗಿ ಆಚರಿಸುತ್ತದೆ. ಹಾಗಾಗಿಯೆ ಪ್ರಧಾನಿ ನರೇಂದ್ರ ಮೋದಿ ಅವರ ಸೂಚನೆ ಮೇರೆಗೆ ದೀಪಾವಳಿಯ ಸಂಭ್ರಮ ಇಮ್ಮಡಿಯಾಗುವಂತೆ ಮಾಡುವ ಸಲುವಾಗಿ ಹಬ್ಬಕ್ಕೂ ಮುನ್ನವೇ ಜಿಎಸ್‌ಟಿ ಸುಧಾರಣೆಗಳನ್ನು ಜಾರಿಗೆ ತರಲಾಗುತ್ತಿದೆ ಎಂದರು.

ಈ ಹಿಂದೆ ಜಿಎಸ್‌ಟಿಯಲ್ಲಿ ಶೇ.12ರಷ್ಟು ತೆರಿಗೆ ವಿಧಿಸಿದ್ದ ಸರಕುಗಳಲ್ಲಿ ಈಗ ಶೇ.99ರಷ್ಟು ಸರಕುಗಳ ತೆರಿಗೆಯನ್ನು ಶೇ.5ಕ್ಕೆ ಇಳಿಸಲಾಗಿದೆ. ಜನರು ಮುಂಜಾನೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೂ ಬಳಸುವ ಎಲ್ಲಾ ಬಗೆಯ ಉತ್ಪನ್ನಗಳಿಗೂ ತೆರಿಗೆ ಸುಧಾರಣೆಯ ಪ್ರಯೋಜನ ಸಿಗುವಂತೆ ಮಾಡಲಾಗಿದೆ ಎಂದರು.

ಜೈಪುರ: ಗಂಗೆಗೆ ಮನೆ ಹಿರಿಯರ ಚಿತಾಭಸ್ಮ

ಚಿತಾಭಸ್ಮ ವಿಸರ್ಜಿಸಿ ಬರುವಾಗ 7 ಸಾವು

ಜೈಪುರ: ಹರಿದ್ವಾರಕ್ಕೆ ತೆರಳಿ ಗಂಗಾ ನದಿಯಲ್ಲಿ ಮನೆಯ ಹಿರಿಯರ ಚಿತಾಭಸ್ಮ ವಿಸರ್ಜಿಸಿ ಹಿಂತಿರುಗುತ್ತಿದ್ದ ಕಾರು ಅಪಘಾತಕ್ಕೀಡಾಗಿದ್ದರಿಂದ ರಾಜಸ್ಥಾನದ ಎರಡು ಕುಟುಂಬಗಳ ಏಳು ಮಂದಿ ದುರ್ಮರಣಕ್ಕೀಡಾಗಿದ್ದಾರೆ.

ಜೈಪುರದ ಶಿವದಾಸಪುರ ಪೊಲೀಸ್ ಠಾಣಾ ವ್ಯಾಪ್ತಿಯ ಪ್ರಹ್ಲಾದಪುರ ಬಳಿಯ ರಿಂಗ್ ರೋಡ್‌ನ ಮೇಲ್ಸೇತುವೆಯಿಂದ 16 ಅಡಿ ಆಳದ ನದಿಗೆ ಕಾರು ಉರುಳಿಬಿದ್ದಿದೆ. ಇಬ್ಬರು ಮಕ್ಕಳು ಮತ್ತು ಇಬ್ಬರು ಮಹಿಳೆಯರು ಸೇರಿದಂತೆ ಏಳು ಮಂದಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಶನಿವಾರ ತಡರಾತ್ರಿ ಕಾರು ಅಪಘಾತಕ್ಕೀಡಾಗಿದೆ. ತಲೆಕೆಳಗಾಗಿ ಬಿದ್ದಿದ್ದ ಕಾರನ್ನು ದೊಡ್ಡ ಕ್ರೇನ್ ಸಹಾಯದಿಂದ ನದಿಯಿಂದ ಭಾನುವಾರ ಮಧ್ಯಾಹ್ನ ಹೊರತೆಗೆಯಲಾಗಿದೆ. ವಾಟಿಕಾ ಸಂಗನೇರ್‌ನಲ್ಲಿನ ನಿವಾಸಿ ರಾಮರಾಜ್ ವೈಷ್ಣವ್, ಪತ್ನಿ ಮಧು, ಮಗ ರುದ್ರ, ರಾಮರಾಜ್ ಅವರ ಸೋದರ ಮಾವ ಕಲುರಾಮ್, ಅವರ ಪತ್ನಿ ಸೀಮಾ, ಮಗ ರೋಹಿತ್ ಮತ್ತು ಪೂಜಾ ಗಜರತ್ ಸಾವನ್ನಪ್ಪಿದವರು. ಕಲುರಾಮ್ ಅವರ ತಂದೆ ನಿಧನರಾಗಿದ್ದರಿಂದ ಅವರ ಚಿತಾಭಸ್ಮವನ್ನು ಹರಿದ್ವಾರದಲ್ಲಿ ವಿಸರ್ಜಿಸಲೆಂದು ಎಲ್ಲರೂ ಕಾರಿನಲ್ಲಿ ತೆರಳಿದ್ದರು. ರಾಮರಾಜ್ ಕಾರು ಚಲಾಯಿಸುತ್ತಿದ್ದರು. ವಾಪಸಾಗುವ ಮಾರ್ಗದಲ್ಲಿ ಕಾರು ಅಪಘಾತಕ್ಕೀಡಾಗಿದೆ.

ನ್ಯಾಯಾಲಯ ನಿರ್ದೇಶನ ಮಧ್ಯ ಪ್ರವೇಶ ಮಾಡಿದಂತೆ: ಆಯೋಗ

ಎಸ್‌ಐಆರ್ ಚು.ಆಯೋಗದ ವಿಶೇಷ ಅಧಿಕಾರ

ದೆಹಲಿ: ಮತದಾರ ಪಟ್ಟಿ ವಿಶೇಷ ಕ್ಷಿಪ್ರ ಪರಿಷ್ಕರಣೆ(ಎಸ್‌ಐಆರ್) ಯಾವಾಗ, ಎಲ್ಲಿ, ಹೇಗೆ, ಎಷ್ಟು ಅವಧಿಗೆ ಮಾಡಬೇಕು ಎಂಬುದನ್ನು ನಿರ್ಧರಿಸುವುದು ಚುನಾವಣಾ ಆಯೋಗದ ವಿಶೇಷ ಅಧಿಕಾರವಾಗಿದೆ. ಆದರೆ, 'ಎಸ್‌ಐಆರ್' ಪ್ರಕ್ರಿಯೆ ದೇಶಾದ್ಯಂತ ನಿಯಮಿತವಾಗಿ ನಡೆಸುವಂತೆ ನ್ಯಾಯಾಲಯ ನಿರ್ದೇಶನ ನೀಡುವುದು ಆಯೋಗದ ವಿಶೇಷ ಅಧಿಕಾರದಲ್ಲಿ ಮಧ್ಯ ಪ್ರವೇಶ ಮಾಡಿದಂತೆ ಎಂದು ಚುನಾವಣಾ ಆಯೋಗ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಬಿಹಾರದ 'ಎಸ್‌ಐಆರ್' ಪ್ರಕ್ರಿಯೆ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್ ಪೀಠಕ್ಕೆ ಚುನಾವಣಾ ಆಯೋಗ ಶನಿವಾರ ಸಲ್ಲಿಸಿದ ಪ್ರಮಾಣಪತ್ರದಲ್ಲಿ ತನ್ನ ವಿಶೇಷ ಅಧಿಕಾರರ ಬಗ್ಗೆ ಉಲ್ಲೇಖ ಮಾಡಿದೆ. ಮತದಾರ ಪಟ್ಟಿ ಸಮಗ್ರ ಅಥವಾ ಸಂಕ್ಷಿಪ್ತವಾಗಿ ಪರಿಷ್ಕರಿಸುವುದು ಪರಿಸ್ಥಿತಿಗೆ ತಕ್ಕಂತೆ ನಿರ್ಧರಿಸಲಾಗುತ್ತದೆ. ಜನಪ್ರತಿನಿಧಿ ಕಾಯಿದೆ-1950 ಮತ್ತು ಮತದಾರ ಪಟ್ಟಿ ನೋಂದಣಿ ಕಾಯಿದೆ-1960ರಡಿ ಚುನಾವಣಾ ಆಯೋಗಕ್ಕೆ ಆ ಅಧಿಕಾರವಿದೆ ಎಂದು ಆಯೋಗ ತಿಳಿಸಿದೆ.

ಬಿಹಾರ ಹೊರತು ಉಳಿದೆಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಚುನಾವಣಾಧಿಕಾರಿಗೆ ಮತದಾರ ಪಟ್ಟಿ ವಿಶೇಷ ಕ್ಷಿಪ್ರ ಪರಿಷ್ಕರಣೆಗೆ ತುರ್ತಾಗಿ ಪೂರ್ವ ತಯಾರಿ ನಡೆಸುವಂತೆ ಜು.5, 2025ರಲ್ಲಿ ಬರೆದ ಪತ್ರದಲ್ಲಿ ಸೂಚನೆ ನೀಡಲಾಗಿದೆ. 2026ರ ಜ.1 ದಿನವನ್ನು ಮತದಾರ ಪಟ್ಟಿಯ ವಿಶೇಷ ಕ್ಷಿಪ್ರ ಪರಿಷ್ಕರಣೆಯ ಅರ್ಹತಾ ದಿನ ಎಂದು ನಿಗದಿಪಡಿಸಲಾಗಿದೆ. ಈ ಸಂಬಂಧ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶದ ಚುನಾವಣಾ ಅಧಿಕಾರಿಗಳ ಜತೆಗೆ ಸೆ.10ರಂದು ಸಭೆ ನಡೆಸಲಾಗಿದೆ' ಎಂದೂ ಆಯೋಗ ಪೀಠಕ್ಕೆ ತಿಳಿಸಿದೆ.

ಪ್ರಮಾಣಪತ್ರ

ಚುನಾವಣೆಗೂ ಮುಂಚೆ ಮತದಾರ ಪಟ್ಟಿಯ ವಿಶೇಷ ಪರಿಷ್ಕರಣೆಯನ್ನು ದೇಶಾದ್ಯಂತ ನಿಯಮಿತವಾಗಿ ನಡೆಸುವಂತೆ ಆಯೋಗಕ್ಕೆ ನಿರ್ದೇಶನ ನೀಡುವಂತೆ ಅರ್ಜಿದಾರರ ಪರ ಹಿರಿಯ ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಸುಪ್ರೀಂ ಕೋರ್ಟ್‌ಗೆ ಅರಿಕೆ ಮಾಡಿಕೊಂಡ ಹಿನ್ನೆಲೆ ಚುನಾವಣಾ ಆಯೋಗ ಪೀಠಕ್ಕೆ ಪ್ರಮಾಣಪತ್ರ ಸಲ್ಲಿಸಿದೆ.

ರಷ್ಯಾ ದೊಡ್ಡ ತೈಲ ಘಟಕಕ್ಕೆ ಉಕ್ರೇನ್ ಡ್ರೋನ್ ದಾಳಿ

ಮಾಸ್ಕೊ: ರಷ್ಯಾ ದೇಶದ ಅತಿದೊಡ್ಡ ತೈಲ ಸಂಸ್ಕರಣಾಗಾರ ಕಿರಿಶಿ ಮೇಲೆ ಉಕ್ರೇನ್ 361 ಡ್ರೋನ್‌ಗಳನ್ನು ಬಳಸಿ ತೀವ್ರ ಸ್ವರೂಪದ ದಾಳಿ ಮಾಡಿದ್ದು, ತೈಲ ಸಂಸ್ಕರಣಾ ಘಟಕ ಹೊತ್ತಿ ಉರಿದಿದೆ.

ಶನಿವಾರ ರಾತ್ರಿ 361 ಡ್ರೋನ್‌ಗಳನ್ನು ಬಳಸಿ ರಷ್ಯಾದ ಬೃಹತ್ ಕಿರಿಶಿ ತೈಲ ಸಂಸ್ಕರಣಾ ಘಟಕದ ಮೇಲೆ ದಾಳಿ ಮಾಡಲಾಗಿದೆ. ಅತಿದೊಡ್ಡ ಕಿರಿಶಿ ಆಯಿಲ್ ರಿಫೈನರಿ ಘಟಕದ ಮೇಲಿನ ಡ್ರೋನ್ ದಾಳಿ ಯಶಸ್ವಿಯಾಗಿದ್ದು, ತೈಲ ಸಂಸ್ಕರಣಾ ಘಟಕಕ್ಕೆ ಭಾರೀ ಹಾನಿಯಾಗಿದೆ ಎಂದು ಉಕ್ರೇನ್ ಸೇನಾಪಡೆ ಹೇಳಿಕೊಂಡಿದೆ. ವಿಶ್ವದ 2ನೇ ಅತಿದೊಡ್ಡ ತೈಲ ರಫ್ತುದಾರ ದೇಶ ಎನಿಸಿಕೊಂಡಿರುವ ರಷ್ಯಾದಲ್ಲಿ ಹಲವು ಅತಿದೊಡ್ಡ ತೈಲ ಸಂಸ್ಕರಣಾ ಘಟಕಗಳಿದ್ದು, ಕಿರಿಶಿ ಘಟಕವೂ ಅದರಲ್ಲೊಂದಾಗಿದೆ. ಕಿರಿಶಿ ಘಟಕದಲ್ಲಿ ರಷ್ಯಾದ ಶೇ.6.4ರಷ್ಟು ಕಚ್ಚಾ ತೈಲ ಸಂಸ್ಕರಣೆ ಕೆಲಸ ನಡೆಯುತ್ತದೆ. ದಿನಕ್ಕೆ 3.55 ಲಕ್ಷ ಬ್ಯಾರಲ್ ತೈಲದ ಸಂಸ್ಕರಣೆ ಆಗುತ್ತದೆ.

ಭರೂಚ್ ಕಾರ್ಖಾನೆ ಭಾರಿ ಅಗ್ನಿ ಅವಘಡ



ಭರೂಚ್: ಗುಜರಾತ್ ರಾಜ್ಯದ ಭರೂಚ್ ಜಿಲ್ಲೆಯ ರಾಸಾಯನಿಕ ಕಾರ್ಖಾನೆಯಲ್ಲಿ ಭಾನುವಾರ ಭಾರಿ ಅಗ್ನಿ ಅವಘಡವಾಗಿದೆ. ಜಿಐಡಿಸಿ ಪನೋಲಿಯಲ್ಲಿ ಇರುವ ಸಂಘ್ವಿ ಆರ್ಗಾನಿಕ್ಸ್ ಕಾರ್ಖಾನೆಯಲ್ಲಿ ಬೆಂಕಿ ಹೊತ್ತಿಕೊಂಡಿದ್ದು, ಜ್ವಾಲೆಗಳು ಮುಗಿಲೆತ್ತರಕ್ಕೆ ಚಾಚಿದ್ದವು. 15 ಅಗ್ನಿಶಾಮಕ ದಳ ವಾಹನಗಳು ಗಂಟೆಗಳ ಕಾಲ ಶ್ರಮಿಸಿ ಬೆಂಕಿ ನಂದಿಸಿದವು. ಯಾವುದೇ ಸಾವು-ನೋವು ವರದಿಯಾಗಿಲ್ಲ. ಬೆಂಕಿಗೆ ಕಾರಣ, ಹಾನಿ ಪ್ರಮಾಣದ ಬಗ್ಗೆ ಈವರೆಗೂ ಮಾಹಿತಿ ಲಭ್ಯವಾಗಿಲ್ಲ.

ಗುವಾಹಟಿ: 5.8 ತೀವ್ರತೆ ಭೂಕಂಪ

ದಿಸ್‌ಪುರ: ಅಸ್ಸಾಂನ ಗುವಾಹಟಿಯಲ್ಲಿ ಭಾನುವಾರ ಸಂಜೆ 4.40ರ ವೇಳೆ ರಿಕ್ಟರ್ ಮಾಪಕದಲ್ಲಿ 5.8ರಷ್ಟು ತೀವ್ರತೆಯ ಭೂಕಂಪವಾಗಿದೆ. ಪಶ್ಚಿಮ ಬಂಗಾಳ ರಾಜ್ಯದ ಉತ್ತರ ಭಾಗ ಮತ್ತು ನೆರೆದೇಶ ಭೂತಾನ್‌ನಲ್ಲೂ ಕಂಪನದ ಅನುಭವವಾಗಿದೆ. ಭೂಕಂಪದ ಕೇಂದ್ರಬಿಂದು ಉದಲ್‌ಗುರಿ ಪಟ್ಟಣದಲ್ಲಿದ್ದು, 5 ಕಿಮೀ ಆಳದಲ್ಲಿತ್ತು ಎಂದು ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರ ತಿಳಿಸಿದೆ. ಯಾವುದೇ ಸಾವು-ನೋವು, ಆಸ್ತಿ ಹಾನಿ ವರದಿಯಾಗಿಲ್ಲ. ಈಶಾನ್ಯ ಭಾರತ ಭೂಕಂಪನ ವಲಯದಲ್ಲಿಯೇ ಬರುತ್ತದೆ. ಹಾಗಾಗಿ ಈ ಭಾಗದಲ್ಲಿ ಭೂಕಂಪ ಸಂಭವಿಸುತ್ತಿರುತ್ತವೆ. ಸೆ.2ರಂದು ಕೂಡಾ ಅಸ್ಸಾಂನ ಸೋನಿತ್‌ಪುರದಲ್ಲಿ 3.5ರಷ್ಟು ತೀವ್ರತೆಯ ಭೂಕಂಪವಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಸ್ರೇಲ್ ದಾಳಿಗೆ ಹಿಜ್ಬುಲ್ಲಾ ಉಗ್ರ ಹತ

ಐತರೌನ್: ಇಸ್ರೇಲ್‌ನ ವಾಯುಪಡೆಯ 91ನೇ ವಿಭಾಗದ ಮಾರ್ಗದರ್ಶನದಲ್ಲಿ ಯುದ್ಧ ವಿಮಾನಗಳು ಲೆಬನಾನ್ ದೇಶದ ದಕ್ಷಿಣ ಭಾಗದಲ್ಲಿನ ಐತರೌನ್ ಪ್ರದೇಶದ ಮೇಲೆ ಶನಿವಾರ ರಾತ್ರಿ ಭಾರೀ ದಾಳಿ ನಡೆಸಿವೆ.

ಪರಿಣಾಮ ಹಿಜ್ಬುಲ್ಲಾ ಉಗ್ರ ಸಂಘಟನೆಯ ಪ್ರಮುಖ ಕಾರ್ಯಕರ್ತ ಸಾವಿಗೀಡಾಗಿದ್ದಾನೆ. ಈ ಪ್ರದೇಶದಲ್ಲಿ ಇರಾನ್ ಬೆಂಬಲ ಪಡೆದಿರುವ ಹಿಜ್ಬುಲ್ಲಾ ಉಗ್ರರ ಗುಂಪಿನ ಸೇನಾ ಶಿಬಿರಗಳ ಪುನರ್ ನಿರ್ಮಾಣ ಉದ್ದೇಶವನ್ನು ಉಗ್ರ ಸಂಘಟನೆ ಹೊಂದಿತ್ತು. ಹಾಗಾಗಿ ಆ ಭಾಗದ ಮೇಲೆ ವೈಮಾನಿಕ ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ರಕ್ಷಣಾ ಪಡೆ ಸುದ್ದಿಸಂಸ್ಥೆಗೆ ತಿಳಿಸಿದೆ.

243 ಕ್ಷೇತ್ರಗಳಲ್ಲೂ ನನ್ನದೇ ಸ್ಪರ್ಧೆ ಎಂದು ಮತ ಚಲಾಯಿಸಿ

ಪಟನಾ: ಬಿಹಾರ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಮತ್ತು ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ) ಸೇರಿ ದಂತೆ ಮಹಾ ಘಟಬಂಧನ್ ಮಿತ್ರ ಪಕ್ಷಗಳ ನಡುವೆ ಕ್ಷೇತ್ರಗಳ ಹಂಚಿ ಕೆಯೇ ದೊಡ್ಡ ಸವಾಲಾಗಿದೆ.

ಮೂಲಗಳ ಪ್ರಕಾರ ಕಾಂಗ್ರೆಸ್ ಕನಿಷ್ಠ 70 ಕ್ಷೇತ್ರ ಗಳನ್ನು ಕೇಳುತ್ತಿದೆ. ಆದರೆ, ಇತರೆ ಮಿತ್ರಪಕ್ಷಗಳಿಗೆ ಅವಕಾಶ ಮಾಡಿಕೊಡ ಬೇಕಿರುವುದರಿಂದ ಕಾಂಗ್ರೆಸ್‌ಗೆ ಅಷ್ಟೊಂದು ಕ್ಷೇತ್ರ ಬಿಟ್ಟು ಕೊಡಲು ಆರ್‌ಜೆಡಿ ಸಿದ್ಧವಿಲ್ಲ. ಇನ್ನೊಂದೆಡೆ ವಿಕಾಸಶೀಲ ಇನ್ಸಾನ್ ಪಾರ್ಟಿ(ವಿಐಪಿ) ಮುಖ್ಯಸ್ಥ ಮುಖೇಶ್ ಸಾಹ್ನಿ ಕೂಡಾ ಈ ಬಾರಿ ಹೆಚ್ಚಿನ ಕ್ಷೇತ್ರಗಳನ್ನು ಕೇಳುತ್ತಿದ್ದಾರೆ. 15 ಶಾಸಕರನ್ನು ಹೊಂದಿ ರುವ ಎಡಪಕ್ಷಗಳು (ಸಿಪಿಐ, ಸಿಪಿಐ-ಎಂ ಮತ್ತು ಸಿಪಿಐ-ಎಂಎಲ್) ಸಹ ಇದೇ ರೀತಿ ಒತ್ತಡ ಹಾಕುತ್ತಿವೆ.

ಸೀಟು ಹಂಚಿಕೆ ಮಾತುಕತೆ ಮಹಾಘಟಬಂಧನ್‌ನಲ್ಲಿ ಈಗಾಗಲೇ ಜಟಿಲವಾಗಿವೆ. ಇದರ ಮಧ್ಯೆಯೇ, ಹೇಮಂತ್ ಸೊರೆನ್ ನೇತೃತ್ವದ ಜಾರ್ಖಂಡ್ ಮುಕ್ತಿ ಮೋರ್ಚಾ ಮತ್ತು ಪಶುಪತಿ ಪರಾಸ್ ನೇತೃತ್ವದ ಲೋಕ ಜನಶಕ್ತಿ ಪಕ್ಷಗಳೂ ಮಹಾಘಟಬಂಧನ ಮೈತ್ರಿಕೂಟಕ್ಕೆ ಸೇರ್ಪಡೆಯಾಗಿ ರುವುದು ಸಮಸ್ಯೆಯನ್ನು ಇನ್ನಷ್ಟು ಜಟಿಲವಾಗಿಸಿದೆ ಎನ್ನಲಾಗಿದೆ. ಏತನ್ಮಧ್ಯೆ, ಆರ್‌ಜೆಡಿ ನಾಯಕ ತೇಜಸ್ವಿ ಯಾದವ್, ಮುಜಫರ್‌ಪುರದಲ್ಲಿನ ಸಾರ್ವಜನಿಕ ಸಭೆಯಲ್ಲಿ 'ರಾಜ್ಯ ದಲ್ಲಿನ ಎಲ್ಲಾ 243 ಸ್ಥಾನಗಳಲ್ಲಿಯೂ ನಾನೇ ಸ್ಪರ್ಧಿಸುತ್ತಿ ರುವುದಾಗಿ ಬಿಹಾರದ ಜನ ಭಾವಿಸಬೇಕು. 243 ಕ್ಷೇತ್ರಗಳಲ್ಲಿಯೂ ನನ್ನ ಹೆಸರಿನಲ್ಲೇ ಮತದಾನ ಮಾಡಬೇಕು' ಎಂದು ಮನವಿ ಮಾಡಿದ್ದಾರೆ.

ಮೋತಿಹಾರಿ ಬಿಜೆಪಿ ಅಭ್ಯರ್ಥಿ

ಪಟನಾ: ಬಿಹಾರ ವಿಧಾನಸಭೆ ಚುನಾವಣೆ ಸಮೀಪಿಸುತ್ತಿದೆ. ಎನ್‌ಡಿಎ ಮೈತ್ರಿಕೂಟದ ಮಿತ್ರಪಕ್ಷಗಳ ನಡುವೆ ಸೀಟು ಹಂಚಿಕೆ ಒಪ್ಪಂದ ಇನ್ನಷ್ಟೇ ಅಂತಿಮಗೊಳ್ಳಬೇಕಿದೆ. ಅಷ್ಟರಲ್ಲೆ ಮೋತಿಹಾರಿ ವಿಧಾನಸಭಾ ಕ್ಷೇತ್ರಕ್ಕೆ ಬಿಜೆಪಿ ಅಭ್ಯರ್ಥಿ ಹೆಸರು ಪ್ರಕಟಿಸುವ ಮೂಲಕ ಅಚ್ಚರಿ ಉಂಟು ಮಾಡಿದೆ. 63 ವರ್ಷದ ಪ್ರಮೋದ್ ಕುಮಾರ್ ಮೋತಿಹಾರಿ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದಾರೆ. ಪೂರ್ವ ಚಂಪಾರಣ್ ಭಾಗದ ಜಿಲ್ಲಾ ಕೇಂದ್ರ ಮೋತಿಹಾರಿಯಲ್ಲಿ ಶನಿವಾರ ಎನ್‌ಡಿಎ ಕಾರ್ಯಕರ್ತರ ಸಭೆಯಲ್ಲಿ ಅಭ್ಯರ್ಥಿ ಹೆಸರು ಘೋಷಣೆ ಮಾಡಲಾಗಿದೆ.

ಸಮಾಚಾರ ಸಣ್ಣದಲ್ಲ

ವಿದ್ಯುತ್ ದರ ಹೆಚ್ಚಳಕ್ಕೆ ಬೆಸ್ಕಾಂ ಮನವಿ

ಬೆಂಗಳೂರು: ದರ ಏರಿಕೆಯಿಂದ ಹೈರಾಣಾಗಿರುವ ರಾಜ್ಯದ ಜನತೆಗೆ ಮತ್ತೊಂದು ಬೆಲೆ ಏರಿಕೆ ಬಿಸಿ ಮುಟ್ಟಿದ್ದು, ಶೀಘ್ರವೇ ವಿದ್ಯುತ್ ದರ ಹೆಚ್ಚಳವಾಗುವ ಸಾಧ್ಯತೆಯಿದೆ ಎನ್ನುವ ಮಾತುಗಳು ಕೇಳಿ ಬಂದಿದೆ. ವಿದ್ಯುತ್ ದರವನ್ನು ಏರಿಕೆ ಮಾಡುವಂತೆ ಬೆಸ್ಕಾಂ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಪ್ರತಿ ಯುನಿಟ್ ಗೆ 1 ರು.ನಂತೆ ವಿದ್ಯುತ್ ದರ ಏರಿಕೆ ಮಾಡಬೇಕು ಎಂದು ಮನವಿ ಮಾಡಿದೆ. ಈಗಾಗಲೇ ವಾಣಿಜ್ಯ, ಕೈಗಾರಿಕಾ ವಲಯಕ್ಕೆ ವಿದ್ಯುತ್ ದರ ಏರಿಕೆ ಮಾಡಿ ಶಾಕ್ ಕೊಟ್ಟಿರುವ ಬೆಸ್ಕಾಂ, ಇದೀಗ ಮತ್ತೆ ವಿದ್ಯುತ್ ದರ ಹೆಚ್ಚಳ ಮಾಡುವಂತೆ ಪ್ರಸ್ತಾವನೆ ಸಲ್ಲಿಸಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ನೀರಾವರಿ ಉದ್ದೇಶಕ್ಕಾಗಿ ರೈತರು ಪಂಪ್ ಸೆಟ್‌ಗಳಿಗೆ ಪ್ರೋತ್ಸಾಹ ಯೋಜನೆಯಡಿ ಬಳಕೆ ಮಾಡುತ್ತಿರುವ ವಿದ್ಯುತ್‌ಗೆ ಸರಕಾರ ಸಮರ್ಪಕವಾಗಿ ಸಬ್ಸಿಡಿ ಹಣ ಬಿಡುಗಡೆ ಮಾಡುತ್ತಿಲ್ಲ. ಹೀಗಾಗಿ ಬೆಸ್ಕಾಂಗೆ ಆದಾಯದಲ್ಲಿ ಹಿನ್ನಡೆಯುಂಟಾಗಬಹುದು ಎಂದು ನಿರೀಕ್ಷಿಸಲಾಗಿದೆ. ಬಜೆಟ್‌ನಲ್ಲಿ ಸರಕಾರ ನೀಡಿರುವುದು 16021 ಕೋಟಿ ರು. ಮಾತ್ರ. ರಾಜ್ಯ ಸರಕಾರ ಬಾಕಿ ಉಳಿದಿರುವ ಸಬ್ಸಿಡಿಯನ್ನು ಹೆಚ್ಚುವರಿಯಾಗಿ 2,36,247 ಕೋಟಿ ರು. ನೀಡಿದರೂ 1214.12 ಕೋಟಿ ರು. ಕೊರತೆ ಉಂಟಾಗಲಿದೆ. ಇದನ್ನು ಸರಿತೂಗಿಸಲು ಕೈಗಾರಿಕೆ ಮತ್ತು ವಾಣಿಜ್ಯ ಬಳಕೆದಾರರ ಮೇಲೆ ಪ್ರತಿ ಯುನಿಟ್‌ಗೆ 10 ಪೈಸೆಯಿಂದ 1 ರು. ವರೆಗೆ ಹೆಚ್ಚಿಸಲು ಇದೀಗ ಕೋರಲಾಗಿದೆ. ಬೆಸ್ಕಾಂ ಪ್ರಸ್ತಾವನೆ ಬಗ್ಗೆ ಎಫ್ ಕೆಸಿಸಿಐ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ರಾಜ್ಯದಲ್ಲಿ ಪ್ರತಿ ಯೂನಿಟ್ ಗೆ 1 ರುಪಾಯಿ ವಿದ್ಯುತ್ ದರ ಏರಿಕೆ ಮಾಡುವ ಪ್ರಸ್ತಾವನೆಗೆ ಸಾರ್ವಜನಿಕರು, ಉದ್ಯಮಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸೆ.15ರಿಂದ 29ರವರೆಗೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ತುರ್ತು ನಿರ್ವಹಣಾ ಕಾಮಗಾರಿ ಹಿನ್ನೆಲೆ ಸೆ.15ರಿಂದ 29ರವರೆಗೆ ಬೆಳಗ್ಗೆ 9.00ರಿಂದ 5.00ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಮಾಹಿತಿ ನೀಡಿದೆ. 66/11 ಕೆವಿ ಸಹಕಾರ ನಗರ ಕೆಪಿಟಿಸಿಎಲ್ ವ್ಯಾಪ್ತಿಯಲ್ಲಿ ತುರ್ತು ನಿರ್ವಹಣಾ ಕಾರ್ಯ ಹಿನ್ನೆಲೆ ಹೆಬ್ಬಾಳ ವಿಭಾಗದ ಸಿ –8 ಉಪವಿಭಾಗದ ಹಲವಾರು ಪ್ರದೇಶಗಳ ಎ ಬ್ಲಾಕ್, ಇ ಬ್ಲಾಕ್, ಬಳ್ಳಾರಿ ಮುಖ್ಯರಸ್ತೆ, ಜಿ ಬ್ಲಾಕ್, ಎಫ್ ಬ್ಲಾಕ್, ತಲಕಾವೇರಿ ಲೇಔಟ್, ಅಮೃತಹಳ್ಳಿ, ಬಿಜಿಎಸ್ ಲೇಔಟ್, ನವ್ಯ ನಗರ ಬ್ಲಾಕ್, ಶಬರಿ ನಗರ, ಬ್ಯಾಟರಾಯನಪುರ ಜಕ್ಕೂರು ಲೇಔಟ್, ಜಿಕೆವಿಕೆ ಲೇಔಟ್, ಜಕ್ಕೂರು ಪ್ಲಾಂಟೇಶನ್, ಯೋಷಾದ ನಗರಾಮೃತಹಳ್ಳಿ, ಅಮೃತಹಳ್ಳಿ ಬಿ ಬ್ಲಾಕ್, ಸಿ ಬ್ಲಾಕ್, ಸಿಕ್ಯೂಎಎಲ್ ಲೇಔಟ್. ಡಿ ಬ್ಲಾಕ್, ಇ ಬ್ಲಾಕ್, ಸಂಪಿಗೆಹಳ್ಳಿ, ಅಗ್ರಹಾರ ಗ್ರಾಮ, ಜಯಸೂರ್ಯ ಲೇಔಟ್, ಸೂರ್ಯೋದಯ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹಾಗೂ ಅಗ್ರಹಾರ ಲೇಔಟ್, ಕೋಗಿಲು ಲೇಔಟ್, ಶ್ರೀನಿವಾಸಪುರ ಜಕ್ಕೂರು, ವಿಆರ್‌ಎಲ್ ರಸ್ತೆ (ಸಂತೆ ರಸ್ತೆ), ಐಎಎಸ್ ರಸ್ತೆ, ಅರ್ಕಾವತಿ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಈ ಹಿನ್ನೆಲೆ ಪ್ರದೇಶಗಳ ನಿವಾಸಿಗಳು ಮುಂಜಾಗ್ರತಾ ಕ್ರಮವಾಗಿ ವಿದ್ಯುತ್‌ಗೆ ಸಂಬಂಧಿತ ಉಪಕರಣ (ಮೊಬೈಲ್, ಲ್ಯಾಪ್ ಟಾಪ್, ಟ್ಯಾಬ್, ಬ್ಯಾಟರಿ ಇತ್ಯಾದಿ) ಗಳನ್ನು ಮುಂಚಿತವಾಗಿ ಚಾರ್ಜ್ ಮಾಡಿಟ್ಟುಕೊಳ್ಳುವುದು ಒಳಿತು ಎಂದು ಸಲಹೆ ನೀಡಿದೆ.

ಮಸ್ಟರಿಂಗ್ ಕೇಂದ್ರದಲ್ಲಿ ಹಾಜರಾತಿ ಪರಿಶೀಲನೆ

ಬೆಂಗಳೂರು: ಸರ್ವಜ್ಞನಗರ ಕ್ಷೇತ್ರದ ಬಾಣಸವಾಡಿಯ ಬಿಎಸ್‌ಎನ್‌ಎಲ್ ಮಸ್ಟರಿಂಗ್ ಪಾಯಿಂಟ್‌ಗೆ ಭಾನುವಾರ ಬೆಂಗಳೂರು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅನಿರೀಕ್ಷಿತ ಭೇಟಿ ನೀಡಿ ಪೌರಕಾರ್ಮಿಕರ ಹಾಜರಾತಿ ಕುರಿತು ತಪಾಸಣೆ ನಡೆಸಿದರು. ತಪಾಸಣೆ ವೇಳೆ ಮೇಲ್ವಿಚಾರಕ ಬಾಲಾಜಿ ಎಂಬುವರು ಗೈರುಹಾಜರಾಗಿದ್ದು, ಸ್ಥಳದಲ್ಲಿದ್ದ ಮೇಲ್ವಿಚಾರಕ ಕೆ. ಸುರೇಶ್ ಕುಮಾರ್ ಎಂಬವರನ್ನು ಗಮನಿಸಿ, ಸದರಿ ಮೇಲ್ವಿಚಾರಕರಿಗೆ ಹಾಜರಾತಿ ತೆಗೆದುಕೊಳ್ಳಲು ತಿಳಿಸಲಾಯಿತು. ಒಟ್ಟು 48 ಜನ ಪೌರಕಾರ್ಮಿಕರಲ್ಲಿ 15 ಜನ ಪೌರಕಾರ್ಮಿಕರು ಗೈರುಹಾಜರಾಗಿದ್ದು ಕಂಡುಬಂದಿದೆ. ಹಾಜರಿದ್ದ ಪೌರಕಾರ್ಮಿಕರನ್ನು ಮಸ್ಟರಿಂಗ್ ಕೇಂದ್ರದಿಂದ ಸ್ವಚ್ಛತಾ ಕಾರ್ಯ ನಿರ್ವಹಿಸಲು ಕಳುಹಿಸಿ, ಮೇಲ್ವಿಚಾರಕರಿಗೆ ಗೈರುಹಾಜರಾದ ಪೌರಕಾರ್ಮಿಕರನ್ನು ಗುರುತಿಸಲು ತಿಳಿಸಲಾಯಿತು. ಆದರಲ್ಲಿ ಮೇಲ್ವಿಚಾರಕರು 15 ಜನರನ್ನು ಗುರುತಿಸಿದ್ದಾರೆ. ಆ ಬಳಿಕ ಪೌರಕಾರ್ಮಿಕರಲ್ಲಿ ಒಬ್ಬರನ್ನು ಕರೆದು ಗೈರುಹಾಜರಾದವರನ್ನು ಪ್ರಾಮಾಣಿಕವಾಗಿ ಗುರುತಿಸಲಾಗಿದೆಯೇ ಎಂದು ಕೇಳಲಾಗಿ, ಮೇಲ್ವಿಚಾರಕರು ಹಾಜರಿದ್ದ 6 ಜನರನ್ನು ತಪ್ಪಾಗಿ ಗೈರುಹಾಜರು ಎಂದು ಗುರುತಿಸಿದ್ದಾರೆ. ಮೇಲ್ವಿಚಾರಕರ ಮೇಲೆ ಕ್ರಮಕ್ಕೆ ಸೂಚನೆ ನೀಡಲಾಗಿದೆ.

{ ಸಿ.ಟಿ.ರವಿ } ಎಂಎಲ್‌ಸಿ

ನಿಮ್ಮ ಕಾಂಗ್ರೆಸ್ ಪಕ್ಷದೊಳಗೆಯೇ ಅಸಮಾನತೆ ಇಲ್ವೇ ಸಿದ್ದರಾಮಯ್ಯನವರೇ? ನೀವೂ ಕೂಡ ಈ ಸಮಾನತೆಯ ಪೀಡಿತರೇ. ಇತ್ತೀಚೆಗೆ ರಾಹುಲ್ ಗಾಂಧಿಯವರ ಓಟ್ ಚೋರಿಯ ಆರೋಪ ಸರಿ ಅಲ್ಲ ಎಂದು ಸಾರ್ವಜನಿಕವಾಗಿ ಅಭಿಪ್ರಾಯ ವ್ಯಕ್ತಪಡಿಸಿದ ರಾಜಣ್ಣ ತಮ್ಮ ಸಚಿವ ಸಂಪುಟದ ಸ್ಥಾನವನ್ನೇ ತೊರೆಯಬೇಕಾಯಿತು. ಇದು ಅಸಮಾನತೆಯಲ್ಲವೇ?

16 ನಿಲ್ದಾಣಗಳ ಪೈಕಿ 11 ನಿಲ್ದಾಣಗಳಲ್ಲಿ ಮಾತ್ರ ವಾಹನ ಪಾರ್ಕಿಂಗ್ ವ್ಯವಸ್ಥೆ | ಎಲೆಕ್ಟ್ರಾನಿಕ್ ಸಿಟಿ ನಿಲ್ದಾಣದಲ್ಲಿ ಅತಿ ದೊಡ್ಡ ಪಾರ್ಕಿಂಗ್

ಹಳದಿ ಮೆಟ್ರೋ ಮಾರ್ಗದಲ್ಲಿ ಪಾರ್ಕಿಂಗ್ ಕೊಡಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಮ್ಮ ಮೆಟ್ರೋದ ಹಳದಿ ಮಾರ್ಗದ ಎಲ್ಲಾ ನಿಲ್ದಾಣಗಳಲ್ಲಿಯೂ ವಾಹನ ಪಾರ್ಕಿಂಗ್ ಸೌಲಭ್ಯವನ್ನು ಕಲ್ಪಿಸಬೇಕು ಎನ್ನುವ ಒತ್ತಾಯಗಳು ಕೇಳಿ ಬಂದಿದೆ.

ಹಳದಿ ಮಾರ್ಗದಲ್ಲಿ ಒಟ್ಟು 16 ನಿಲ್ದಾಣಗಳ ಪೈಕಿ 11 ನಿಲ್ದಾಣಗಳಲ್ಲಿ ಮಾತ್ರ ವಾಹನ ಪಾರ್ಕಿಂಗ್ ವ್ಯವಸ್ಥೆ ಯಿದ್ದು, ಎಲ್ಲಾ ನಿಲ್ದಾಣಗಳಲ್ಲಿಯೂ ಈ ವ್ಯವಸ್ಥೆಯನ್ನು ಕಲ್ಪಿಸಬೇಕು ಎನ್ನುವ ಒತ್ತಡಗಳು ಕೇಳಿ ಬಂದಿದೆ. ನಗರದಲ್ಲಿ ನಿತ್ಯ 10 ಲಕ್ಷಕ್ಕೂ ಅಧಿಕ ಮಂದಿ ನಮ್ಮ ಮೆಟ್ರೋ ರೈಲುಗಳಲ್ಲಿ ಸಂಚರಿಸುತ್ತಿದ್ದು, ಈ ಪೈಕಿ ಹಳದಿ ಮಾರ್ಗದಲ್ಲಿ 60 ರಿಂದ 70 ಸಾವಿರ ಮಂದಿ ಪ್ರಯಾಣ ಮಾಡುತ್ತಾರೆ. ಸಾವಿರಾರು ಮಂದಿ ಮನೆಗಳಿಂದ ನಿಲ್ದಾಣಕ್ಕೆ ಕಾರ್, ಬೈಕಿನಲ್ಲಿ ಬಂದು ಅಲ್ಲಿಂದ ಮೆಟ್ರೋ ರೈಲುಗಳಲ್ಲಿ ಸಂಚಾರ ನಡೆಸುತ್ತಾರೆ.

ಸದ್ಯ ಹಳದಿ ಮಾರ್ಗದ 11 ನಿಲ್ದಾಣಗಳಲ್ಲಿ ಮಾತ್ರ ವಾಹನ ನಿಲುಗಡೆ ಸೌಲಭ್ಯವಿದೆ. ಎಲೆಕ್ಟ್ರಾನಿಕ್ ಸಿಟಿ ನಿಲ್ದಾಣ ದಲ್ಲಿ 800 ವಾಹನ ನಿಲ್ಲಿಸುವ ಅತಿ ದೊಡ್ಡ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ.

ನಮ್ಮ ಮೆಟ್ರೋ ಹಸಿರು ಮಾರ್ಗ ಹಾಗೂ ಹಳದಿ ಮಾರ್ಗವನ್ನು ಸಂಪರ್ಕಿಸುವ ಆರ್‌ವಿ ರಸ್ತೆ ನಿಲ್ದಾಣದಲ್ಲಿಯೇ ವಾಹನ ನಿಲುಗಡೆಗೆ ಸ್ಥಳವಿಲ್ಲ. ಸಾಕಷ್ಟು ಮಂದಿ ಈ ನಿಲ್ದಾಣದಿಂದ ಎಲೆಕ್ಟ್ರಾನಿಕ್ ಸಿಟಿ ಕಡೆಗೆ ತೆರಳುವ ಹಿನ್ನೆಲೆ ಪಾರ್ಕಿಂಗ್ ಸೌಲಭ್ಯ ಅಗತ್ಯವಿದ್ದು, ಶೀಘ್ರದಲ್ಲಿ ನಮ್ಮ ಮೆಟ್ರೋವು ಈ ಕುರಿತು ಕ್ರಮ ಕೈಗೊಳ್ಳಬೇಕು ಎಂಬ ಒತ್ತಾಯ ಕೇಳಿಬಂದಿದೆ.

ಪಾರ್ಕಿಂಗ್ ವ್ಯವಸ್ಥೆಯಿರುವ ನಿಲ್ದಾಣಗಳು

- ರಾಗಿಗುಡ್ಡ
- ಬಿಟಿಎಂ ಲೇಔಟ್
- ಸೆಂಟ್ರಲ್ ಸಿಲ್ಕ್ ಬೋರ್ಡ್
- ಬೊಮ್ಮನಹಳ್ಳಿ
- ಹೊಂಗಸಂದ್ರ
- ಕುಡ್ಲು ಗೇಟ್
- ಹೊಸ ರಸ್ತೆ
- ಎಲೆಕ್ಟ್ರಾನಿಕ್ ಸಿಟಿ
- ಇನ್ಫೋಸಿಸ್ ಫೌಂಡೇಶನ್
- ಕೊನಪ್ಪನ ಅಗ್ರಹಾರ
- ಬಯೋಕಾನ್ ಹೆಬ್ಬಗೋಡಿ
- ಡೆಲ್ಟಾ ಎಲೆಕ್ಟ್ರಾನಿಕ್ಸ್ ಬೊಮ್ಮಸಂದ

19 ಕಿ.ಮೀ ಉದ್ದದ ಹಳದಿ ಮಾರ್ಗ ನಿರ್ಮಾಣಕ್ಕೆ ನಮ್ಮ ಮೆಟ್ರೋವು ಸುಮಾರು 2,000 ಕೋಟಿ ರು.ಗಳನ್ನು ಭೂಮಿ ಸ್ವಾಧೀನಕ್ಕೆ ಖರ್ಚು ಮಾಡಿದ್ದು, ಸಾಧ್ಯವಿರುವಲ್ಲಿ ಪ್ರಯಾಣಿಕರಿಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿದೆ. ಆರ್‌ವಿ ರಸ್ತೆಯಲ್ಲಿ ನಿಲ್ದಾಣಕ್ಕಾಗಿ ಉದ್ಯಾನವನದ ಜಾಗವನ್ನು ಸ್ವಾಧೀನ ಪಡಿಸಿಕೊಳ್ಳಬೇಕಾಯಿತು.

ಇದರಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು. ಹೊಸೂರು ರಸ್ತೆಯಲ್ಲಿ, ಯೋಜನೆಯನ್ನು ಕೈಗೆತ್ತಿಕೊಳ್ಳುವ ಹೊತ್ತಿಗೆ ರಾಷ್ಟ್ರೀಯ ಹೆದ್ದಾರಿಯ ಸರ್ವಿಸ್ ರಸ್ತೆಗಳಲ್ಲಿ ಈಗಾಗಲೇ ಸಾಕಷ್ಟು ಅಭಿವೃದ್ಧಿ ಆಗಿತ್ತು. ಖಾಸಗಿ ಜಮೀನು ಗಳನ್ನು ಮತ್ತು ಕಟ್ಟಡಗಳನ್ನು ಸ್ವಾಧೀನ ಪಡಿಸಿಕೊಳ್ಳುವುದು ದುಬಾರಿಯಾಗಿದೆ ಎಂದು ಮೆಟ್ರೋ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ಮೆಟ್ರೋದಲ್ಲಿ ಪಾರ್ಕಿಂಗ್ ಸಮಸ್ಯೆ: ನಮ್ಮ ಮೆಟ್ರೋ ನಿಲ್ದಾಣಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಸರಿಯಾಗಿಲ್ಲ. ಶೇ.21 ರಷ್ಟು ನಿಲ್ದಾಣಗಳಲ್ಲಿ ಪಾರ್ಕಿಂಗ್ ಸ್ಥಳವೇ ಇಲ್ಲ. ಪ್ರತಿ 10,000 ಮೆಟ್ರೋ ಪ್ರಯಾಣಿಕರಿಗೆ ಕೇವಲ 150 ಪಾರ್ಕಿಂಗ್ ಸ್ಥಳಗಳಿದ್ದು, 127 ದ್ವಿಚಕ್ರ ವಾಹನಗಳಿಗೆ ಮತ್ತು ಉಳಿದವು ಕಾರುಗಳಿಗೆ ಮೀಸಲಿಡಲಾಗಿದೆ. ಇದರಿಂದ ವಾಹನ ಸವಾರರಿಗೆ ಪ್ರತಿ ದಿನ ಪಾರ್ಕಿಂಗ್ ಸಿಗುವುದು ಕಷ್ಟವಾಗಿದೆ.

ಪಾರ್ಕಿಂಗ್ ಹುಡುಕುವ ಬದಲು, ಅನೇಕರು ಮೆಟ್ರೋ ಬಳಸುವುದನ್ನು ಬಿಟ್ಟು ಬೈಕ್ ಅಥವಾ ಕಾರಿನಲ್ಲಿ ಕಚೇರಿಗೆ ಹೋಗಲು ನಿರ್ಧರಿಸುತ್ತಾರೆ. ಮೆಟ್ರೋ ಯೋಜನೆಯನ್ನು ಪ್ರಾರಂಭಿಸಿದಾಗಿನಿಂದ ಪಾರ್ಕಿಂಗ್ ವ್ಯವಸ್ಥೆಗೆ ಹೆಚ್ಚು ಗಮನ ಕೊಡಲಿಲ್ಲ. ಫೀಡರ್ ಸೇವೆಗಳು ಸರಿಯಾಗಿಲ್ಲ, ಕ್ಯಾಬ್ ಮತ್ತು ಆಟೋ ದರಗಳು ಹೆಚ್ಚಿವೆ, ಬೈಕ್ ಟ್ಯಾಕ್ಸಿಗಳು ಲಭ್ಯವಿಲ್ಲ. ಇದರಿಂದ ಜನರು ತೊಂದರೆ ಅನುಭವಿಸುತ್ತಿದ್ದಾರೆ.

66 ನಿಲ್ದಾಣಗಳಲ್ಲಿ ಮಾತ್ರ ಪಾರ್ಕಿಂಗ್ ಸೌಲಭ್ಯ: ನಮ್ಮ ಮೆಟ್ರೋದಲ್ಲಿ ಪ್ರತಿದಿನ 10 ಲಕ್ಷಕ್ಕೂ ಹೆಚ್ಚು ಜನರು ಪ್ರಯಾಣಿಸುತ್ತಾರೆ. 96 ಕಿ.ಮೀ ವ್ಯಾಪ್ತಿಯಲ್ಲಿ 83 ನಿಲ್ದಾಣಗಳಿವೆ.

ಆದರೆ, ಕೇವಲ 66 ನಿಲ್ದಾಣಗಳಲ್ಲಿ ಮಾತ್ರ ಪಾರ್ಕಿಂಗ್ ವ್ಯವಸ್ಥೆ ಇದೆ. ಇಲ್ಲಿ 12,700 ದ್ವಿಚಕ್ರ ವಾಹನಗಳು ಮತ್ತು 2,300 ಕಾರು ಗಳನ್ನು ನಿಲ್ಲಿಸಬಹುದಾಗಿದೆ.

ಎಷ್ಟು ವಾಹನಕ್ಕೆ ಅವಕಾಶ?

- ರಾಗಿಗುಡ್ಡ 220
- ಬಿಟಿಎಂ ಲೇಔಟ್ 216
- ಸೆಂಟ್ರಲ್ ಸಿಲ್ಕ್ ಬೋರ್ಡ್ 230
- ಬೊಮ್ಮನಹಳ್ಳಿ 85
- ಎಲೆಕ್ಟ್ರಾನಿಕ್ ಸಿಟಿ 851 (36 ಕಾರುಗಳು)
- ಇನ್ಫೋಸಿಸ್ ಫೌಂಡೇಶನ್
- ಕೊನಪ್ಪನ ಅಗ್ರಹಾರ 77
- ಬಯೋಕಾನ್ ಹೆಬ್ಬಗೋಡಿ 150
- ಡೆಲ್ಟಾ ಎಲೆಕ್ಟ್ರಾನಿಕ್ಸ್ ಬೊಮ್ಮಸಂದ್ರ 92
- ಹೊಂಗಸಂದ್ರ 155
- ಕುಡ್ಲು ಗೇಟ್ 85
- ಹೊಸ ರಸ್ತೆ 90

ವೈದ್ಯರು ಮಾತೃ ಇಲಾಖೆಗೆ ವಾಪಸ್

ಬೆಂಗಳೂರು: ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯಲ್ಲಿ ನಿಯಮಬಾಹಿರವಾಗಿ ಕಾರ್ಯನಿರ್ವಹಿಸುತ್ತಿರುವ ವೈದ್ಯರನ್ನು ಮಾತೃ ಇಲಾಖೆಗೆ ವಾಪಸ್ ಕಳುಹಿಸುವಲ್ಲಿ ಆರೋಗ್ಯ ಇಲಾಖೆ ಕೊನೆಗೂ ಯಶಸ್ವಿಯಾಗಿದೆ. ಇಲಾಖೆಯ ಅಂಕಿತಾಧಿಕಾರಿಗಳ ಹುದ್ದೆಯನ್ನು ಕಂದಾಯ ಇಲಾಖೆಯ ಉಪ ವಿಭಾಗಾಧಿಕಾರಿಗಳಿಗೆ ವಹಿಸಲು ಸರಕಾರ ತಾತ್ವಿಕವಾಗಿ ಅನುಮೋದಿಸಿದೆ. ಇದರ ಸಂಬಂಧಪಟ್ಟಂತೆ ಆರೋಗ್ಯ ಇಲಾಖೆ ಗುರುವಾರ ಆದೇಶ ಹೊರಡಿಸಿದೆ.

ಈ ಆದೇಶವು ಉಪವಿಭಾಗಾಧಿಕಾರಿಗಳನ್ನು ಅಂಕಿತಾಧಿಕಾರಿಗಳಾಗಿ ಅಧಿಸೂಚಿಸಲು ಹೈಕೋರ್ಟ್ ನೀಡಿರುವ ನಿರ್ದೇಶನಗಳಿಗೆ ಬದ್ಧರಾಗಿತಕ್ಕದ್ದು. ಇವರಿಗೆ ಆಹಾರ ಪ್ರಾಧಿಕಾರ ನಿಗದಿಪಡಿಸಿದ ತರಬೇತಿ ನೀಡಲು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ಆಯುಕ್ತ ಕ್ರಮವಹಿಸಬೇಕು ಎಂದು ಆದೇಶದಲ್ಲಿ ಆರೋಗ್ಯ ಇಲಾಖೆ ಹೇಳಿದೆ. ಅಂಕಿತಾಧಿಕಾರಿಗಳ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 18 ವೈದ್ಯರು ಮುಂದಿನ ಸ್ಥಳ ನಿಯುಕ್ತಿಗಾಗಿ ಮಾತೃ ಇಲಾಖೆಯಾದ ಆರೋಗ್ಯ ಇಲಾಖೆ ಆಯುಕ್ತರ ಬಳಿ ವರದಿ ಮಾಡಿಕೊಳ್ಳಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ರಾಮಚಂದ್ರ ಹೆಗಡೆ ಪಾತ್ರ ಮುಂದಿನ ಪೀಳಿಗೆಗೆ ತಲುಪಬೇಕು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಯಕ್ಷಗಾನ ಕಲೆಯ ಶ್ರೇಷ್ಠ ಕಲಾವಿದರಾಗಿರುವ ಕೊಂಡದಕುಳಿ ರಾಮಚಂದ್ರ ಹೆಗಡೆ ಅವರ ಪಾತ್ರಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಕೆಲಸವಾಗಬೇಕು ಎಂದು ಹಿರಿಯ ಯಕ್ಷಗಾನ ಕಲಾವಿದ ಬಳ್ಕೂರು ಕೃಷ್ಣಯಾಜಿ ಅಭಿಪ್ರಾಯ ಪಟ್ಟರು.

ಮಹಾಲಕ್ಷ್ಮಿ ಲೇಔಟ್‌ನ ಪ್ರಸನ್ನ ವೀರಾಂಜನೇಯ ಸ್ವಾಮಿ ದೇವಸ್ಥಾನದ ಎನ್.ಲಕ್ಷ್ಮಣರಾವ್ ಕಲಾಮಂದಿರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಯಕ್ಷಚಂದ್ರ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಮಚಂದ್ರ ಹೆಗಡೆ ಅವರ ಯಕ್ಷಗಾನ ಪಾತ್ರಗಳು ಹೇಗಿತ್ತು ಎನ್ನುವುದು ಈ ಪೀಳಿಗೆಗೆ ಗೊತ್ತಿಲ್ಲ. ಅವರ ಯಕ್ಷಗಾನ ಪಾತ್ರಗಳನ್ನು ಮುಂದಿನ ಪೀಳಿಗೆಗೂ ನೋಡುವ ಅವಕಾಶ ಸಿಗಬೇಕು. ಈ ನಿಟ್ಟಿನಲ್ಲಿ ಕೊಂಡದಕುಳಿ ಅವರ ಯಕ್ಷಗಾನದ ಪಾತ್ರಗಳನ್ನು ವೇಷ ಸಮೇತ ದಾಖಲೀಕರಣಗೊಂಡು ಅದು ಮುಂದಿನ ಪೀಳಿಗೆಗೆ ಮಾರ್ಗದರ್ಶನ ಒದಗಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಯಕ್ಷಚಂದ್ರ ಪುಸ್ತಕ ಬಿಡುಗಡೆಗೊಳಿಸಲಾಯಿತು. ಯಕ್ಷಗಾನ ಕಲಾವಿದ ಕೊಂಡದಕುಳಿ ರಾಮಚಂದ್ರ ಹೆಗಡೆ, ಅವರ ಪತ್ನಿ ಚೇತನಾ ಹೆಗಡೆ, ಪುತ್ರಿ ಅಶ್ವಿನಿ ಕೊಂಡದಕುಳಿ ಅವರನ್ನು ಅಭಿನಂದಿಸಲಾಯಿತು. ಪ್ರೊ.ಕೆ.ಇ.ರಾಧಾಕೃಷ್ಣ, ಉದಯವಾಣಿ ಪ್ರಧಾನ ಸಂಪಾದಕ ರವಿಶಂಕರ್ ಭಟ್, ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್, ಪುಸ್ತಕದ ಲೇಖಕ ರಾಘವೇಂದ್ರ ಭಟ್, ವಿದುಷಿ ಟಿ.ಎಸ್.ಸತ್ಯವತಿ, ಶ್ರೀಪಾದ್ ಹೆಗಡೆ, ಅಜಿತ್ ಹೆಗ್ಡೆ ಶಾನಾಡಿ, ಮೋಹನ ಹೆಗಡೆ ಹೆರವಟ್ಟಾ, ವಿದ್ವಾನ್ ಮಾರುತಿ ಪ್ರಸಾದ್, ವಿನಾಯಕ ಶೀಗೆಹಳ್ಳಿ, ಪ್ರಶಾಂತ ವರ್ಧನ್, ಸತೀಶ್ ಭಟ್ಟ ಮೂಡ್ಕಣಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಹಿರಿಯ ಯಕ್ಷಗಾನ ಕಲಾವಿದ ಬಳ್ಕೂರು ಕೃಷ್ಣಯಾಜಿ ಅವರು ಯಕ್ಷಚಂದ್ರ ಪುಸ್ತಕ ಬಿಡುಗಡೆ ಮಾಡಿದರು.

ಹೊಸಬರ ಪಾತ್ರ ಉತ್ತಮವಾಗಿರುವುದಿಲ್ಲ ಎನ್ನುವ ಭಾವನೆ

ಹಿರಿಯ ಕಲಾವಿದರೂ ನಾವು ಪ್ರದರ್ಶನ ಮಾಡಿದರೆ ಮಾತ್ರ ಉತ್ತಮವಾಗಿರುತ್ತದೆ. ಹೊಸ ಕಲಾವಿದರು ಯಕ್ಷಗಾನ ಪಾತ್ರ ಮಾಡಿದ್ದರೆ ಉತ್ತಮವಾಗಿರುವುದಿಲ್ಲ ಎನ್ನುವ ಭಾವನೆಯನ್ನು ಬಿತ್ತುತ್ತಿದ್ದಾರೆ. ಇದು ಯಕ್ಷಗಾನಕ್ಕೆ ಮಾಡಿದ ದೊಡ್ಡ ಅಪಚಾರ. ಅದೇ ರೀತಿ ವಿಮರ್ಶಕರು ಕೂಡ ಒಂದು ಪಾತ್ರ ಹೀಗೆ ಇರಬೇಕು ಹೇಳುವುದನ್ನು ಕೆರೆ ಮನೆಗೆ ಸೀಮಿತಗೊಳಿಸಿದ್ದಾರೆ. ಅಲ್ಲಿಂದ ಮುಂದೆ ಬಂದಿಲ್ಲ. ಹಿಂದಿನವರು ಮಾಡಿದ ಪಾತ್ರವನ್ನು ಪಾತ್ರವಾಗಿ ನೋಡದೆ, ಪಾತ್ರವನ್ನು ವ್ಯಕ್ತಿಯಾಗಿ ನೋಡಿ ವಿಮರ್ಶೆ ಮಾಡಿದ್ದಾರೆ. ಹೀಗಾಗಿ, ಹಿರಿಯ ಕಲಾವಿದರು ಮತ್ತು ವಿಮರ್ಶಕ ಎಲ್ಲರಿಗೂ ಆಕ್ಷೇಪ ವ್ಯಕ್ತಪಡಿಸಿದ್ದೇನೆ ಎಂದು ಯಕ್ಷಗಾನ ಕಲಾವಿದ ಕೊಂಡದಕುಳಿ ರಾಮಚಂದ್ರ ಹೆಗಡೆ ಹೇಳಿದರು.

ಇಂದಿನಿಂದ 3 ದಿನ ನಗರಕ್ಕೆ ನೀರಿಲ್ಲ

ಬೆಂಗಳೂರು: ತುರ್ತು ನಿರ್ವಹಣಾ ಕಾಮಗಾರಿ ಹಿನ್ನೆಲೆ ಕಾವೇರಿ ನೀರು ಸರಬರಾಜು ಯೋಜನೆಯ ವಿವಿಧ ಹಂತಗಳ ಜಲರೇಚಕ ಯಂತ್ರಾಗಾರಗಳನ್ನು ಇಂದಿನಿಂದ ಸೆ.17ರವರೆಗೆ ಸ್ಥಗಿತಗೊಳಿಸಲಾಗುತ್ತಿರುವುದರಿಂದ ನೀರಿನ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಯಂತ್ರಾಗಾರಗಳನ್ನು ಸ್ಥಗಿತಗೊಳಿಸುವುದರಿಂದ ಕಾವೇರಿ ನೀರಿನ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಇಂದಿನಿಂದ ಮೂರು ದಿನಗಳ ಕಾಲ ಸಂಚಾರಿ ಕಾವೇರಿ ಯೋಜನೆಗಳ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಸೇವೆಯನ್ನು ಸ್ಥಗಿತಗೊಳಿಸಲಾಗುವುದು. ಈ ಟ್ಯಾಂಕರ್‌ಗಳನ್ನು ತುರ್ತು ನೀರಿನ ಸರಬರಾಜಿಗಾಗಿ ಮಾತ್ರ ಬಳಸಿಕೊಳ್ಳಲಾಗುವುದು ಎಂದರು.

ಸಂಚಾರಿ ಕಾವೇರಿ ಯೋಜನೆ ಮೂರು ದಿನ ಸ್ಥಗಿತ

ಸಂಚಾರಿ ಕಾವೇರಿ ಯೋಜನೆಯ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಸೇವೆಯನ್ನು ಸ್ಥಗಿತಗೊಳಿಸಿ, ತುರ್ತು ನೀರು ಸರಬರಾಜಿಗಾಗಿ ಬಳಸಿಕೊಳ್ಳಲಾಗುವುದು. ಇದರಿಂದ ಸಂಚಾರಿ ಕಾವೇರಿ ಯೋಜನೆಯ ಸೇವೆಯಲ್ಲಿ ಈ ಮೂರು ದಿನಗಳ ಕಾಲ ವ್ಯತ್ಯಯವಾಗಲಿದೆ . ಕಾವೇರಿ ನೀರು ಸರಬರಾಜಾಗುವ ಪ್ರದೇಶಗಳ ನಾಗರಿಕರು ಮುಂಜಾಗ್ರತೆಯಾಗಿ ಅಗತ್ಯವಿರುವ ನೀರನ್ನು ಸಂಗ್ರಹಣೆ ಮಾಡಿಕೊಳ್ಳಲು ಅವರು ಕೋರಿದ್ದಾರೆ.

ಗ್ರೇಟರ್ ಬೆಂಗಳೂರು ನಗರದ ಜನತೆಗೆ ಯಾವುದೇ ಅಡೆತಡೆಯಿಲ್ಲದೆ ಕುಡಿಯುವ ನೀರಿನ ಸರಬರಾಜು ಮಾಡುವುದಕ್ಕಾಗಿ ಹಾಗೂ ಕಾವೇರಿ ನೀರಿನ ಸರಬರಾಜು ಯೋಜನೆಯ ಜಲರೇಚಕ ಯಂತ್ರಾಗಾರಗಳನ್ನು ಮತ್ತು ಮುಖ್ಯ ಕೊಳವೆ ಮಾರ್ಗಗಳ ಸುಲಲಿತ ಚಾಲನೆಯನ್ನು ಸರಿಪಡಿಸಲು ಮತ್ತು ಕೊಳವೆಗಳನ್ನು ಸುಸ್ಥಿತಿಯಲ್ಲಿಡಲು ಜಲಮಂಡಳಿಯು ವಿವಿಧೆಡೆ ನಿಯಮಿತ ತುರ್ತು ನಿರ್ವಹಣೆಯ ಕಾಮಗಾರಿಗಳನ್ನು ಕೈಗೊಳ್ಳುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

ಕಾವೇರಿ 5ನೇ ಹಂತದ ಜಲರೇಚಕ ಯಂತ್ರಾಗಾರಗಳು (ಪಂಪಿಂಗ್ ಸ್ಟೇಷನ್) ಸೆ.15 ರ ನಸುಕಿನ ಜಾವ 1 ಗಂಟೆಯಿಂದ ಸೆ.17ರ ಮಧ್ಯಾಹ್ನ 1 ಗಂಟೆವರೆಗೆ ಒಟ್ಟು 60 ಗಂಟೆಗಳ ಕಾಲ ಬಂದ್ ಇರಲಿದೆ. ಕಾವೇರಿ ನೀರು ಸರಬರಾಜು ಯೋಜನೆಯ ಹಂತ–1, ಹಂತ–2, ಹಂತ–3, ಹಂತ–4 ರ 1ನೇ ಘಟ್ಟ ಮತ್ತು 2ನೇ ಘಟ್ಟಗಳ ಜಲರೇಚಕ ಯಂತ್ರಗಾರಗಳನ್ನು ಸೆ.16 ರ ಬೆಳಗ್ಗೆ 6ರಿಂದ ಸೆ.17ರ ಬೆಳಗ್ಗೆ 6ರವರೆಗೆ ಒಟ್ಟು 24 ಗಂಟೆಗಳ ಕಾಲ ಸ್ಥಗಿತಗೊಳಿಸಲಾಗುತ್ತಿದೆ ಎಂದಿದ್ದಾರೆ.

ಎಚ್‌ಎಎಲ್ ನಿಲ್ದಾಣ ಪುನಾರಂಭ?

ಬೆಂಗಳೂರು: ಬೆಂಗಳೂರಿನಲ್ಲಿ ಎರಡನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಮಾಣಕ್ಕೂ ಮೊದಲೇ ಎಚ್‌ಎಎಲ್‌ನ ಹಳೆಯ ವಿಮಾನ ನಿಲ್ದಾಣವನ್ನು ಪುನಾರಂಭಿಸಲು ಸರಕಾರ ಚಿಂತನೆ ನಡೆಸಿದೆ.

ಈ ಯೋಜನೆಯು ಕಾರ್ಯರೂಪಕ್ಕೆ ಬಂದಿರೆ ಕೆಐಎ ಮೇಲಿನ ಒತ್ತಡವು ಕಡಿಮೆಯಾಗಲಿದ್ದು, ದೇಶೀಯ ಪ್ರಯಾಣಿಕರಿಗೆ ಭಾರೀ ಅನುಕೂಲವಾಗಲಿದೆ. ಈ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರಕಾರವು ಚರ್ಚೆ ನಡೆಸಿದ್ದು, ಎರಡನೇ ವಿಮಾನ ನಿಲ್ದಾಣದ ಆರಂಭಕ್ಕೂ ಮೊದಲೇ ಹಳೆಯ ವಿಮಾನ ನಿಲ್ದಾಣವು ಪುನಃ ಕಾರ್ಯಾರಂಭ ಮಾಡುವ ಸಾಧ್ಯತೆ ದಟ್ಟವಾಗಿದೆ.

ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತದ ಜತೆಗಿನ ಒಪ್ಪಂದ 2033 ರಲ್ಲಿ ಮುಗಿಯುವುದಕ್ಕೂ ಮುನ್ನವೇ ಎಚ್‌ಎಎಲ್ ವಿಮಾನ ನಿಲ್ದಾಣವನ್ನು ಪುನಃ ಆರಂಭಿಸಲು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಬಿರುಸಿನ ಸಿದ್ಧತೆ ನಡೆಸಿದೆ. ಎಚ್‌ಎಎಲ್ ವಿಮಾನ ನಿಲ್ದಾಣ ವನ್ನು 2033ರ ಒಳಗಡೆಯೇ ಪುನಃ ವಾಣಿಜ್ಯ ಸಂಚಾರಕ್ಕೆ ತೆರೆಯುವ ಬಗ್ಗೆ ಚರ್ಚೆಯಾಗುತ್ತಿದ್ದು, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತದ ಜತೆಗೆ ಮಾತುಕತೆ ನಡೆಯುತ್ತಿದೆ.

ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತದ ಜತೆಗಿನ ಸರಕಾರದ ವಿಶೇಷ ಒಪ್ಪಂದ 2033ರ ಮೇ ತಿಂಗಳಲ್ಲಿ ಮುಕ್ತಾಯ ಗೊಳ್ಳಲಿದ್ದು, ಆ ಒಪ್ಪಂದದ ಪ್ರಕಾರ, ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ 150 ಕಿ.ಮೀ ವ್ಯಾಪ್ತಿಯಲ್ಲಿ ಬೇರೊಂದು ವಿಮಾನ ನಿಲ್ದಾಣ ಕಾರ್ಯನಿರ್ವಹಿಸುವಂತಿಲ್ಲ. ಅದು ಹೊಸ ವಿಮಾನ ನಿಲ್ದಾಣ ಶುರುವಿಗೆ ಅಡ್ಡಿಯಾಗಿತ್ತು. ಆದರೆ, ಈಗ ಆ ಒಪ್ಪಂದ ಮುಗಿಯುವ ಮೊದಲೇ ಎಚ್‌ಎಎಲ್ ವಿಮಾನ ನಿಲ್ದಾಣ ತೆರೆಯಲು ತೀವ್ರ ಪ್ರಯತ್ನಗಳು ನಡೆದಿವೆ.

ಕೇಂದ್ರದ ಪ್ರಸ್ತಾಪಕ್ಕೆ ರಾಜ್ಯ ಸರಕಾರದ ಸಮ್ಮತಿ

ಎಚ್‌ಎಎಲ್ ಏರ್‌ಪೋರ್ಟ್‌ನ್ನು ಪುನಃ ಪ್ರಾರಂಭಿಸುವ ಪ್ರಸ್ತಾಪಕ್ಕೆ ಕರ್ನಾಟಕ ಸರಕಾರವು ಸಂಪೂರ್ಣ ಬೆಂಬಲವನ್ನು ಸೂಚಿಸಿದ್ದು, ಎಚ್‌ಎಎಲ್‌ನಲ್ಲಿ ಸಂಚಾರವನ್ನು ಆರಂಭಿಸುವುದರಿಂದ ಬಿಐಎಎಲ್‌ಗೆ ಯಾವುದೇ ನಷ್ಟವಾದರೆ, ಅದನ್ನು ರಾಜ್ಯಸರಕಾರವೇ ಭರಿಸಲಿದೆ ಎಂದು ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಬಿಐಎಎಲ್‌ಗೆ ಭರವಸೆ ನೀಡಿದ್ದು, ಜತೆಗೆ ವಾಣಿಜ್ಯ ಹಾರಾಟಕ್ಕೆ ಅನುಮತಿ ನೀಡಲು ಶೀಘ್ರವಾಗಿ ನಿರಾಕ್ಷೇಪಣಾ ಪತ್ರ ನೀಡುವಂತೆ ಅವರು ಬಿಐಎಎಲ್‌ನ್ನು ಒತ್ತಾಯಿಸಿದ್ದಾರೆ ಎಂದು ವಿಮಾನ ನಿಲ್ದಾಣಗಳ ಪ್ರಾಧಿಕಾರದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ವಿದ್ಯುತ್ ಸಂಪರ್ಕ ಕಡಿತ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ವಿದ್ಯುತ್ ಸರಬರಾಜನ್ನು ಕಡಿತಗೊಳಿಸಲಾಗಿದ್ದು, ಮತ್ತೆ ಪುನರ್ ಸ್ಥಾಪನೆ ಸಾಧ್ಯವಾಗುವುದಿಲ್ಲ ಎನ್ನುವ ಮಾತುಗಳು ಕೇಳಿ ಬಂದಿದೆ.

ಕ್ರೀಡಾಂಗಣದಲ್ಲಿ ಅಗತ್ಯ ನಿಯಮಗಳನ್ನು ಉಲ್ಲಂಘಿಸಲಾಗಿರುವ ಹಿನ್ನೆಲೆ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಕೋರಿಕೆಯ ಹಿನ್ನೆಲೆ ಜೂನ್ 30 ರಂದು ಬೆಸ್ಕಾಂ ಕ್ರೀಡಾಂಗಣಕ್ಕೆ ವಿದ್ಯುತ್ ಸರಬರಾಜನ್ನು ಕಡಿತಗೊಳಿಸಿದೆ. ಜೂನ್ 4ರಂದು ಆರ್‌ಸಿಬಿ ತಂಡದ ವಿಜಯೋತ್ಸವದ ಸಂದರ್ಭದಲ್ಲಿ ಕ್ರೀಡಾಂಗಣದ ಬಳಿ ಸಂಭವಿಸಿದ ಭೀಕರ ಕಾಲ್ತುಳಿತದ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದ್ದು, ಈ ಘಟನೆಯಲ್ಲಿ 11 ಜನರು ಸಾವಿಗೀಡಾದರು ಮತ್ತು 71 ಜನರು ಗಾಯಗೊಂಡರು.

ಅಗ್ನಿ ಸುರಕ್ಷತಾ ನಿಯಮಗಳನ್ನು ಪಾಲಿಸಿಲ್ಲ: ದೊಡ್ಡ ಶ್ರೇಣಿಯ ಸೌರ ಫಲಕಗಳಿಂದ ತನ್ನ ವಿದ್ಯುತ್ ಬೇಡಿಕೆಯ ಒಂದು ಭಾಗವನ್ನು ಪೂರೈಸಿದ ನಂತರವೂ ಕ್ರೀಡಾಂಗಣದಲ್ಲಿ ಹೆಚ್ಚಿನ ಸಂಖ್ಯೆಯ ಡೀಸೆಲ್ ಜನರೇಟರ್‌ಗಳನ್ನು ಬಳಸಲಾಗುತ್ತಿರುವುದು ತನಿಖೆಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ತಿಳಿದು ಬಂದಿದ್ದು, ಈ ಜನರೇಟರ್‌ಗಳಿಂದ ಉಂಟಾಗುವ ವಾಯು ಮತ್ತು ಶಬ್ದ ಮಾಲಿನ್ಯದ ಮಟ್ಟವನ್ನು ಪರಿಶೀಲಿಸುತ್ತಿದ್ದೇವೆ ಮತ್ತು ಡೇಟಾವನ್ನು ಸಂಗ್ರಹಿಸುತ್ತಿದ್ದೇವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಗ್ನಿಶಾಮಕ ಇಲಾಖೆಯ ಕೋರಿಕೆಯ ಮೇರೆಗೆ ಕ್ರೀಡಾಂಗಣಕ್ಕೆ ವಿದ್ಯುತ್ ಸರಬರಾಜನ್ನು ಕಡಿತಗೊಳಿಸಲಾಗಿದ್ದು, ಕ್ರೀಡಾಂಗಣದ ಆಡಳಿತ ಮಂಡಳಿಯು ವಿದ್ಯುತ್ ಸರಬರಾಜನ್ನು ಪುನಃ ಸ್ಥಾಪಿಸುವಂತೆ ವಿನಂತಿ ಮಾಡಿದೆ. ಆದರೆ, ನಾವು ಇನ್ನೂ ವಿದ್ಯುತ್ ಪುನಃ ಸ್ಥಾಪಿಸಿಲ್ಲ, ಅವರು ನ್ಯಾಯಾಲಯವನ್ನು ಸಹ ಸಂಪರ್ಕಿಸಿದ್ದರು. ಆದರೆ, ಅನುಮತಿ ನೀಡಿಲ್ಲ ಎಂದು ಬೆಸ್ಕಾಂ ಮೂಲಗಳು ತಿಳಿಸಿದೆ.

ಷಡ್ಯಂತ್ರ ಮಾಡಿದವರನ್ನು ಮುಟ್ಟದಂತೆ ಒತ್ತಡ

ಬೆಂಗಳೂರು: ಧರ್ಮಸ್ಥಳ ಪ್ರಕರಣದಲ್ಲಿ ಎಸ್‌ಐಟಿಗೆ ಷಡ್ಯಂತ್ರ ಮಾಡಿದವರನ್ನು ಮುಟ್ಟದಂತೆ ರಾಜಕೀಯ ಒತ್ತಡ ಇದೆ. ನಿರೀಕ್ಷೆಗೆ ತಕ್ಕಂತೆ ಎಸ್‌ಐಟಿ ತನಿಖೆ ನಡೆಯುತಿಲ್ಲ. ಪೊಲೀಸ್ ಪದ್ಧತಿ ಪ್ರಕಾರ ತನಿಖೆ ನಡೆಯುತ್ತಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಸ್ಕ್ ಮ್ಯಾನ್‌ನ ದೂರು ಹುಸಿಯಾದ ನಂತರ ಬೇರೆ ಬೇರೆ ದೂರುಗಳು ದಾಖಲಾಗುತ್ತಿವೆ. ಎಸ್‌ಐಟಿಗೆ ಉತ್ತರದಾಯಿತ್ವ ಇದೆ, ಜವಾಬ್ದಾರಿ ಇದೆ. ಶೀಘ್ರದಲ್ಲೇ ವರದಿ ಕೊಡಲಿ, ಇದುವರೆಗೆ ಆಗಿರುವ ತನಿಖೆ ಬಗ್ಗೆ ವರದಿ ಕೊಡಲಿ. ಎಸ್‌ಐಟಿಯವರು ಷಡ್ಯಂತ್ರ ಮಾಡಿದ ಮುಖ್ಯ ವ್ಯಕ್ತಿಗಳನ್ನೇ ಇನ್ನೂ ಮುಟ್ಟಿಲ್ಲ ಎಂದರು.

ಜಕ್ಕೂರು ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ವಾರ್ಷಿಕ ಮಹಾಸಭೆ | 12.87 ಲಕ್ಷ ರು. ಲಾಭಾಂಶ

ಬಡವರ ಸೇವೆಯೊಂದಿಗೆ ಸಹಕಾರ ಸಂಘದ ಏಳಿಗೆ ನಮ್ಮ ಗುರಿ

ಬ್ಯಾಟರಾಯನಪುರ: ಬಡವರ ಸೇವೆಯೊಂದಿಗೆ ಸಹಕಾರ ಸಂಘದ ಏಳಿಗೆ ನಮ್ಮ ಗುರಿಯಾಗಿದ್ದು, ಕಳೆದ ಏಳು ವರ್ಷಗಳಿಂದ ನಮ್ಮ ಸೊಸೈಟಿ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತ ವಾಗಿದ್ದು ತೃಪ್ತಿಕರವಾದ ಬೆಳವಣಿಗೆ ಕಾಣುತ್ತಿದೆ ಎಂದು ಜಕ್ಕೂರು ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ಸಂಸ್ಥಾಪಕ ಅಧ್ಯಕ್ಷ ಜಕ್ಕೂರು ರವಿಕುಮಾರ್ ಅಭಿಪ್ರಾಯಪಟ್ಟರು.

ಬ್ಯಾಟರಾಯನಪುರ ಕ್ಷೇತ್ರದ ಜಕ್ಕೂರು ಗ್ರಾಮದಲ್ಲಿ ಭಾನುವಾರ ಆಯೋಜಿಸಿದ್ದ ಜಕ್ಕೂರು ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ 2024–25ನೇ ಸಾಲಿನ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿ, ಸೊಸೈಟಿಯೂ 2136 ಸದಸ್ಯರನ್ನು ಹೊಂದಿದ್ದು, 1.41 ಕೋಟಿ ರು.ಗಳಷ್ಟು ದುಡಿಯುವ ಬಂಡವಾಳವಿದೆ. ಪ್ರಸಕ್ತ ವರ್ಷದಲ್ಲಿ ಸುಮಾರು 12.87 ಲಕ್ಷ ರು.ಗಳಷ್ಟು ಲಾಭಾಂಶ ಬಂದಿದೆ. ಈ ಪೈಕಿ ಶೇ. 8ರಂತೆ 10 ಷೇರಿಗೆ 800 ರು.ಗಳ ಡಿವಿಡೆಂಟ್ ಹಂಚಿಕೆ ಮಾಡಲಾಗಿದೆ. ಕಳೆದ 7 ವರ್ಷಗಳಲ್ಲಿ ಸುಮಾರು 883 ಜನರಿಗೆ 6.5 ಕೋಟಿ ರು.ಗಳಷ್ಟು ಸಾಲವನ್ನು ನೀಡಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಯಲ್ಲಿ ಉತ್ತೀರ್ಣರಾದ ಸದಸ್ಯರ ಮಕ್ಕಳಿಗೆ ಪ್ರೋತ್ಸಾಹಧನ ವಿತರಣೆ, ಮರಣ ಹೊಂದಿದ ಸದಸ್ಯರ ಕುಟುಂಬಸ್ಥರಿಗೆ 5 ಸಾವಿರ ರು.ಗಳ ಸಹಾಯಧನ ಸೇರಿದಂತೆ ವಿವಿಧ ಸವಲತ್ತುಗಳನ್ನು ವಿತರಿಸಲಾಯಿತು. ಇದೇ ಸಂದರ್ಭದಲ್ಲಿ ಸೊಸೈಟಿಯ ಉಪಾಧ್ಯಕ್ಷ ನಾಗರಾಜಪ್ಪ ವಿ., ನಿರ್ದೇಶಕರಾದ ವಿನೋದ್ ಕುಮಾರ್ ವ್ಯಾಸ, ರಮೇಶ್ ಬಿ.ಜಿ., ರತ್ನಮ್ಮ, ಸುಮಿತ್ರ, ವೀಣಾ ವೆಂಕಟೇಶ್, ರವೀಂದ್ರನಾಥಗೌಡ ಬಿ.ಕೆ., ಮಾರುತಿ ಎಸ್., ಸಿ.ಎ.ಚಿಕ್ಕಣ್ಣ, ಬಿ.ಎಂ.ಚಂದ್ರಶೇಖರ್, ಆಂಜಿನಪ್ಪ ಜಿ., ಇ.ಕೃಷ್ಣಪ್ಪ, ಮಂಜುನಾಥ್ ಆರ್., ಶ್ರೀಮಾಲಾ ವಿ.ಭಟ್, ಹಿರಿಯ ಕಾನೂನು ಸಲಹೆಗಾರ ರಾಮಚಂದ್ರಪ್ಪ ಎಸ್.ವಿ., ಸಿಇಒ ರಾಕೇಶ್ ಎಸ್.ಟಿ., ಯಶೋಧ, ಲಾವಣ್ಯ ಇದ್ದರು.

ಜಕ್ಕೂರು ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ 2024–25ನೇ ಸಾಲಿನ ವಾರ್ಷಿಕ ಮಹಾಸಭೆಯಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಯಲ್ಲಿ ಉತ್ತೀರ್ಣರಾದ ಸದಸ್ಯರ ಮಕ್ಕಳಿಗೆ ಪ್ರೋತ್ಸಾಹಧನ ವಿತರಣೆ, ಮರಣ ಹೊಂದಿದ ಸದಸ್ಯರ ಕುಟುಂಬಸ್ಥರಿಗೆ 5 ಸಾವಿರ ರು.ಗಳ ಸಹಾಯಧನ ಸೇರಿದಂತೆ ವಿವಿಧ ಸವಲತ್ತುಗಳನ್ನು ವಿತರಿಸಲಾಯಿತು.

ವರ್ಷದಿಂದ ವರ್ಷಕ್ಕೆ ಸದಸ್ಯರ ಸಂಖ್ಯೆಯನ್ನು ವೃದ್ಧಿಸಿಕೊಳ್ಳುತ್ತಾ, ಜತೆಗೆ ಬಡವರ ಸೇವೆ ಮಾಡುತ್ತಾ ಏಳಿಗೆ ಹೊಂದುತ್ತಿದ್ದು, ಸೇವೆಯನ್ನೇ ಮಹತ್ವದ ಗುರಿಯನ್ನಾಗಿಸಿಕೊಂಡು ಕಳೆದ ಎರಡು ವರ್ಷಗಳಿಂದಲೂ 'ಎ' ದರ್ಜೆಯ ಸಹಕಾರ ಸಂಘವಾಗಿ ಮುನ್ನಡೆದಿದೆ, ಮುಂದಿನ ದಿನಗಳಲ್ಲಿ ನಮ್ಮ ಸೊಸೈಟಿ ವತಿಯಿಂದ ಐ.ಎ.ಎಸ್, ಯು.ಪಿ.ಎಸ್.ಸಿ., ನೀಟ್ ಪರೀಕ್ಷೆ ಬರೆಯಲಿಚ್ಛಿಸುವ ವಿದ್ಯಾವಂತರಿಗೆ ಕೋಚಿಂಗ್ ಸೆಂಟರ್ ತೆರೆಯಲಾಗುವುದು.

-ಜಕ್ಕೂರು ರವಿಕುಮಾರ್, ಜಕ್ಕೂರು ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ಸಂಸ್ಥಾಪಕ ಅಧ್ಯಕ್ಷ

ಸಮಾಚಾರ ಸಣ್ಣದಲ್ಲ

ದುಲೀಪ್ ಟ್ರೋಫಿ: ಪ್ರಶಸ್ತಿಯತ್ತ ಕೇಂದ್ರ

ಬೆಂಗಳೂರು: ಇಲ್ಲಿನ ಬಿಸಿಸಿಐ ಮೈದಾನದಲ್ಲಿ ನಡೆಯುತ್ತಿರುವ ದುಲೀಪ್ ಟ್ರೋಫಿ ಫೈನಲ್ ಪಂದ್ಯದಲ್ಲಿ ಕೇಂದ್ರ ವಲಯ ಪ್ರಶಸ್ತಿ ಗೆಲ್ಲುವುದು ಖಚಿತವಾಗಿದೆ. ಭಾನುವಾರ ದಕ್ಷಿಣ ವಲಯ 2ನೇ ಇನಿಂಗ್ಸ್‌ನಲ್ಲಿ 426ಕ್ಕೆ (1ನೇ ಇನಿಂಗ್ಸ್ 149) ಆಲೌಟಾಯಿತು. ಅಲ್ಲಿಗೆ ಅದು ಕೇಂದ್ರವಲಯಕ್ಕೆ ಕೇವಲ 65 ರನ್‌ಗಳ ಸಾಮಾನ್ಯ ಗುರಿಯನ್ನು ನೀಡಿದೆ. ಸೋಮ ವಾರ ಕೆಲವೇ ಗಂಟೆಗಳಲ್ಲಿ ಕೇಂದ್ರವಲಯ ಈ ಗುರಿ ಮುಟ್ಟುವುದು ಖಚಿತವಾಗಿದೆ. ಕೇಂದ್ರ ವಲಯ 1ನೇ ಇನಿಂಗ್ಸ್‌ನಲ್ಲಿ 511 ರನ್ ಗಳಿಸಿತ್ತು.

ಬಿಸಿಸಿಐ ಸಭೆಗೆ ರಾಜ್ಯದ ರಘುರಾಮ್ ಭಟ್

ಮುಂಬೈ: ಸೆಪ್ಟೆಂಬರ್ 28ರಂದು ನಡೆಯುವ ಬಿಸಿಸಿಐ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ರಾಜ್ಯ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷ ರಘುರಾಮ್ ಭಟ್ ಪಾಲ್ಗೊಳ್ಳಲಿದ್ದಾರೆ. ಇನ್ನು ಪಂಜಾಬ್ ಕ್ರಿಕೆಟ್ ಸಂಸ್ಥೆಯನ್ನು ಹರ್ಭಜನ್ ಸಿಂಗ್, ಬಂಗಾಳ ಸಂಸ್ಥೆಯನ್ನು ಭಾರತ ಕ್ರಿಕೆಟ್ ಮಾಜಿ ನಾಯಕ ಸೌರವ್ ಗಂಗೂಲಿ ಪ್ರತಿನಿಧಿಸಲಿದ್ದಾರೆ. ಮಾಜಿ ಆಫ್ ಸ್ಪಿನ್ನರ್ ಹರ್ಭಜನ್ ಸಿಂಗ್ ಮೊದಲ ಬಾರಿಗೆ ಮತ್ತು ಗಂಗೂಲಿ ಮೂರು ವರ್ಷಗಳ ನಂತರ ವಾರ್ಷಿಕ ಈ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಅಲ್ಲಿಗೆ ಗಂಗೂಲಿ ಮತ್ತು ಹರ್ಭಜನ್ ಸಿಂಗ್ ಬಿಸಿಸಿಐನಲ್ಲಿ ಯಾವ ಪಾತ್ರ ವಹಿಸಲಿದ್ದಾರೆ ಎನ್ನುವುದು ಕುತೂಹಲ ಮೂಡಿಸಿದೆ. ಹರ್ಭಜನ್ ಉಪಸ್ಥಿತಿ ಬಿಸಿಸಿಐ ಆಡಳಿತದಲ್ಲಿ ಅವರಿಗೆ ದೊಡ್ಡ ಪಾತ್ರವನ್ನು ವಹಿಸುವ ಸಾಧ್ಯತೆಯನ್ನು ತೋರಿಸಿದೆ. ಜುಲೈನಲ್ಲಿ 70 ವರ್ಷ ತುಂಬಿದ ನಂತರ ಬಿಸಿಸಿಐ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿದ ರೋಜರ್ ಬಿನ್ನಿ, 2022 ರಲ್ಲಿ ಬಿಸಿಸಿಐ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದಾಗ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಪ್ರತಿನಿಧಿಯಾಗಿದ್ದರು. ಬಿಸಿಸಿಐ ಚುಕ್ಕಾಣಿ ಯಾರು ಹಿಡಿಯಲಿದ್ದಾರೆ ಎನ್ನುವುದು ಕುತೂಹಲಕರ. ಸಚಿನ್ ತೆಂಡುಲ್ಕರ್ ಈ ಸ್ಥಾನಕ್ಕೇರುವುದಿಲ್ಲ ಎಂದಿದ್ದಾರೆ.

1ನೇ ಮಹಿಳಾ ಏಕದಿನ: ಭಾರತಕ್ಕೆ ಸೋಲು

ನವ ಚಂಡೀಗಢ: ಭಾರತ-ಆಸ್ಟ್ರೇಲಿಯಾ ನಡುವಿನ ಮಹಿಳಾ ಏಕದಿನ ಸರಣಿಯ ಮೊದಲ ಪಂದ್ಯದಲ್ಲಿ ಆಸ್ಟ್ರೇಲಿಯಾ 8 ವಿಕೆಟ್‌ಗಳಿಂದ ಜಯ ಸಾಧಿಸಿದೆ. ಮೊದಲು ಬ್ಯಾಟ್ ಮಾಡಿದ ಭಾರತ ಪ್ರತೀಕಾ ರಾವಲ್ (64), ಸ್ಮೃತಿ ಮಂಧನಾ (58), ಹರ್ಲೀನ್ ದೇವಲ್ ರ (54) ಉತ್ತಮ ಬ್ಯಾಟಿಂಗ್ ನೆರವಿನಿಂದ 50 ಓವರ್‌ಗಳಲ್ಲಿ 7 ವಿಕೆಟ್‌ಗೆ 281 ರನ್ ಗಳಿಸಿತು. ಇದನ್ನು ಸುಲಭವಾಗಿ ಬೆನ್ನತ್ತಿದ ಆಸ್ಟ್ರೇಲಿಯಾ 44.1 ಓವರ್‌ಗಳಲ್ಲಿ 2 ವಿಕೆಟ್‌ಗೆ 282 ರನ್ ಗಳಿಸಿತು. ಆಸೀಸ್ ಪರ ಲಿಚ್‌ಫೀಲ್ಡ್ 88, ಬೆಥ್ ಮೂನಿ 77 ರನ್ ಗಳಿಸಿದರು.

ಏಷ್ಯಾಕಪ್ ಟಿ20: ಕುಲದೀಪ್, ಅಕ್ಷರ್, ಬುಮ್ರಾ ದಾಳಿಗೆ ಕುಸಿದ ಪಾಕಿಸ್ತಾನ 127/9
ಅಭಿಷೇಕ್, ಸೂರ್ಯ ಸ್ಫೋಟಕ ಬ್ಯಾಟಿಂಗ್: ಭಾರತ 131/3 | 7 ವಿಕೆಟ್‌ಗಳ ಜಯ

ಪಾಕನ್ನು ಹೊಸಕಿ ಹಾಕಿದ ಭಾರತ

ದುಬೈ: ಭಾರತೀಯ ಯೋಧರು ಮತ್ತು ಇತರೆ ವಲಯಗಳಿಂದ ಪಾಕಿಸ್ತಾನದ ವಿರುದ್ಧ ಏಷ್ಯಾ ಕಪ್ ಟಿ20 ಪಂದ್ಯ ಬಹಿಷ್ಕರಿಸಿ ಎಂಬ ಕೂಗುಗಳ ನಡು ವೆಯೇ, ಭಾನುವಾರ ಇಲ್ಲಿ ಭಾರತ- ಪಾಕಿಸ್ತಾನ ನಡುವೆ ಪಂದ್ಯ ನಡೆಯಿತು. ಪಾಕಿಸ್ತಾನವನ್ನು ಎಲ್ಲ ವಿಭಾಗಗಳಲ್ಲೂ ಹಣಿದ ಭಾರತ 7 ವಿಕೆಟ್‌ಗಳಿಂದ ಜಯ ಸಾಧಿಸಿತು. ಈ ವರ್ಷ ನಡೆದ ಚಾಂಪಿಯನ್ಸ್ ಟ್ರೋಫಿಯಲ್ಲೂ ಪಾಕಿಸ್ತಾನದ ವಿರುದ್ಧ ಭಾರತ ಗೆದ್ದಿತ್ತು. ಪಾಕ್ ತಂಡ ತನ್ನ ಎಂದಿನ ಗುಣಮಟ್ಟವನ್ನು ಇತ್ತೀಚೆಗಿನ ವರ್ಷಗಳಲ್ಲಿ ಹೊಂದಿಲ್ಲ ಎನ್ನುವುದು ಈಗ ಮತ್ತೊಮ್ಮೆ ಸಾಬೀತಾಗಿದೆ.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಪಾಕಿಸ್ತಾನ ಅಲ್ಲೇ ಎಡವಿತು. ಆರಂಭದಿಂದಲೇ ಕುಸಿಯತೊಡಗಿದ ಅದು 20 ಓವರ್‌ಗಳಲ್ಲಿ 9 ವಿಕೆಟ್‌ಗೆ 127 ರನ್ ಗಳಿಸಿತು. ಇದನ್ನು ಹಿಂಬಾಲಿಸಿ ಹೊರಟ ಭಾರತ 15.5 ಓವರ್‌ಗಳಲ್ಲಿ 3 ವಿಕೆಟ್‌ಗೆ 131 ರನ್ ಗಳಿಸಿತು. ಇನ್ನೂ 25 ಎಸೆತಗಳು ಬಾಕಿಯಿರುವಂತೆಯೇ ಗೆಲುವು ಸಾಧಿಸಿತು. ತಂಡದ ಪರ ಆರಂಭಿಕ ಅಭಿಷೇಕ್ ಶರ್ಮಾ ಸ್ಫೋಟಕವಾಗಿ ಬ್ಯಾಟ್ ಮಾಡಿ ಬರೀ 13 ಎಸೆತಗಳಲ್ಲಿ 31 ರನ್ ಚಚ್ಚಿದರು. ನಾಯಕ ಸೂರ್ಯಕುಮಾರ್ ಯಾದವ್ 37 ಎಸೆತಗಳಲ್ಲಿ ಅಜೇಯ 47 ರನ್ ಗಳಿಸಿದರು. ಕಡೆಯಲ್ಲಿ ತಿಲಕ್ ವರ್ಮಾ 31 ರನ್ ಬಾರಿಸಿದರು.

ನಿಯಂತ್ರಣ ಸಾಧಿಸಿದ ಭಾರತೀಯ ಬೌಲರ್‌ಗಳು: ಪಾಕ್ ಇನಿಂಗ್ಸ್ ಮೇಲೆ ಭಾರತೀಯ ಬೌಲರ್‌ಗಳು ಪೂರ್ಣ ನಿಯಂತ್ರಣ ಸಾಧಿಸಿದರು. ಎಲ್ಲೂ ಎದುರಾಳಿ ಬ್ಯಾಟರ್‌ಗಳು ಚಿಗಿತುಕೊಳ್ಳಲು ಬಿಡಲಿಲ್ಲ. ಪಾಕ್‌ನ 1ನೇ ವಿಕೆಟ್ ಆರಂಭಿಕ ಸೈಮ್ ಆಯುಬ್ ರೂಪದಲ್ಲಿ 1 ರನ್‌ಗೆ ಬಿತ್ತು. ಆಯುಬ್ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. 6 ರನ್‌ಗಳಾಗಿದ್ದಾಗ 2ನೇ ವಿಕೆಟ್ ಬಿತ್ತು. 64 ರನ್‌ಗಳಾಗುವಾಗ ಅದರ 6ನೇ ವಿಕೆಟ್ ಉದುರಿ ನೂರರೊಳಗೆ ಆಲೌಟಾಗುವ ಅಪಾಯದಲ್ಲಿತ್ತು. 97 ರನ್‌ಗೆ 8ನೇ ವಿಕೆಟ್ ಹೋಯಿತು. ಅಲ್ಲಿಂದ ಪಾಕ್ ಸ್ಥಿತಿ ಸ್ವಲ್ಪ ಸುಧಾರಿಸಿತು. 9 ಮತ್ತು 10ನೇ ವಿಕೆಟ್‌ಗೆ ಸಣ್ಣಸಣ್ಣ ಜೊತೆಯಾಟಗಳು ಕಾಣಿಸಿಕೊಂಡಿದ್ದರಿಂದ ಮೊತ್ತ 127ಕ್ಕೇರಿತು.

ಪಾಕ್ ಪರ ಇನ್ನೊಬ್ಬ ಆರಂಭಿಕ ಸಾಹಿಬ್‌ಜಾದಾ ಫರ್ಹಾನ್ 44 ಎಸೆತಗಳಲ್ಲಿ 40 ರನ್ ಗಳಿಸಿದರು. ಕಡೆಯ ಹಂತದಲ್ಲಿ ವೇಗದ ಬೌಲರ್ ಶಹೀನ್ ಶಾ ಅಫ್ರಿದಿ 16 ಎಸೆತಕ್ಕೆ 33 ರನ್ ಸಿಡಿಸಿ ಅಬ್ಬರಿಸಿದರು. ಇದರಲ್ಲಿ 4 ಸಿಕ್ಸರ್‌ಗಳೇ ಸೇರಿದ್ದವು. ತಂಡದ ಮೊತ್ತ ತುಸು ಬೆಳೆಯಲು ಅಫ್ರಿದಿಯ ಈ ಅಬ್ಬರವೇ ಕಾರಣ. ಭಾರತದ ಲೆಗ್‌ಸ್ಪಿನ್ನರ್ ಕುಲದೀಪ್ ಯಾದವ್ 18 ರನ್ ನೀಡಿ 3, ಎಡಗೈ ಆಫ್‌ಸ್ಪಿನ್ನರ್ ಅಕ್ಷರ್ ಪಟೇಲ್ 18ಕ್ಕೆ 2, ವೇಗಿ ಜಸ್‌ಪ್ರೀತ್ ಬುಮ್ರಾ 28ಕ್ಕೆ 2 ವಿಕೆಟ್ ಪಡೆದರು.

ಪಾಕ್ ಅಚ್ಚರಿಯ ಬ್ಯಾಟಿಂಗ್ ಆಯ್ಕೆ: ದುಬೈ ಕ್ರೀಡಾಂಗಣದ ಪಿಚ್ ಸ್ಪರ್ಧಾತ್ಮಕವಾಗಿದ್ದು, ಬ್ಯಾಟರ್‌ಗಳ ಜೊತೆ ಬೌಲರ್‌ಗಳಿಗೂ ನೆರವು ನೀಡಬಲ್ಲದು. ಆದರೆ ರಾತ್ರಿ ವೇಳೆ ಮಂಜು ಬೀಳುವ ಕಾರಣ ಚೇಸಿಂಗ್ ತಂಡಕ್ಕೆ ಪರಿಸ್ಥಿತಿ ಉಪಯೋಗುತ್ತದೆ. ಪಂದ್ಯಕ್ಕೂ ಮುನ್ನವೇ ಕ್ರಿಕೆಟ್ ಪಂಡಿತರು ಟಾಸ್ ಗೆದ್ದ ತಂಡ ಬೌಲಿಂಗ್ ಆಯ್ದುಕೊಂಡರೆ, ಅರ್ಧ ಪಂದ್ಯ ಗೆದ್ದಂತೆಯೇ ಎಂದು ಸಲಹೆ ನೀಡಿದ್ದರು. ಆದರೆ ಪಾಕಿಸ್ತಾನ ನಾಯಕ ಅಚ್ಚರಿ ಎಂಬಂತೆ ಬ್ಯಾಟಿಂಗ್ ಆಯ್ದುಕೊಂಡರು.

ಸಂಕ್ಷಿಪ್ತ ಸ್ಕೋರ್: ಪಾಕಿಸ್ತಾನ 20 ಓವರ್, 127/9 (ಸಾಹಿಬ್‌ಜಾದಾ ಫರ್ಹಾನ್ 40, ಶಾಹೀನ್ ಅಫ್ರಿದಿ 33, ಕುಲದೀಪ್ ಯಾದವ್ 18ಕ್ಕೆ 3, ಅಕ್ಷರ್ ಪಟೇಲ್ 18ಕ್ಕೆ 2). ಭಾರತ 15.5 ಓವರ್, 131/3 (ಸೂರ್ಯಕುಮಾರ್ 47, ಅಭಿಷೇಕ್ ಶರ್ಮಾ 31, ಸೈಮ್ ಆಯುಬ್ 35ಕ್ಕೆ 3).

ಹಸ್ತಲಾಘವಕ್ಕೆ ಉಭಯ ನಾಯಕರ ನಿರಾಕರಣೆ

ಭಾನುವಾರದ ಟಾಸ್‌ಗೂ ಮುನ್ನ ಭಾರತದ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಪಾಕ್ ನಾಯಕ ಸಲ್ಮಾನ್ ಅಲಿ ಆಘಾ ಹಸ್ತಲಾಘವ ನಿರಾಕರಿಸಿದರು. ಟೂರ್ನಿ ಆರಂಭಕ್ಕೂ ಮುನ್ನ ನಡೆದಿದ್ದ ನಾಯಕರ ಸುದ್ದಿಗೋಷ್ಠಿಯಲ್ಲಿಯೂ ಇವರಿಬ್ಬರು ಹಸ್ತಲಾಘವ ಮಾಡಿರಲಿಲ್ಲ. ಇದೀಗ ಆನ್‌ಫೀಲ್ಡ್‌ನಲ್ಲಿಯೂ ಉಭಯ ನಾಯಕರ ಈ ಸಮರ ಮುಂದುವರಿಯಿತು. ಪಹಲ್ಗಾಮ್ ಉಗ್ರರ ದಾಳಿ ಮತ್ತು ಆಪರೇಶನ್ ಸಿಂದೂರದ ಬಳಿಕ ಇತ್ತಂಡಗಳ ನಡುವೆ ನಡೆಯುತ್ತಿರುವ ಮೊದಲ ಪಂದ್ಯವಾಗಿದೆ. ಪಂದ್ಯವನ್ನು ಬಹಿಷ್ಕರಿಸಿ ಎಂಬ ಕೂಗಿನ ಹಿನ್ನೆಲೆಯಲ್ಲಿ ಪಂದ್ಯ ಮಹತ್ವ ಪಡೆದಿತ್ತು.

57 ಕೆಜಿ ವಿಭಾಗದಲ್ಲಿ ಜೈಸ್ಮಿನ್, 48 ಕೆಜಿ ವಿಭಾಗದಲ್ಲಿ ಮೀನಾಕ್ಷಿಗೆ ಚಿನ್ನ
ವಿಶ್ವ ಚಾಂಪಿಯನ್ ಆದ 10 ಭಾರತೀಯ ಬಾಕ್ಸರ್‌ಗಳ ಪಟ್ಟಿಗೆ ಸೇರ್ಪಡೆ

ಜೈಸ್ಮಿನ್, ಮೀನಾಕ್ಷಿ ವಿಶ್ವ ಬಾಕ್ಸಿಂಗ್ ಚಾಂಪಿಯನ್ಸ್

ಲಿವರ್‌ಪೂಲ್: ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಶಿಪ್ಪಲ್ಲಿ ಭಾರತದ ಮಹಿಳಾ ಬಾಕ್ಸರ್‌ಗಳಾದ ಜೈಸ್ಮಿನ್ ಲಂಬೋರಿಯಾ, ಮೀನಾಕ್ಷಿ ಹೂಡಾ ಐತಿಹಾಸಿಕ ಸಾಧನೆ ಮಾಡಿದ್ದಾರೆ. ಮಹಿಳೆಯರ 57 ಕೆ.ಜಿ ವಿಭಾಗದಲ್ಲಿ ಜಾಸ್ಮಿನ್ ಲಂಬೋರಿಯಾ 2024ರ ಪ್ಯಾರಿಸ್ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತೆ ಪೋಲೆಂಡ್‌ನ ಜೂಲಿಯಾ ಸೆರೆಮೆಟಾ ವಿರುದ್ಧ 4-1ರ ಅಂತರದಲ್ಲಿ ಗೆಲುವು ಸಾಧಿಸಿ ಚಿನ್ನದ ಪದಕಕ್ಕೆ ಕೊರಳೊಡ್ಡಿದ್ದಾರೆ. ಇದೇ ಮೊದಲ ಬಾರಿಗೆ ಬಾಕ್ಸಿಂಗ್ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಸ್ಪರ್ಧಿಸಿದ ಆಟೋ ಚಾಲಕಿ ಪುತ್ರಿ ಮೀನಾಕ್ಷಿ 48 ಕೆಜಿ ವಿಭಾಗದಲ್ಲಿ ಗೆದ್ದರು.

ಮೀನಾಕ್ಷಿ ಹೂಡಾ 48 ಕೆಜಿ ಫೈನಲ್‌ನಲ್ಲಿ, ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ನಾಜಿಮ್ ಕಿಜೈಬೆ ಅವರನ್ನು ಸೋಲಿಸಿದರು. ಕಝುಕಸ್ತಾನದ ಕಿಜೈಬೆ ಈ ವರ್ಷದ ಆರಂಭದಲ್ಲಿ ಸೆರ್ಬಿಯಾದಲ್ಲಿ ಒಂದು ಚಿನ್ನದ ಪದಕ ಸೇರಿದಂತೆ ತಮ್ಮ ವೃತ್ತಿಜೀವನದಲ್ಲಿ ಮೂರು ಮಹಿಳಾ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಶಿಪ್ ಚಿನ್ನಗಳನ್ನು ಗೆದ್ದಿದ್ದಾರೆ. ಆದರೆ ಮೀನಾಕ್ಷಿ ಹೂಡಾ ವಿರುದ್ಧ ಅವರ ಆಟ ನಡೆಯಲಿಲ್ಲ.

ಒಲಿಂಪಿಕ್ ತೂಕ ವಿಭಾಗದಲ್ಲಿ ಸ್ಥಾನ ಪಡೆಯದಿರುವ ನೂಪುರ್ ಶೆವರಾನ್ (80+ ಕೆಜಿ) ಮತ್ತು ಅನುಭವಿ ಪೂಜಾ ರಾಣಿ (80 ಕೆಜಿ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಗೆದ್ದರು. ರೋಚಕ ಫೈನಲ್‌ನಲ್ಲಿ ನೂಪುರ್ ಅವರು ಪೋಲೆಂಡ್‌ನ ಅಗಾಟಾ ಕಜ್‌ಮಾರ್ಸ್ಕಾ ವಿರುದ್ಧ 2-3ರ ನಿಕಟ ಅಂತರದಲ್ಲಿ ಸೋಲನುಭವಿಸಿದರು. ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಶಿಪ್ಪಲ್ಲಿ ನೂಪುರ್ ಅವರ ಮೊದಲ ಪದಕ ಇದು. ಪೂಜಾ ರಾಣಿ 80 ಕೆಜಿ ವಿಭಾಗದಲ್ಲಿ ಕಂಚಿಗೆ ಸಮಾಧಾನಪಟ್ಟರು. ಅವರು ಸೆಮಿಫೈನಲ್‌ನಲ್ಲಿ ಎಮಿಲಿ ಆಸ್ಕ್ವಿತ್ ವಿರುದ್ಧ ಸೋತರು.

ಭಾರತದ ವಿಶ್ವ ಚಾಂಪಿಯನ್ನರು

ಜೈಸ್ಮಿನ್, ಮೀನಾಕ್ಷಿ ಭಾರತದ 9 ಮತ್ತು 10ನೇ ಬಾಕ್ಸಿಂಗ್ ವಿಶ್ವಚಾಂಪಿಯನ್‌ಗಳಾದರು. ಇವರಿಗೂ ಮುನ್ನ ಮೇರಿ ಕೋಮ್ (2002, 2005, 2006, 2008, 2010 ಮತ್ತು 2018), ನಿಖತ್ ಜರೀನ್ (2022 ಮತ್ತು 2023), ಸರಿತಾ ದೇವಿ (2006), ಜೆನ್ನಿ (2006), ಕೆ.ಸಿ.ಲೇಖಾ (2006), ಲವ್ಲಿನಾ ಬೋರ್ಗೋಹೇನ್ (2023) ಮತ್ತು ಸಾವೀಟಿ ಬೂರಾ (2023) ಗೆದ್ದಿದ್ದರು.

ಆಂಧ್ರ ಕ್ರಿಕೆಟ್‌ಗೆ ಕಿವೀಸ್‌ನ ಸ್ಟೆಡ್ ಕೋಚ್

ಹೈದರಾಬಾದ್: ನ್ಯೂಜಿಲೆಂಡ್ ತಂಡವನ್ನು 2021ರಲ್ಲಿ ಟೆಸ್ಟ್ ವಿಶ್ವ ಚಾಂಪಿಯನ್ ಪಟ್ಟಕ್ಕೇರಿಸಿದ್ದ ವಿಶ್ವವಿಖ್ಯಾತ ಕೋಚ್ ಗ್ಯಾರಿ ಸ್ಟೆಡ್, ಆಂಧ್ರಪ್ರದೇಶ ರಣಜಿ ತಂಡದ ಕೋಚ್ ಆಗಲು ಸಿದ್ಧವಾಗಿದ್ದಾರೆ. ವಿಶ್ವಮಟ್ಟದ ಕೋಚ್‌ವೊಬ್ಬರು ಭಾರತೀಯ ದೇಶೀಯ ತಂಡದ ನೇತೃತ್ವವಹಿಸಿಕೊಳ್ಳುತ್ತಿರುವ ಅಪರೂಪದ ಉದಾಹರಣೆಯಿದು. ಆಂಧ್ರ ಕ್ರಿಕೆಟ್ ಸಂಸ್ಥೆ ಅವರಿಗೆಷ್ಟು ವೇತನ ನೀಡಲಿದೆ ಎಂಬುದು ಕುತೂಹಲಕರ. ನ್ಯೂಜಿಲೆಂಡ್ ಕ್ರಿಕೆಟ್ ಸಂಸ್ಥೆ ಅವರಿಗೆ 2.20 ಕೋಟಿ ರೂ. ವಾರ್ಷಿಕ ವೇತನ ನೀಡುತ್ತಿತ್ತು. ಈ ಬಾರಿಯ ದೇಶೀಯ ಕ್ರಿಕೆಟ್‌ನಲ್ಲಿ ಆಂಧ್ರಕ್ಕೆ ತರಬೇತಿ ನೀಡಲಿದ್ದಾರೆ.

ಸ್ಟೆಡ್ ಸಾಧನೆಗಳು: 2018ರಿಂದ 2025ರವರೆಗೆ ಗ್ಯಾರಿ ಸ್ಟೆಡ್ ಕಿವೀಸ್ ಕೋಚ್ ಆಗಿ ಅಪರೂಪದ ಸಾಧನೆ ಮಾಡಿದ್ದರು. 2021ರಲ್ಲಿ ಕಿವೀಸ್ ತಂಡವನ್ನು ಟೆಸ್ಟ್ ವಿಶ್ವ ಚಾಂಪಿಯನ್ ಪಟ್ಟಕ್ಕೇರಿಸಿದ್ದರು. ಅವರ ಅವಧಿಯಲ್ಲೇ ಕಿವೀಸ್ ತಂಡ 2019ರಲ್ಲಿ ಏಕದಿನ ವಿಶ್ವಕಪ್ ಫೈನಲ್‌ಗೇರಿತ್ತು. 2021ರಲ್ಲಿ ಟಿ20 ವಿಶ್ವಕಪ್ ಫೈನಲ್‌ಗೇರಿತ್ತು. ಈ ವರ್ಷ ಚಾಂಪಿಯನ್ಸ್ ಟ್ರೋಫಿ ಫೈನಲ್‌ಗೆ ತಲುಪಿ ಭಾರತದ ವಿರುದ್ಧ ಸೋತಿತ್ತು.

ಹಾಂಕಾಂಗ್ ಬ್ಯಾಡ್ಮಿಂಟನ್: ಚಿರಾಗ್-ಸಾತ್ವಿಕ್ ರನ್ನರ್ ಅಪ್

ಹಾಂಕಾಂಗ್: ಬಿಡಬ್ಲ್ಯುಎಫ್ ವಿಶ್ವ ಸೂಪರ್ 500 ಹಾಂಕಾಂಗ್ ಬ್ಯಾಡ್ಮಿಂಟನ್ ಓಪನ್ ಟೂರ್ನಿಯಲ್ಲಿ ಭಾರತದ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಸೋತು ರನ್ನರ್ ಅಪ್ ಸ್ಥಾನ ಪಡೆದಿದೆ. ಭಾನುವಾರ ನಡೆದ ಫೈನಲ್‌ನಲ್ಲಿ ಚೀನಾದ ಲಿಯಾಂಗ್ ವೀ ಕೆಂಗ್ ಮತ್ತು ವಾಂಗ್ ಚಾಂಗ್ ವಿರುದ್ಧ ಮೂರು ಗೇಮ್‌ಗಳ ತೀವ್ರ ಹೋರಾಟ ನಡೆಸಿದರೂ 21-19, 14-21, 17-21 ಅಂತರದಿಂದ ಪರಾಭವಗೊಂಡರು.

ಎಂಟನೇ ಶ್ರೇಯಾಂಕದ ಭಾರತೀಯ ಜೋಡಿ ಮೊದಲ ಗೇಮ್ ಅನ್ನು ತಮ್ಮದಾಗಿಸಿಕೊಂಡಿತು. ಆದರೆ ಲಿಯಾಂಗ್ ಮತ್ತು ವಾಂಗ್ ಎರಡನೇ ಹಾಗೂ ಅಂತಿಮ ಗೇಮ್ ಅನ್ನು ಗೆದ್ದುಕೊಂಡರು. ಪಂದ್ಯ 61 ನಿಮಿಷಗಳಲ್ಲಿ ಮುಕ್ತಾಯ ಕಂಡಿತು. ಎರಡು ಬಾರಿ ವಿಶ್ವ ಚಾಂಪಿಯನ್‌ಶಿಪ್ ಕಂಚಿನ ಪದಕ ವಿಜೇತರಾದ ಸಾತ್ವಿಕ್ ಮತ್ತು ಚಿರಾಗ್ ಕಳೆದ ವರ್ಷ ಮೇ ತಿಂಗಳಲ್ಲಿ ನಡೆದ ಥಾಯ್ಲೆಂಡ್ ಓಪನ್ ನಂತರ ಬಿಡಬ್ಲ್ಯುಎಫ್ ವಿಶ್ವ ಪ್ರವಾಸದಲ್ಲಿ ಮತ್ತೊಮ್ಮೆ ಪ್ರಶಸ್ತಿ ಗೆಲ್ಲುವಲ್ಲಿ ವಿಫಲವಾಯಿತು. ಸೆಮಿಫೈನಲ್‌ನಲ್ಲಿ ಸಾತ್ವಿಕ್-ಚಿರಾಗ್ ಜೋಡಿಯು ಚೀನಾ ತೈಪೆಯ ಶೆನ್ ಶೆಂಗ್ ಕುವಾನ್- ಲಿನ್ ಬಿಂಗ್ ವೈ ಅವರ ವಿರುದ್ಧ 21-17, 21-15ರ ನೇರ ಗೇಮ್‌ಗಳಿಂದ ಗೆಲುವು ಸಾಧಿಸಿ ಫೈನಲ್ ಪ್ರವೇಶಿಸಿದ್ದರು.

ವಿಟಾಕೀಸ್

ಬ್ರ್ಯಾಟ್‌ನ ಹೊಸ ಗಾನ

ನಿರ್ದೇಶಕ ಶಶಾಂಕ್ ಹಾಗೂ ಡಾರ್ಲಿಂಗ್ ಕೃಷ್ಣ ಕಾಂಬಿನೇಷನ್‌ನಲ್ಲಿ ಮೂಡಿಬರುತ್ತಿರುವ ಬ್ರ್ಯಾಟ್ ಸಿನಿಮಾ ಶೀರ್ಷಿಕೆಯಲ್ಲಿಯೇ ಕುತೂಹಲ ಮೂಡಿಸಿದ್ದು, ಆರಂಭದಿಂದಲೂ ಸಾಕಷ್ಟು ಸದ್ದು ಮಾಡುತ್ತಿದೆ. ಈಗಾಗಲೇ ಟೀಸರ್ ಹಾಗೂ ಹಾಡಿನ ಮೂಲಕ ಎಲ್ಲರ ಗಮನಸೆಳೆದಿದೆ. ಈಗ ಚಿತ್ರದ ಮತ್ತೊಂದು ಸುಮಧುರ ಗಾನ ಬಿಡುಗಡೆಯಾಗಿದೆ. ಗಂಗಿ ಗಂಗಿ... ಎಂಬ ಹಾಡು ಇದಾಗಿದ್ದು, ಬಾಳು ಬೆಳಗುಂದಿ ಹಾಗೂ ಇಂದು ನಾಗರಾಜ್ ದನಿಯಲ್ಲಿ ಮೂಡಿಬಂದಿದೆ. ಬಾಳು ಬೆಳಗುಂದಿ ಅವರೇ ಸಾಹಿತ್ಯ ಬರೆದಿರುವ ಈ ಗೀತೆಗೆ ಅರ್ಜುನ್ ಜನ್ಯ ಸಂಗೀತ ಸಂಯೋಜಿಸಿದ್ದಾರೆ. ಡಾರ್ಲಿಂಗ್ ಕೃಷ್ಣ ಹಾಗೂ ಅನೈರಾ ಈ ಹಾಡಿಗೆ ಹೆಜ್ಜೆ ಹಾಕಿದ್ದಾರೆ.

ಕುರಿಗಾಹಿಯಾಗಿದ್ದ ನಾನು, ಅನೇಕ ಜಾನಪದ ಗೀತೆಗಳನ್ನು ರಚಿಸಿ ಹಾಡುತ್ತಿದ್ದೆ. ಆನಂತರ ಸರಿಗಮಪ ರಿಯಾಲಿಟಿ ಶೋನಲ್ಲಿ ಭಾಗವಹಿಸುವ ಅವಕಾಶ ಸಿಕ್ಕಿತು. ಅರ್ಜುನ್ ಜನ್ಯ ಅವರು ಈ ಚಿತ್ರದಲ್ಲಿ ಹಾಡಲು ಅವಕಾಶ ನೀಡಿದ್ದಾರೆ ಎಂದು ಗಾಯಕ ಬಾಳು ಬೆಳಗುಂದಿ ಸಂತಸದಿಂದ ನುಡಿದರು.

ಬ್ರ್ಯಾಟ್ ಎಂದರೆ ತರ್ಲೆ ಹುಡುಗ ಅಥವಾ ದಾರಿ ತಪ್ಪಿದ ಮಗ ಎನ್ನಬಹುದು. ಇಲ್ಲಿ ಅಪ್ಪ ಮಗನ ಬಾಂಧವ್ಯದ ಸ್ಟೋರಿಯೂ ಬೆರೆತಿದೆ. ಅದನ್ನು ಆ್ಯಕ್ಷನ್ ಥ್ರಿಲ್ಲರ್ ಅಂಶಗಳನ್ನು ಬೆರೆಸಿ ಎಲ್ಲರಿಗೂ ಇಷ್ಟವಾಗುವಂತೆ ಕಟ್ಟಿಕೊಡಲಾಗಿದೆ. ಸಿದ್ ಶ್ರೀರಾಮ್ ಹಾಡಿರುವ ನಾನೇ ನೀನಂತೆ.. ಹಾಡು ಮಿಲಿಯನ್ ಗಟ್ಟಲೆ ವೀಕ್ಷಣೆ ಕಂಡಿದೆ. ಈಗ ಗಂಗಿ ಗಂಗಿ ಹಾಡು ಬಿಡುಗಡೆಯಾಗಿದ್ದು, ಸಂಗೀತ ಪ್ರಿಯರನ್ನು ಸೆಳೆಯಲಿದೆ. ನನ್ನ ಹಾಗೂ ಡಾರ್ಲಿಂಗ್ ಕೃಷ್ಣ ಅವರ ಕಾಂಬಿನೇಷನ್‌ನಲ್ಲಿ ಮೂಡಿಬಂದಿದ್ದ ಕೌಸಲ್ಯ ಸುಪ್ರಜಾ ರಾಮ ಎಲ್ಲರ ಮನ ಗೆದ್ದಿತ್ತು. ಅಂತೆಯೇ ಬ್ರ್ಯಾಟ್ ಸಿನಿಪ್ರಿಯರಿಗೆ ರುಚಿಸಲಿದೆ ಎಂದು ನಿರ್ದೇಶಕ ಶಶಾಂಕ್ ಹೇಳಿದರು.

ಬಹು ವರ್ಷಗಳ ಬಳಿಕ ಈ ಹಾಡಿಗೆ ನೃತ್ಯ ಮಾಡಿದ್ದೇನೆ, ಅದು ತುಂಬಾ ಖುಷಿ ಕೊಟ್ಟಿದೆ. ಈ ಚಿತ್ರದಲ್ಲಿ ನನ್ನ ಲುಕ್ ಕೂಡ ಹೊಸತಾಗಿದೆ. ಗಂಗಿ ಗಂಗಿ.. ಹಾಡು ಇಷ್ಟು ಅದ್ದೂರಿಯಾಗಿ ಮೂಡಿಬರಲು ಚಿತ್ರತಂಡದ ಶ್ರಮವೇ ಕಾರಣ. ಬಾಳು ಬೆಳಗುಂದಿ ಅವರ ಸಾಹಿತ್ಯ, ಗಾಯನ ಹಾಗೂ ಅರ್ಜುನ್ ಜನ್ಯ ಅವರ ಸಂಗೀತ ನಿರ್ದೇಶನ ಸೊಗಸಾಗಿದೆ ಎಂದು ಡಾರ್ಲಿಂಗ್ ಕೃಷ್ಣ ತಿಳಿಸಿದರು.

ಫಸ್ಟ್ ರ್‍ಯಾಂಕ್ ರಾಜು ಚಿತ್ರದ ನಂತರ ಬ್ರ್ಯಾಟ್ ಚಿತ್ರವನ್ನು ನಿರ್ಮಿಸಿದ್ದೇನೆ. ಶಶಾಂಕ್ ಅವರ ಕಥೆ ಕೇಳಿ ಬಹಳ ಇಷ್ಟವಾಯಿತು. ಹಾಗಾಗಿ ನಿರ್ಮಾಣಕ್ಕೆ ಮುಂದಾದೆ. ಡಾರ್ಲಿಂಗ್ ಕೃಷ್ಣ ಹಾಗೂ ಶಶಾಂಕ್ ಅವರ ಕಾಂಬಿನೇಶನ್‌ನ ಮತ್ತೊಂದು ಸೂಪರ್ ಹಿಟ್ ಚಿತ್ರ ಇದಾಗಲಿದೆ ಅಂತ ನಿರ್ಮಾಪಕ ಮಂಜುನಾಥ್ ಕಂದಕೂರ್ ಭರವಸೆ ವ್ಯಕ್ತಪಡಿಸಿದರು. ಡಾರ್ಲಿಂಗ್ ಕಷ್ಣಗೆ ಜತೆಯಾಗಿ ಮನೀಶಾ ಕಂದಕೂರು ಬಣ್ಣಹಚ್ಚಿದ್ದಾರೆ. ಬ್ರ್ಯಾಟ್ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ನವೆಂಬರ್ 14 ರಂದು ಅದ್ದೂರಿಯಾಗಿ ತೆರೆಗೆ ಬರಲಿದೆ.

ನಟನೆಗೆ ಮರಳಿದ ಅಮೂಲ್ಯ

ನಟಿ ಅಮೂಲ್ಯಾ ಮದುವೆಯ ಬಳಿಕ ಯಾವುದೇ ಸಿನಿಮಾದಲ್ಲಿ ಕಾಣಿಸಿಕೊಳ್ಳಲಿಲ್ಲ. ಮುಗುಳು ನಗೆ ಸಿನಿಮಾದಲ್ಲಿ ಅತಿಥಿ ಪಾತ್ರದಲ್ಲಿ ದರ್ಶನ ಕೊಟ್ಟ ಅಮ್ಮು, ಮತ್ತಾವ ಸಿನಿಮಾದಲ್ಲಿಯೂ ನಟಿಸಲಿಲ್ಲ. ಇದರಿಂದ ಅವರ ಅಭಿಮಾನಿಗಳು ಬೇಸರಗೊಂಡಿದ್ದರು. ಇತ್ತೀಚಿಗೆ ಕಿರುತೆರೆಯ ರಿಯಾಲಿಟಿ ಶೋನಲ್ಲಿ ತೀರ್ಪುಗಾರರಾಗಿ ಪಾಲ್ಗೊಂಡಿದ್ದರು. ಕಿರುತೆರೆಯಲ್ಲಿ ಅಮೂಲ್ಯಾ ಅವರನ್ನು ಕಂಡ ಅಭಿಮಾನಿಗಳು ಸಂತಸಗೊಂಡಿದ್ದರು, ತಮ್ಮ ನೆಚ್ಚಿನ ನಟಿಯನ್ನು ಬೆಳ್ಳಿತೆರೆಯಲ್ಲಿ ಕಾಣಲು ಕಾತರರಾಗಿದ್ದರು. ಅಂತೆಯೇ ಈಗ ಅಮೂಲ್ಯಾ ಸಿನಿಮಾಗೆ ಮರಳಿ ಬಂದಿದ್ದಾರೆ. ಮಂಜು ಸ್ವರಾಜ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿರುವ ಪೀಕಬೂ ಸಿನಿಮಾದಲ್ಲಿ ಅಮೂಲ್ಯಾ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಇದು ಮಹಿಳಾ ಪ್ರಧಾನ ಕಥೆಯನ್ನು ಒಳಗೊಂಡಿದ್ದು, ಅಮೂಲ್ಯಾ ವಿಭಿನ್ನ ಪಾತ್ರದಲ್ಲಿ ಬಣ್ಣಹಚ್ಚಿದ್ದಾರೆ. ಸದ್ಯ ಈ ಸಿನಿಮಾದ ಟೀಸರ್ ರಿಲೀಸ್ ಆಗಿದ್ದು, ಸಿನಿಪ್ರಿಯರನ್ನು ಸೆಳೆದಿದೆ. ಅಮೂಲ್ಯಾ ಚಾರ್ಲಿ ಚಾಪ್ಲಿನ್ ರೀತಿಯಲ್ಲಿ ನಟಿಸುತ್ತಾ ನಗಿಸುವ ಪ್ರಯತ್ನ ಮಾಡಿದ್ದಾರೆ. ಪೀಕಬೂ ಎಂದರೆ ಮಕ್ಕಳನ್ನು ನಗಿಸಲು ಬಳಸುವ ಪದ, ಹಾಗಾಗಿ ಇಲ್ಲಿ ಅಮೂಲ್ಯಾ ಕಾಮಿಡಿ ಸನ್ನಿವೇಶದ ಮೂಲಕವೂ ಮನಗೆಲ್ಲಲಿದ್ದಾರೆ ಎಂಬುದು ಟೀಸರ್‌ನಿಂದ ಸ್ಪಷ್ಟವಾಗುತ್ತದೆ. ಶ್ರೀಕೆಂಚಾಂಬಾ ಫಿಲಂಸ್ ಬ್ಯಾನರ್‌ನಲ್ಲಿ ಗಣೇಶ್ ಕೆಂಚಾಂಬಾ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಈಗಾಗಲೇ ಪೀಕಬೂ ಚಿತ್ರದ ಪ್ರೀ ಪ್ರೊಡಕ್ಷನ್ ಕೆಲಸಗಳು ಮುಕ್ತಾಯವಾಗಿದ್ದು, ಶೀಘ್ರದಲ್ಲಿಯೇ ಸಿನಿಮಾದ ಶೂಟಿಂಗ್ ಆರಂಭವಾಗಲಿದೆ.

ತೆರೆಗೆ ಸಿದ್ಧವಾದ ಜೊತೆಯಾಗಿ ಹಿತವಾಗಿ

ಚಂದನವನದಲ್ಲಿ ಮತ್ತೊಂದು ಪ್ರೇಮಕಥೆಯ ಸಿನಿಮಾ ತೆರೆಗೆ ಬರಲು ಸಿದ್ಧವಾಗಿದೆ. ಜೊತೆಯಾಗಿ ಹಿತವಾಗಿ ಶೀರ್ಷಿಕೆಯ ಈ ಸಿನಿಮಾ ಪೋಸ್ಟರ್ ಮೂಲಕವೇ ಸಿನಿಪ್ರಿಯರ ಮನಗೆದ್ದಿದೆ. ಹಾಗಂತ ಇದು ಪ್ರೇಮಕಥೆಗೆ ಸೀಮಿತವಾಗಿಲ್ಲ, ಇಲ್ಲಿ ಅಪ್ಪ ಮಗನ ಸೆಂಟಿಮೆಂಟ್ ಸ್ಟೋರಿಯೂ ಬೆರೆತಿದೆ. ಜೊತೆಯಾಗಿ ಹಿತವಾಗಿ, ಶಿವಣ್ಣ ಅಭಿನಯದ ಆನಂದ್ ಸಿನಿಮಾದ ಹಾಡಿನ ಸಾಲಿನಿಂದ ಆಯ್ದುಕೊಳ್ಳಲಾಗಿದೆ. ಈ ಹಾಡಿನ ಸಾಲನ್ನೇ ಟೈಟಲ್ ಆಗಿ ಇಡುವುದಕ್ಕೂ ಒಂದು ಕಾರಣವಿದೆ, ಅದುವೇ ಈ ಸಿನಿಮಾದ ನಾಯಕ ಅಗಸ್ತ್ಯ ದೊಡ್ಮನೆಯ ಅಪ್ಪಟ ಅಭಿಮಾನಿ. ಹಾಗಾಗಿ ಇದೇ ಟೈಟಲ್ ಅನ್ನು ಸಿನಿಮಾಗೆ ಇಡಲಾಗಿದೆ. ಕಥೆ ಮಾಡಿಕೊಂಡಾಗ ಒಂದೇ ಒಂದು ಸಲ ಎಂಬ ಟೈಟಲ್ ಇಡಲಾಗಿತ್ತು. ಬಳಿಕ ಕಥೆಗೆ ತಕ್ಕಂತೆ ಶೀರ್ಷಿಕೆ ಬದಲಾವಣೆ ಮಾಡಲಾಗಿತ್ತು. ಮಕ್ಕಳಿಗೆ ಮನೆಯಲ್ಲಿ ತುಂಬಾ ಫ್ರೀಡಂ ಕೊಟ್ಟರೆ ಏನಾಗುತ್ತದೆ. ತ್ರಿವ್ರಾ ಕಟ್ಟು ಪಾಡುಗಳನ್ನು ವಿಧಿಸಿದರು ಎಂಬುದನ್ನು ಚಿತ್ರದಲ್ಲಿ ಎಲ್ಲರಿಗೂ ಮನಮುಟ್ಟುವಂತೆ ಹೇಳಲಾಗಿದೆ.

ಈ ಹಿಂದೆ ಹಲವು ಸಿನಿಮಾಗಳಲ್ಲಿ ತಾಂತ್ರಿಕ ವಿಭಾಗದಲ್ಲಿ ಕಾರ್ಯನಿರ್ವಹಿರುವ ಅಗಸ್ತ್ಯ ಈ ಚಿತ್ರದ ನಾಯಕನಾಗಿ ನಟಿಸಿದ್ದಾರೆ. ಸುವಾರ್ತಾ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಅಪ್ಪನ ಪಾತ್ರದಲ್ಲಿ ಆನಂದ್ ನೀನಾಸಂ ಅಭಿನಯಿಸಿದ್ದು, ಉಳಿದಂತೆ ಚೇತನ್ ದುರ್ಗಾ, ಬಳ್ಳಾರಿ ಅರ್ಜುನ್, ಸಲೋಮಿ ಡಿಸೋಜಾ, ಭೂಮಿಕಾ ದೇಶಪಾಂಡೆ, ವಿನಾಯಕ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಪಂಚಭಾಷೆಯಲ್ಲಿ ವಾಯುಪುತ್ರ

ಅನಿಮೇಶನ್‌ನಲ್ಲಿ ಮೂಡಿಬಂದ ಮಹಾವತಾರ ನರಸಿಂಹ ಭರ್ಜರಿ ಯಶಸ್ಸು ಪಡೆಯಿತು. ಬಾಕ್ಸ್ ಆಫೀಸ್‌ನಲ್ಲಿ ನಾನೂರು ಕೋಟಿಗೂ ಹೆಚ್ಚು ಗಳಿಕೆ ಕಂಡಿತು. ಈಗ ಮತ್ತೊಂದು ಅನಿಮೇಶನ್ ಸಿನಿಮಾ ತೆರೆಗೆ ಬರಲು ಸಿದ್ಧವಾಗಿದೆ. ವಾಯುಪುತ್ರ ಶೀರ್ಷಿಕೆಯಲ್ಲಿ ಮೂಡಿಬರುತ್ತಿರುವ ಈ ಸಿನಿಮಾ ಪೌರಾಣಿಕ ಕಥೆಯಾಧಾರಿಸಿ ಸಿದ್ಧವಾಗಿದೆ. ವೀರ ಹನುಮನ ಸಾಹಸ ಕಥೆ ಇಲ್ಲಿದ್ದು, ತೆರೆಯಲ್ಲಿ ರೋಚಕವಾಗಿ ಕಟ್ಟಿಕೊಡಲಾಗಿದೆ. ಸಿತಾರಾ ಎಂಟರ್‌ಟೇನ್‌ಮೆಂಟ್ ಮತ್ತು ಫಾರ್ಚೂನ್ ಫೋರ್ ಸಿನಿಮಾಸ್ ಬ್ಯಾನರ್‌ನಲ್ಲಿ ನಾಗವಂಶಿ ಹಾಗೂ ಸಾಯಿ ಸೌಜನ್ಯಾ ನಿರ್ಮಿಸಿರುವ ವಾಯುಪುತ್ರ ಸಿನಿಮಾವನ್ನು, ಚಂದೂ ಮೊಂಡೆಟಿ ನಿರ್ದೇಶಿಸಿದ್ದಾರೆ. ಈ ಹಿಂದೆ ಕಾರ್ತಿಕೇಯ, ಕಾರ್ತಿಕೇಯ 2 ಹಾಗೂ ತಂಡೇಲ್ ಸಿನಿಮಾಗಳನ್ನು ನಿರ್ದೇಶಿಸಿ ಪ್ರಸಿದ್ಧಿ ಪಡೆದಿರುವ ಚಂದೂ ಮೊಂಡೆಟಿ ಈ ಚಿತ್ರಕ್ಕೂ ಆ್ಯಕ್ಷನ್ ಕಟ್ ಹೇಳಿರುವುದು ಸಿನಿಮಾದ ಬಗ್ಗೆ ಕುತೂಹಲ ಮೂಡಿಸಿದೆ.

ವಾಯುಪುತ್ರ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ತೆಲುಗು, ಕನ್ನಡ, ತಮಿಳು, ಹಿಂದಿ ಹಾಗೂ ಮಲೆಯಾಳಂ ಭಾಷೆಯಲ್ಲಿ ನಿರ್ಮಾಣವಾಗಿದೆ.

ಮನಗೆದ್ದ ಸೋಲ್ ಮೇಟ್ಸ್

ಪಿ.ವಿ.ಶಂಕರ್ ನಿರ್ದೇಶನದ ಸೋಲ್ ಮೇಟ್ಸ್ ಸಿನಿಮಾದ ಟ್ರೇಲರ್ ರಿಲೀಸ್ ಆಗಿದೆ. ಪರಿಸರ ಕಾಳಜಿ ಸಾರುವ ಸಂದೇಶ ಹೊತ್ತ ಸಿನಿಮಾ ಇದಾಗಿದ್ದು, ಅದಕ್ಕೆ ಮನರಂಜನೆ ಬೆರೆಸಿ ಕಟ್ಟಿಕೊಡಲಾಗಿದೆ. ಪರಿಸರ ಪ್ರೇಮಿ ಎಂಬ ಟ್ಯಾಗ್ ಲೈನ್ ಈ ಸಿನಿಮಾಕ್ಕಿದೆ.

ಶ್ರೀಜಿತ್ ಸೂರ್ಯ, ಪ್ರಸನ್ನ ಶೆಟ್ಟಿ, ರಜನಿ, ಯಶ್ವಿಕಾ ನಿಷ್ಕಲಾ, ಅಲ್ಮಾಸ್, ಯಶ್ ಶೆಟ್ಟಿ, ಅರವಿಂದ್ ರಾವ್, ಶರತ್ ಲೋಹಿತಾಶ್ವ, ಅರುಣಾ ಬಾಲರಾಜ್, ಪ್ರಶಾಂತ್ ನಟನ, ಅರಸು ಮಹಾರಾಜ್, ಗೌತಮ್, ತಾರಕ್, ನವೀನ್.ಡಿ.ಪಡ್ಮಿಲ್ ಮುಂತಾದವರು ಈ ಸಿನಿಮಾದಲ್ಲಿ ಅಭಿನಯಿಸಿದ್ದಾರೆ.

ಪರಿಸರ ಕಾಳಜಿ ಸಾರುವ ಕುರಿತ ಕಥೆ ಇಲ್ಲಿದ್ದು, ಅದಕ್ಕೆ ಲವ್, ಆ್ಯಕ್ಷನ್, ಥ್ರಿಲ್ಲರ್ ಅಂಶಗಳನ್ನು ಬೆರೆಸಿ ಕಟ್ಟಿಕೊಡಲಾಗಿದೆ. ನಾನು ಚಿಕ್ಕವನಿದ್ದಾಗ ಕ್ರಿಕೆಟ್ ಬ್ಯಾಟಿಗಾಗಿ ಒಂದು ಮರ ಕಡಿದಿದ್ದೆ. ಅದಕ್ಕಾಗಿ ನಾನು ತುಂಬಾ ಪಶ್ಚಾತ್ತಾಪ ಪಟ್ಟಿದ್ದೆ, ಇದೇ ಈ ಚಿತ್ರದ ಕಥೆಗೆ ಸ್ಪೂರ್ತಿಯಾಗಿದೆ ಎಂದು ನಿರ್ದೇಶಕ ಪಿ.ವಿ.ಶಂಕರ್ ತಿಳಿಸಿದರು.

ಇದು ಜಂಗಲ್ ಮಂಗಲ್‌ನಂತಹ ಸಿನಿಮಾ, ಇದರಲ್ಲಿ ನಾನು ಸುಪಾರಿ ಕಿಲ್ಲರ್ ಪಾತ್ರ ಮಾಡಿದ್ದೇನೆ. ಆದರೆ ಇದು ಕೇವಲ ವಿಲನ್ ಪಾತ್ರವಲ್ಲ. ಚಿತ್ರದ ಕ್ಲೈಮ್ಯಾಕ್ಸ್ ನಡೆಯುವುದೇ ವಿಲನ್ ಮೂಲಕ ಎನ್ನುವುದು ಇದರಲ್ಲಿನ ವಿಶೇಷವಾಗಿದೆ ಎಂದು ಯಶ್ ಶೆಟ್ಟಿ ತಮ್ಮ ಪಾತ್ರದ ಬಗ್ಗೆ ತಿಳಿಸಿದರು.

ನಾನು ಸತ್ಯ ಎಂಬ ಪಾತ್ರವನ್ನು ನಿರ್ವಹಿಸಿದ್ದು, ಹೆಸರಿಗೆ ತಕ್ಕಂತೆ ಆತ ಸತ್ಯವಂತನೇ ಆಗಿರುತ್ತಾನೆ. ಅಲ್ಲದೆ ಆತ ಮಹಾ ಪರಿಸರ ಪ್ರೇಮಿಯೂ ಹೌದು ಎಂದು ಶ್ರೀಜಿತ್ ಹೇಳಿದರು. ಯಶ್ವಿಕಾ ನಿಷ್ಕಲಾ ನಾಕಿಯಾಗಿ ಬಣ್ಣಹಚ್ಚಿದ್ದು, ಮುಗ್ಧ ಮನಸಿನ ಹುಡುಗಿಯಾಗಿ ಕಾಣಿಸಿಕೊಂಡಿದ್ದಾರೆ. ನಾದಬ್ರಹ್ಮ ಹಂಸಲೇಖ ಅವರು ಸಂಗೀತ ಸಂಯೋಜಿಸಿರುವುದು ಸಿನಿಮಾದ ವಿಶೇಷವಾಗಿದೆ. ಜಿ.ಆರ್. ಅರ್ಚನಾ ಹಾಗೂ ಶಂಕರ್ ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ಸೋಲ್‌ಮೇಟ್ಸ್ ಇದೇ ವಾರ ತೆರೆಗೆ ಬರಲಿದೆ.